ಏಪ್ರಿಲ್ 5, 2026

41ನೇ ವರ್ಷದಲ್ಲಿ

http//policenews.news Police News
police_news

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2031

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹ 20/-



## ಮಂಗಳೂರಿನಲ್ಲಿ ಮತ್ತೆ ಝಳಪಿಸಿದ ಲಾಂಗ್-ಮಚ್ಚು

# ರೌಡಿಶೀಟರ್ ಟಾರ್ಗೆಟ್ ಆರಿಫ್ ಬರ್ಬರ ಹತ್ಯೆ!




## ಬಾಲಕನಿಂದ ಬರ್ಬರವಾಗಿ ಕೊಲೆಯಾದ ಅಕ್ಕ-ತಮ್ಮ!

## ಕಸ ಹಾಕುವ ವಿಚಾರ ಗಲಾಟೆಗೆ ತಿರುಗಿ ಹತ್ಯೆ!



## ನಡುರಸ್ತೆಯಲ್ಲಿ ಕುಡುಗೋಲಿನಿಂದ ಪತ್ನಿಯ ಕತ್ತು ಕತ್ತರಿಸಿದ ಪಾಪಿ!





## ನೇಣು ಬಿಗಿದ ಸ್ಥಿತಿಯಲ್ಲಿ ಎಂಟು ತಿಂಗಳ ಗರ್ಭಿಣಿ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)


**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**


# 5 ಪೈಸೆ ಆರೋಪ... 40 ವರ್ಷಗಳ ಹೋರಾ... ಕೊನೆಗೆ ನ್ಯಾಯ!

ದೆಹಲಿ ಸಾರಿಗೆ ನಿಗಮದ (DTC) ಬಸ್ ಕಂಡಕ್ಟರ್ ರಣವೀರ್ ಸಿಂಗ್ ಯಾದವ್ ಅವರ ಕಥೆ, ನ್ಯಾಯ ವ್ಯವಸ್ಥೆಯ ವಿಳಂಬ ಎಷ್ಟು ದೊಡ್ಡ ಮಾನವೀಯ ಬೆಲೆಯನ್ನು ಕೇಳುತ್ತದೆ ಎಂಬುದಕ್ಕೆ ಕಣ್ಣಿಗೆ ಕಟ್ಟುವ ಉದಾಹರಣೆ. ಕೇವಲ 5 ಪೈಸೆ ಹೆಚ್ಚುವರಿ ಶುಲ್ಕ ವಿಧಿಸಿದ ಆರೋಪ ಇದು ಕೇಳಲು ಅತಿ ಸಣ್ಣ ವಿಷಯ. ಆದರೆ ಇದೇ ಆರೋಪ ಅವರ ಜೀವನದ 40 ವರ್ಷಗಳನ್ನು ನ್ಯಾಯಾಲಯದ ಹಾದಿಯಲ್ಲಿ ಕಳೆಸಿತು.

ಈ ಘಟನೆ 1973ರಲ್ಲಿ ಆರಂಭವಾಗುತ್ತದೆ. ಯುವಕನಾಗಿದ್ದ ರಣವೀರ್ ಸಿಂಗ್, ಕುಟುಂಬದ ಹೊಣೆ ಹೊತ್ತಿದ್ದ ಸಮಯ. ಅವರು ಡಿಟಿಸಿಯಲ್ಲಿ ಬಸ್ ಕಂಡಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಒಂದು ದಿನ, ಪ್ರಯಾಣಿಕೆಯಾಗಿದ್ದ ಮಹಿಳೆ 10 ಪೈಸೆ ಟಿಕೆಟ್‌ಗೆ 15 ಪೈಸೆ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಿದರು. ಅಂದರೆ, 5 ಪೈಸೆ ಹೆಚ್ಚುವರಿ ಪಡೆದಿದ್ದಾರೆ ಎಂಬ ದೂರು. ಈ ಸಣ್ಣ ಆರೋಪವೇ ಅವರ ಬದುಕನ್ನು ತಲೆಕೆಳಗಾಗುವಂತೆ ಮಾಡಿತು. ತನಿಖೆ ನಡೆಯಿತು, ವಿಚಾರಣೆಗಳು ನಡೆದವು, ಮತ್ತು ಕೊನೆಗೆ ಅವರನ್ನು ಕೆಲಸದಿಂದ ವಜಾಗೊಳಿಸಲಾಯಿತು.

ಒಂದು ಕುಟುಂಬಕ್ಕೆ ಆದಾಯದ ಮೂಲ ಕಳೆದುಕೊಳ್ಳುವುದು ಎಂದರೆ ಎಷ್ಟು ದೊಡ್ಡ ಹೊಡೆತ ಎಂಬುದು ಸುಲಭವಾಗಿ ಊಹಿಸಬಹುದು. ರಣವೀರ್ ಅವರಿಗೂ ಅದೇ ಪರಿಸ್ಥಿತಿ. ಅವರ ಮಕ್ಕಳು ಕೂಡ 'ನೀವು ತಪ್ಪು ಮಾಡಿದ್ದೀರಾ?' ಎಂದು ಕೇಳುವ ಸ್ಥಿತಿ ಬಂದಿತ್ತು. ಸಮಾಜದ ಮುಂದೆ, ಕುಟುಂಬದ ಮುಂದೆ, ಅವರು ನಿರಂತರವಾಗಿ ತಮ್ಮ ನಿರ್ದೋಷಿತ್ವವನ್ನು ಸಾಬೀತುಪಡಿಸಲು ಹೋರಾಡಬೇಕಾಯಿತು. ಆದರೆ ಅವರು ಹಿಂಜರಿಯಲಿಲ್ಲ. 1990 ರಲ್ಲಿ ಕಾರ್ಮಿಕ ನ್ಯಾಯಾಲಯದ ಮೊರೆ ಹೋದರು. ಅಲ್ಲಿ ಅವರಿಗೆ ಜಯ ಸಿಕ್ಕಿತು. ನ್ಯಾಯಾಲಯವು ಅವರ ವಜಾವನ್ನು ಕಾನೂನುಬಾಹಿರ ಎಂದು ಘೋಷಿಸಿತು.






ಇದು ಅವರ ಹೋರಾಟಕ್ಕೆ ಮೊದಲ ಬೆಳಕು. ಆದರೆ ಕಥೆ ಅಲ್ಲಿ ಮುಗಿದಿಲ್ಲ. ಡಿಟಿಸಿ ಈ ತೀರ್ಪನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತು. ಹೀಗಾಗಿ, ಪ್ರಕರಣ ಮತ್ತಷ್ಟು ವರ್ಷಗಳ ಕಾಲ ಮುಂದುವರಿಯಿತು.

ಈ ನಡುವೆ ದೇಶದಲ್ಲಿ ದೊಡ್ಡ ಬದಲಾವಣೆಗಳು ನಡೆದವು. 1994ರಲ್ಲಿ 5 ಪೈಸೆ ನಾಣ್ಯವೇ ರದ್ದುಗೊಂಡಿತು. ಅಂದರೆ, ಯಾವ ಕಾರಣಕ್ಕಾಗಿ ಈ ಹೋರಾಟ ಆರಂಭವಾಯಿತೋ, ಆ ಕರೆನ್ಸಿಯೇ ಇಲ್ಲದಂತಾಯಿತು. ಆದರೆ ರಣವೀರ್ ಅವರ ನೋವು, ಹೋರಾಟ ಮಾತ್ರ ಮುಂದುವರಿಯುತ್ತಲೇ ಇತ್ತು.

ವಯಸ್ಸು ಹೆಚ್ಚಾಗುತ್ತಿದ್ದಂತೆ, ಜೀವನದ ಇತರ ಸಿಹಿ ಕ್ಷಣಗಳನ್ನು ಅವರು ಕಳೆದುಕೊಂಡರು. ಸ್ನೇಹಿತರು ನಿವೃತ್ತಿ ಜೀವನವನ್ನು

☞ 3

# ಮರ್ಯಾದಾಗೇಡು ಹತ್ಯೆ ನಿಷೇಧ ವಿಧೇಯಕ: ಸಮಾನತೆಯ ಸಮಾಜದತ್ತ ಕರ್ನಾಟಕದ ದೃಢ ಹೆಜ್ಜೆ



ಸಂಪಾದಕ
**ಎಂ. ರಾಹುಲ್**

ಕರ್ನಾಟಕ ಸರ್ಕಾರವು ‘ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ, ಇವ ನಮ್ಮವ) ವಿಧೇಯಕ, 2026’ ಅನ್ನು ಅನುಮೋದಿಸಿರುವುದು ರಾಜ್ಯದ ಸಾಮಾಜಿಕ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿ ಗುರುತಿಸಿಕೊಳ್ಳುತ್ತದೆ. ಜಾತಿ ಆಧಾರಿತ ದ್ವೇಷ, ಅಸಹಿಷ್ಣುತೆ ಮತ್ತು ಅಂತರ್ಜಾತಿ ವಿವಾಹಗಳ ವಿರುದ್ಧ ನಡೆಯುತ್ತಿರುವ ಮರ್ಯಾದಾಗೇಡು ಹತ್ಯೆಗಳಂತಹ ಅಮಾನವೀಯ ಕೃತ್ಯಗಳನ್ನು ನಿಯಂತ್ರಿಸಲು ಈ ಕಾನೂನು ರೂಪುಗೊಂಡಿದೆ. ವ್ಯಕ್ತಿಯ ವೈಯಕ್ತಿಕ ಆಯ್ಕೆ, ಪ್ರೀತಿ ಮತ್ತು ಜೀವನ ಸಂಗಾತಿಯನ್ನು ಆರಿಸುವ ಹಕ್ಕು ಸಂವಿಧಾನಾತ್ಮಕವಾಗಿ ಮಾನ್ಯವಾಗಿದ್ದು, ಅದನ್ನು ರಕ್ಷಿಸುವ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರ ಈ ವಿಧೇಯಕದ ಮೂಲಕ ಸ್ಪಷ್ಟವಾಗಿ ಹೊತ್ತುಕೊಂಡಿದೆ. ಇಂತಹ ಕಾನೂನನ್ನು ಜಾರಿಗೆ ತರುವ ಮೂಲಕ ದೇಶದಲ್ಲೇ ಮೊದಲ ರಾಜ್ಯವೆಂಬ ಹೆಗ್ಗಳಿಕೆಯನ್ನು ಕರ್ನಾಟಕ ಪಡೆದಿರುವುದು ರಾಜ್ಯದ ಪ್ರಗತಿಪರ ಚಿಂತನೆಗೆ ಸಾಕ್ಷಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಜಾತಿ ಆಧಾರಿತ ಹಿಂಸೆ ಪ್ರಕರಣಗಳು ರಾಜ್ಯದಲ್ಲಿ ದಿನೇದಿನೇ ಹೆಚ್ಚುತ್ತಿರುವುದು ಗಂಭೀರ ಚಿಂತೆಗೆ ಕಾರಣವಾಗಿದೆ. ವಿಶೇಷವಾಗಿ ಜಾತಿ ಕಟ್ಟಳೆಗಳನ್ನು ಮೀರಿ ಪ್ರೀತಿ ಮಾಡಿಕೊಂಡು ವಿವಾಹವಾಗುವ ಯುವ ಜೋಡಿಗಳು ತಮ್ಮದೇ ಕುಟುಂಬದವರಿಂದ ಬೆದರಿಕೆ, ಹಲ್ಲೆ ಮತ್ತು ಕೊಲೆಗಳಂತಹ ಕ್ರೌರ್ಯಗಳಿಗೆ ಒಳಗಾಗುತ್ತಿರುವುದು ಸಮಾಜದ ದುರಂತಕರ ವಾಸ್ತವವಾಗಿದೆ. ‘ಮರ್ಯಾದೆ’ ಎಂಬ ಹೆಸರಿನಲ್ಲಿ ನಡೆಯುವ ಈ ಹತ್ಯೆಗಳು ನಿಜವಾಗಿ ಮಾನವೀಯ ಮೌಲ್ಯಗಳ ಪತನದ ಪ್ರತಿಬಿಂಬವಾಗಿದ್ದು, ಜಾತಿ ಶ್ರೇಷ್ಠತೆಯ ಭ್ರಮೆ ಮತ್ತು ಸಂಪ್ರದಾಯದ ತಪ್ಪು ಅರ್ಥೈಸುವಿಕೆಯ ಫಲವಾಗಿದೆ. ಹುಬ್ಬಳ್ಳಿಯ ಇನಾಂ ವೀರಾಪುರದಲ್ಲಿ ನಡೆದ ಗರ್ಭಿಣಿ ಮಗಳನ್ನು ತಂದೆಯೇ ಕೊಂದ ಘಟನೆ ಈ ಸಮಸ್ಯೆಯ ಗಂಭೀರತೆಯನ್ನು ರಾಜ್ಯದ ಮುಂದೆ ತೆರೆದಿಟ್ಟಿತು. ಪರಿಶಿಷ್ಟ ಜಾತಿಗೆ ಸೇರಿದ ಯುವಕನನ್ನು ಮದುವೆಯಾಗಿದ್ದ ಕಾರಣಕ್ಕೆ ತನ್ನದೇ ಮಗಳನ್ನು ಕೊಂದು ಹಾಕಿದ ತಂದೆಯ ಕ್ರೌರ್ಯ ಸಮಾಜದ ಮನಸ್ಸನ್ನು ನಡುಗಿಸುವಂತಿತ್ತು. ಇದು ಕೇವಲ ಒಂದು ಕುಟುಂಬದ ದುರಂತವಲ್ಲ, ಸಮಗ್ರ ಸಮಾಜದ ಮನೋಭಾವದ ಮೇಲೆ ಪ್ರಶ್ನೆ ಎತ್ತಿದ ಘಟನೆ.

ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ **(NCRB)** ವರದಿಗಳ ಪ್ರಕಾರ ದೇಶದಲ್ಲಿ ಮರ್ಯಾದಾಗೇಡು ಹತ್ಯೆಗಳ ಪ್ರಮಾಣ ಹೆಚ್ಚುತ್ತಿರುವುದು ಸ್ಪಷ್ಟವಾಗಿದ್ದು, ಕರ್ನಾಟಕವೂ ಇಂತಹ ಘಟನೆಗಳು ಹೆಚ್ಚಾಗಿರುವ ರಾಜ್ಯಗಳಲ್ಲಿ ಒಂದಾಗಿದೆ ಎಂಬುದು ಆತಂಕಕಾರಿ ಸಂಗತಿ. ಜಾತಿ ಆಧಾರಿತ ದ್ವೇಷವು ಕೇವಲ ಸಾಮಾಜಿಕ ಅಸಮಾನತೆಯನ್ನು ಮಾತ್ರವಲ್ಲ, ಮಾನವ ಜೀವದ ಮೌಲ್ಯವನ್ನೇ ಪ್ರಶ್ನಿಸುವ ಮಟ್ಟಕ್ಕೆ ತಲುಪಿದೆ. ಕುಟುಂಬದ ‘ಗೌರವ’ವನ್ನು ಉಳಿಸಿಕೊಳ್ಳುವ ಹೆಸರಿನಲ್ಲಿ ನಡೆಯುವ ಈ ಹತ್ಯೆಗಳು ನಿಜವಾಗಿ ಸಮಾಜದ ಅಜ್ಞಾನ ಮತ್ತು ಅಸಹಿಷ್ಣುತೆಯ ಪ್ರತಿಫಲಗಳಾಗಿವೆ. ಪೋಷಕರೇ ತಮ್ಮ ಮಕ್ಕಳ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳದೆ ಹಿಂಸಾತ್ಮಕ ಮಾರ್ಗವನ್ನು ಆರಿಸುವುದು ಮಾನವೀಯತೆ ಕುಸಿತದ ಸಂಕೇತವಾಗಿದೆ.





ಈ ಹಿನ್ನೆಲೆಯಲ್ಲೇ ಹಲವು ಸಾಮಾಜಿಕ ಸಂಘಟನೆಗಳು, ಹೋರಾಟಗಾರರು ಮತ್ತು ಪ್ರಗತಿಪರ ಚಿಂತಕರು ಮರ್ಯಾದಾಗೇಡು ಹತ್ಯೆಗಳನ್ನು ತಡೆಗಟ್ಟಲು ವಿಶೇಷ ಕಾಯ್ದೆಯ ಅಗತ್ಯತೆಯನ್ನು ಒತ್ತಾಯಿಸಿದರು. ಹುಬ್ಬಳ್ಳಿಯ ಘಟನೆಯ ನಂತರ ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿಭಟನೆಗಳು ಜೋರಾಗಿ ನಡೆದವು. ಮಾನ್ಯಳ ಹತ್ಯೆಯನ್ನು ಖಂಡಿಸಿ ನ್ಯಾಯಕ್ಕಾಗಿ ಧ್ವನಿಯೆತ್ತಿದ ಜನತೆ ಸರ್ಕಾರದ ಮೇಲೆ ಒತ್ತಡವನ್ನು ಹೆಚ್ಚಿಸಿತು. ಸಾಮಾಜಿಕ ಜಾಲತಾಣಗಳಲ್ಲಿಯೂ ಈ ವಿಷಯ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಸಾವಿರಾರು ಜನರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಜನವರಿ 1, 2026 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಲಾದ ಮನವಿ ಪತ್ರದ ಮೂಲಕ ಮರ್ಯಾದಾಗೇಡು ಹತ್ಯೆಗಳನ್ನು ತಡೆಗಟ್ಟಲು ಕಠಿಣ ಕಾನೂನು ರೂಪಿಸುವಂತೆ ಒತ್ತಾಯಿಸಲಾಯಿತು. ಈ ಮನವಿಗೆ ಸ್ಪಂದಿಸಿದ ಸರ್ಕಾರ ಕಾನೂನು ತರುವ ಭರವಸೆ ನೀಡಿದ್ದು, ನಂತರ ಸಚಿವ ಸಂಪುಟ ಸಭೆಯಲ್ಲಿ ವಿಧೇಯಕಕ್ಕೆ ಅನುಮೋದನೆ ನೀಡುವ ಮೂಲಕ ತನ್ನ ಬದ್ಧತೆಯನ್ನು ತೋರಿಸಿತು.

ರಾಜ್ಯ ಕಾನೂನು ಸಚಿವ ಹೆಚ್.ಕೆ. ಪಾಟೀಲ್, ಗೃಹ ಸಚಿವ ಡಾ. ಜಿ. ಪರಮೇಶ್ವರ್ ಮತ್ತು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ ಅವರ ಮಾರ್ಗದರ್ಶನದಲ್ಲಿ ಈ ವಿಧೇಯಕ ರೂಪುಗೊಂಡಿದ್ದು, ಇದು ಕೇವಲ ಆಡಳಿತಾತ್ಮಕ ಕ್ರಮವಲ್ಲ, ಸಮಾಜದ ಬೇಡಿಕೆಗೂ ನೀಡಿದ ಪ್ರತಿಕ್ರಿಯೆಯಾಗಿದೆ. ಬಜೆಟ್ ಅಧಿವೇಶನದಲ್ಲಿ ವಿಧೇಯಕವನ್ನು ಮಂಡಿಸಿ ಅಂಗೀಕರಿಸಿರುವುದು ಸರ್ಕಾರದ ದೃಢಸಂಕಲ್ಪವನ್ನು ಮತ್ತಷ್ಟು ಬಲಪಡಿಸಿದೆ. ಮಾನ್ಯಳ ಹೆಸರಿನಲ್ಲಿ ಈ ಕಾನೂನನ್ನು ರೂಪಿಸಬೇಕೆಂಬ ಬೇಡಿಕೆಯೂ ಸಮಾಜದಿಂದ ವ್ಯಕ್ತವಾಗಿದ್ದು, ಇದು ಮರ್ಯಾದಾಗೇಡು ಹತ್ಯೆಗಳಿಗೆ ಬಲಿಯಾದವರ ನೆನಪಿಗೆ ನ್ಯಾಯ ಒದಗಿಸುವ ಪ್ರಯತ್ನವಾಗಿದೆ.

ಈ ಕಾನೂನು ಬಸವಣ್ಣ ಮತ್ತು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಾನತೆಯ ತತ್ವಗಳಿಗೆ ಸಲ್ಲುವ ಗೌರವವಾಗಿದೆ. ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ, ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದ ಈ ಮಹಾನ್ ಚಿಂತಕರ ಆದರ್ಶಗಳು ಈ ವಿಧೇಯಕದಲ್ಲಿ ಪ್ರತಿಬಿಂಬಿಸುತ್ತವೆ. ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲ ಮಾಡಬೇಕೆಂಬ ಅವರ ಕನಸಿಗೆ ಈ ಕಾನೂನು ಮತ್ತೊಂದು ಹೆಜ್ಜೆಯಾಗಿದೆ. ಮರ್ಯಾದಾಗೇಡು ಹತ್ಯೆಗಳಿಗೆ ತುತ್ತಾದ ಅನೇಕ ನಿರಪರಾಧ ಜೀವಗಳಿಗೆ ಇದು ತಾತ್ವಿಕ ನ್ಯಾಯ ಒದಗಿಸುವ ಪ್ರಯತ್ನವಾಗಿದೆ.

ಆದರೆ, ಕಾನೂನು ಮಾತ್ರವೇ ಈ ಸಮಸ್ಯೆಗೆ ಸಂಪೂರ್ಣ ಪರಿಹಾರವಲ್ಲ ಎಂಬುದನ್ನು ಅರಿತುಕೊಳ್ಳುವುದು ಅತ್ಯಂತ ಅಗತ್ಯ. ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಜಾತಿ ಭಾವನೆಗಳನ್ನು ಬದಲಿಸಲು ಮನೋಭಾವದ ಪರಿವರ್ತನೆ ಅಗತ್ಯವಾಗಿದೆ. ಶಿಕ್ಷಣ, ಜಾಗೃತಿ ಮತ್ತು ಮಾನವೀಯ ಮೌಲ್ಯಗಳ ಅರಿವು ಮೂಡಿಸುವ ಮೂಲಕ ಮಾತ್ರ ಈ ಸಮಸ್ಯೆಯನ್ನು ಮೂಲದಿಂದ ನಿವಾರಿಸಬಹುದು. ಕುಟುಂಬಗಳು ತಮ್ಮ ಮಕ್ಕಳ ವೈಯಕ್ತಿಕ ಆಯ್ಕೆಯನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಯುವಜನತೆಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಮಾನವೀಯತೆಗಳ ಮಹತ್ವವನ್ನು ತಿಳಿಸಬೇಕು.

ಸಮಾಜದ ಪ್ರತಿಯೊಬ್ಬರೂ ತಮ್ಮ ಪಾತ್ರವನ್ನು ಅರಿತುಕೊಂಡು ಜಾತಿ ಆಧಾರಿತ ಭೇದಭಾವವನ್ನು ತಿರಸ್ಕರಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಧಾರ್ಮಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಂಸ್ಥೆಗಳು ಈ ದಿಕ್ಕಿನಲ್ಲಿ ಕಾರ್ಯನಿರ್ವಹಿಸಬೇಕು. ಮಾಧ್ಯಮಗಳು ಸಹ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಬಹುದು. ಕಾನೂನು ಜಾರಿಗೆ ಬಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದಾಗ ಮತ್ತು ಸಮಾಜದ ಮನೋಭಾವದಲ್ಲಿ ಬದಲಾವಣೆ ಬಂದಾಗ ಮಾತ್ರ ಮರ್ಯಾದಾಗೇಡು ಹತ್ಯೆಗಳಂತಹ ಕ್ರೌರ್ಯಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯ.

ಒಟ್ಟಿನಲ್ಲಿ, ‘ಮರ್ಯಾದಾಗೇಡು ಹತ್ಯೆ ನಿಷೇಧ ವಿಧೇಯಕ, 2026’ ಕರ್ನಾಟಕವನ್ನು ಸಮಾನತೆ, ನ್ಯಾಯ ಮತ್ತು ಮಾನವೀಯತೆಗಳ ದಾರಿಯಲ್ಲಿ ಮುನ್ನಡೆಸುವ ಮಹತ್ವದ ಹೆಜ್ಜೆಯಾಗಿದೆ. ಇದು ಕೇವಲ ಕಾನೂನು ಪ್ರಸ್ತಾವನೆಯಲ್ಲ, ಸಮಾಜದ ಪರಿವರ್ತನೆಗೆ ದಿಕ್ಕು ತೋರಿಸುವ ಮಾರ್ಗಸೂಚಿಯಾಗಿದೆ. ಈ ಕ್ರಮದಿಂದ ಸಮಸಮಾಜ ನಿರ್ಮಾಣದ ಕನಸು ಇನ್ನಷ್ಟು ಬಲಗೊಂಡಿದ್ದು, ಭವಿಷ್ಯದಲ್ಲಿ ಜಾತಿ ಆಧಾರಿತ ಹಿಂಸೆ ಕಡಿಮೆಯಾಗುವ ನಿರೀಕ್ಷೆ ವ್ಯಕ್ತವಾಗುತ್ತಿದೆ. ರಾಜ್ಯ ಸರ್ಕಾರದ ಈ ದಿಟ್ಟ ನಿರ್ಧಾರವು ದೇಶದ ಇತರ ರಾಜ್ಯಗಳಿಗೂ ಮಾದರಿಯಾಗಲಿ ಎಂಬ ಆಶಯದೊಂದಿಗೆ, ಮಾನವೀಯ ಮೌಲ್ಯಗಳು ಮತ್ತು ಸಮಾನತೆಗಳ ಆಧಾರದ ಮೇಲೆ ಹೊಸ ಸಮಾಜವನ್ನು ನಿರ್ಮಿಸುವತ್ತ ನಾವು ಎಲ್ಲರೂ ಕೈಜೋಡಿಸಬೇಕಾಗಿದೆ.

**-ಸಂ.**

2 ☞

ಆನಂದಿಸುತ್ತಿದ್ದಾಗ, ತೀರ್ಥಯಾತ್ರೆಗಳಿಗೆ ಹೋಗುತ್ತಿದ್ದಾಗ, ರಣವೀರ್ ಮಾತ್ರ ನ್ಯಾಯಾಲಯದ ಮೆಟ್ಟಿಲುಗಳನ್ನು ಹತ್ತಿ ಇಳಿಯುತ್ತಿದ್ದರು. ಈ ಹೋರಾಟದಲ್ಲಿ ಅವರು ಸುಮಾರು 4 ಲಕ್ಷ ರೂಪಾಯಿಗೂ ಹೆಚ್ಚು ಹಣವನ್ನು ಕಾನೂನು ವೆಚ್ಚಗಳಿಗೆ ಖರ್ಚು ಮಾಡಿದರು ಅದು ಆ ಕಾಲದಲ್ಲಿ ದೊಡ್ಡ ಮೊತ್ತ.

2016ರಲ್ಲಿ ಅವರ ಪತ್ನಿ ಹೇಳಿದ್ದ ಮಾತುಗಳು ಮನಸ್ಸಿಗೆ ತಟ್ಟುವಂತಿವೆ: ‘ಇದು 5 ಪೈಸೆಯ ಕಥೆಯಲ್ಲ, ನಮಗೆ ಆಗಿರುವ ಅನ್ಯಾಯ ಲಕ್ಷಾಂತರ ರೂಪಾಯಿಗಳಷ್ಟಿದೆ.’ ನಿಜಕ್ಕೂ, ಇದು ಹಣದ ವಿಷಯಕ್ಕಿಂತ ಹೆಚ್ಚಾಗಿ ಮಾನಸಿಕ ಮತ್ತು ಸಾಮಾಜಿಕ ನೋವಿನ ಕಥೆ.

ಕೊನೆಗೂ, ದೀರ್ಘ ಹೋರಾಟದ ನಂತರ ಹೈಕೋರ್ಟ್‌ನಲ್ಲಿ ರಣವೀರ್ ಸಿಂಗ್ ಯಾದವ್ ಅವರಿಗೆ ನ್ಯಾಯ ಸಿಕ್ಕಿತು. ನ್ಯಾಯಾಲಯವು ಅವರಿಗೆ 30,000 ರೂ. ಪರಿಹಾರ, 1.28 ಲಕ್ಷ ರೂ. ಗ್ರಾಚ್ಯುಟಿ ಮತ್ತು 1.37 ಲಕ್ಷ ರೂ. CPF ಪಾವತಿಸಲು ಆದೇಶಿಸಿತು. ಆದರೆ ವ್ಯಂಗ್ಯವೆಂದರೆ ಅವರು ಖರ್ಚು ಮಾಡಿದ 4 ಲಕ್ಷ ರೂಪಾಯಿಗೆ ಹೋಲಿಸಿದರೆ, ಈ ಪರಿಹಾರ ಅಷ್ಟೇನೂ ದೊಡ್ಡದು ಅಲ್ಲ.

ಈ ಕಥೆ ನಮಗೆ ಒಂದು ದೊಡ್ಡ ಪಾಠ ನೀಡುತ್ತದೆ: **“Justice delayed is justice denied”** ಎಂಬ ಮಾತು ಕೇವಲ ನುಡಿಯಲ್ಲ, ಹಲವರ ಜೀವನದ ಕಹಿ ಸತ್ಯ. ಸಣ್ಣ ತಪ್ಪು ಅಥವಾ ತಪ್ಪು ಆರೋಪವೂ, ಸಮಯಕ್ಕೆ ಸರಿಯಾಗಿ ನ್ಯಾಯ ಸಿಗದಿದ್ದರೆ, ಒಂದು ಜೀವನವನ್ನೇ ಹಾಳುಮಾಡಬಹುದು.

ರಣವೀರ್ ಸಿಂಗ್ ಯಾದವ್ ಅವರ ಹೋರಾಟ ಕೊನೆಗೂ ಗೆಲುವಿನಲ್ಲಿ ಅಂತ್ಯಗೊಂಡರೂ, ಕಳೆದುಹೋದ 40 ವರ್ಷಗಳನ್ನು ಯಾರೂ ಹಿಂದಿರುಗಿಸಲಾರರು.

ಈ ಪ್ರಕರಣ ಇನ್ನೊಂದು ಮಹತ್ವದ ಪ್ರಶ್ನೆಯನ್ನು ಕೂಡ ಎತ್ತುತ್ತದೆ ಸಂಸ್ಥೆಗಳು ತಮ್ಮ ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳುವಾಗ ಎಷ್ಟು ಜವಾಬ್ದಾರಿಯುತವಾಗಿರಬೇಕು ಎಂಬುದು. ಕೇವಲ 5 ಪೈಸೆಯಂತಹ ಅಲ್ಪ ಮೊತ್ತದ ಆರೋಪದ ಆಧಾರದಲ್ಲಿ ತಕ್ಷಣದ ವಜಾ ಕ್ರಮ ಕೈಗೊಳ್ಳುವುದು, ಸಮಗ್ರ ಮತ್ತು ನ್ಯಾಯಸಮ್ಮತ ತನಿಖೆಯಿಲ್ಲದೆ ತೀರ್ಮಾನಿಸುವುದು, ಒಬ್ಬನ ಜೀವನವನ್ನೇ ಹಾಳುಮಾಡುವಂತಾಗಬಹುದು. ಈ ಘಟನೆ ನ್ಯಾಯಾಂಗ ವ್ಯವಸ್ಥೆಯ ವಿಳಂಬದ ಜೊತೆಗೆ, ಆಡಳಿತಾತ್ಮಕ ನಿರ್ಧಾರಗಳಲ್ಲಿ ಮಾನವೀಯತೆ ಮತ್ತು ಸಮತೋಲನದ ಕೊರತೆಯನ್ನೂ ಸ್ಪಷ್ಟಪಡಿಸುತ್ತದೆ.

**ಕಲಬುರಗಿ** ಮಾನವೀಯತೆ ತಲೆತಗ್ಗಿಸುವಂತಹ ಅಮಾನವೀಯ ಘಟನೆ ಕಲಬುರಗಿ ಜಿಲ್ಲೆಯಲ್ಲಿ ನಡೆದಿದೆ. ಅಫಜಲಪುರ ತಾಲೂಕಿನ ಬಳೂರಗಿ ಗ್ರಾಮದ ಸಮೀಪ ನಡುರಸ್ತೆಯಲ್ಲೇ ಪತಿಯೊಬ್ಬ ತನ್ನ ಪತ್ನಿಯನ್ನು ಬರ್ಬರವಾಗಿ ಹತ್ಯೆ ಮಾಡಿರುವುದು ಜನರಲ್ಲಿ ಭೀತಿ ಮತ್ತು ಆಕ್ರೋಶ ಮೂಡಿಸಿದೆ. ಹಾಡುಹಗಲೇ ನಡೆದ ಈ ದುರ್ಘಟನೆ ಕೇವಲ ಒಂದು ಕೊಲೆ ಪ್ರಕರಣವಲ್ಲ, ಸಮಾಜದಲ್ಲಿ ಕುಸಿಯುತ್ತಿರುವ ಮೌಲ್ಯಗಳ ದರ್ಶನವೂ ಆಗಿದೆ. ಪತ್ನಿಯ ಕತ್ತನ್ನು ಕುಡುಗೋಲಿನಿಂದ ಸೀಳಿ ಕೊಲೆ ಮಾಡಿದ ಆರೋಪಿ, ಆಕೆಯ ಶವದ ಮೇಲೆ ಕಾರು ಹರಿಸಿ ವಿಕೃತಿ ಮೆರೆದಿರುವುದು ಈ ಘಟನೆಯನ್ನು ಇನ್ನಷ್ಟು ಭೀಕರವಾಗಿಸಿದೆ.





# ನಡುರಸ್ತೆಯಲ್ಲಿ ಕುಡುಗೋಲಿನಿಂದ ಪತ್ನಿಯ ಕತ್ತು ಕತ್ತರಿಸಿ ಶವದ ಮೇಲೆ ಕಾರು ಹರಿಸಿದ ಪತಿಯ ಕ್ರೂರ ಅಟ್ಟಹಾಸ!

ಮಹಾರಾಷ್ಟ್ರದ ಬಾರಾಮತಿ ಮೂಲದ ಶೈಲಾ (28) ಈ ದುರ್ಘಟನೆಯಲ್ಲಿ ಪ್ರಾಣ ಕಳೆದುಕೊಂಡ ದುರ್ದೈವಿ ಮಹಿಳೆ. ಆಕೆಯ ಪತಿ ಅಕ್ಷಯ್ ಜಾಧವ್ ಈ ಪ್ರಕರಣದ ಪ್ರಮುಖ ಆರೋಪಿ. ದಾಂಪತ್ಯ ಜೀವನದಲ್ಲಿ ಉಂಟಾದ ಅನುಮಾನ, ಕಲಹ ಮತ್ತು ವೈಮನಸ್ಸು ಈ ಮಟ್ಟಿಗೆ ತಲುಪಿರುವುದು ನಿಜಕ್ಕೂ ಆತಂಕಕಾರಿ ಸಂಗತಿ. ಶೈಲಾಳಿಗೆ ದತ್ತಾತ್ರೇಯ



ದರ್ಶನಕ್ಕೆ ಹೋಗೋಣವೆಂದು ಹೇಳಿ ಕಲಬುರಗಿಗೆ ಕರೆತಂದಿದ್ದ ಅಕ್ಷಯ್, ಮಾರ್ಗ ಮಧ್ಯದಲ್ಲೇ ತನ್ನ ಕ್ರೂರ ಯೋಜನೆಯನ್ನು ಜಾರಿಗೊಳಿಸಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ.

ಮಧ್ಯಾಹ್ನ ಸುಮಾರು 11:30ರ ಸುಮಾರಿಗೆ ಅಫಜಲಪುರ ತಾಲೂಕಿನ ಬಳೂರಗಿ ಗ್ರಾಮದ ಬಳಿ ಕಾರು ನಿಲ್ಲಿಸಿದ ಆರೋಪಿ, ಪತ್ನಿಯನ್ನು ಬಲವಂತವಾಗಿ ಕೆಳಗಿಳಿಸಿದ್ದಾನೆ. ಬಳಿಕ ಆಕೆಯ ಕೂದಲನ್ನು ಹಿಡಿದು ನಡುರಸ್ತೆಯಲ್ಲೇ ಎಳೆದಾಡಿ, ತನ್ನ ಬಳಿ ಇದ್ದ ಕುಡುಗೋಲಿನಿಂದ ಕತ್ತು ಸೀಳಿ ಹತ್ಯೆಗೈದಿದ್ದಾನೆ. ಜೀವ ಉಳಿಸಿಕೊಳ್ಳಲು ಶೈಲಾ ನಡೆಸಿದ ಹೋರಾಟವೂ ವ್ಯರ್ಥವಾಗಿದ್ದು, ಕೆಲವೇ ಕ್ಷಣಗಳಲ್ಲಿ ಆಕೆಯ ಪ್ರಾಣ ಹಾರಿಹೋಯಿತು. ಈ ದೃಶ್ಯವನ್ನು ಕಂಡ ಸಾರ್ವಜನಿಕರು ಬೆಚ್ಚಿಬಿದ್ದರೂ, ಯಾರೊಬ್ಬರೂ ನೆರವಿಗೆ ಧಾವಿಸದಿರುವುದು ಅತ್ಯಂತ ನೋವು ತಂದಿದೆ.

ಇದರಿಂದಲೂ ತೃಪ್ತಿ ಪಡದ ಆರೋಪಿ, ರಕ್ತದ ಮಡುವಿನಲ್ಲಿ ಬಿದ್ದಿದ್ದ ಪತ್ನಿಯ ಶವದ ಮೇಲೆ ತನ್ನ ಕಾರನ್ನು ಹಾಯಿಸಿ ಕ್ರೂರತೆಯ ಪರಾಕಾಷ್ಠೆ ತೋರಿದ್ದಾನೆ. ಈ ಘಟನೆ ನಡುರಸ್ತೆಯಲ್ಲೇ ನಡೆದಿದ್ದು, ಅಲ್ಲಿ ಹಾದು ಹೋಗುತ್ತಿದ್ದ ಹಲವರು ಈ ದೃಶ್ಯವನ್ನು ಕಣ್ಣಾರೆ ಕಂಡಿದ್ದಾರೆ. ಕೆಲವರು ಮೊಬೈಲ್‌ನಲ್ಲಿ ದೃಶ್ಯ ಸೆರೆಹಿಡಿದಿದ್ದರೂ, ಮಾನವೀಯತೆ ತೋರಿಸಿ ತಡೆಯಲು ಯತ್ನಿಸದಿರುವುದು ಸಮಾಜದ ಸ್ಥಿತಿಗತಿಯನ್ನು ಪ್ರಶ್ನಿಸುವಂತೆ ಮಾಡಿದೆ.


ಎಸ್ಪಿ ಅಡ್ಡೂರು ಶ್ರೀನಿವಾಸುಲು

ಘಟನೆಯ ಮತ್ತೊಂದು ಬೆಚ್ಚಿಬೀಳಿಸುವ ಅಂಶವೆಂದರೆ, ಕಾರಿನಲ್ಲೇ ಆರೋಪಿ ಪತಿಯ ತಂದೆತಾಯಿ ಹಾಗೂ ಇತರ ಸಂಬಂಧಿಕರು ಇದ್ದರೆಂದು ತಿಳಿದು ಬಂದಿದೆ. ಅವರು ಈ ಕ್ರೂರ ಕೃತ್ಯವನ್ನು ನೋಡುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದೆ ಮೌನವಾಗಿದ್ದರು ಎಂಬ ಆರೋಪ ಕೇಳಿಬಂದಿದೆ. ಈ ನಿರ್ಲಕ್ಷ್ಯವು ಕೇವಲ ಕುಟುಂಬದ ವೈಫಲ್ಯವಲ್ಲ, ಮಾನವೀಯತೆಯ ಹೀನತೆಗೆ ಉದಾಹರಣೆಯಾಗಿದೆ.



ಘಟನೆಯ ಮಾಹಿತಿ ತಿಳಿದ ತಕ್ಷಣ ಅಫಜಲಪುರ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದರು. ಕಲಬುರಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣದ ಬಗ್ಗೆ ಮಾಹಿತಿ ಪಡೆದುಕೊಂಡರು. ತಕ್ಷಣವೇ ಕಾರ್ಯಾಚರಣೆ ನಡೆಸಿ ಆರೋಪಿ ಅಕ್ಷಯ್ ಜಾಧವ್‌ನ್ನು ಬಂಧಿಸಲಾಯಿತು. ಸದ್ಯ ಆರೋಪಿ ಪೊಲೀಸ್ ವಶದಲ್ಲಿದ್ದು, ವಿಚಾರಣೆ ಮುಂದುವರೆದಿದೆ.

ಪ್ರಾಥಮಿಕ ತನಿಖೆಯಲ್ಲಿ ಪತ್ನಿಯ ಅನೈತಿಕ ಸಂಬಂಧದ ಅನುಮಾನವೇ ಈ ಕೃತ್ಯಕ್ಕೆ ಕಾರಣವಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಆದರೆ ನಿಖರ ಕಾರಣ ತಿಳಿಯಲು ಪೊಲೀಸರು ವಿವಿಧ ದಿಕ್ಕುಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ದಂಪತಿಯ ನಡುವೆ ಆಗಾಗ್ಗೆ ಕಲಹಗಳು ನಡೆಯುತ್ತಿದೆಯೆಂಬ ಮಾಹಿತಿ ಕೂಡ ಲಭ್ಯವಾಗಿದ್ದು, ಈ ಅಂಶಗಳು ಪ್ರಕರಣದ ಗಂಭೀರತೆಯನ್ನು ಹೆಚ್ಚಿಸಿವೆ.

ಈ ಘಟನೆ ಕೇವಲ ಒಂದು ಕುಟುಂಬದ ದುರಂತವಲ್ಲ; ಇಂದಿನ ಸಮಾಜದಲ್ಲಿ ಹೆಚ್ಚುತ್ತಿರುವ ದಾಂಪತ್ಯ ಸಮಸ್ಯೆಗಳ ಪ್ರತಿಬಿಂಬವಾಗಿದೆ. ಗಂಡ ಹೆಂಡತಿಯ ನಡುವಿನ ನಂಬಿಕೆ ಕುಸಿದಾಗ, ಸಂಬಂಧಗಳು ಹೇಗೆ ದುರ್ಘಟನೆಗೆ ತಿರುಗುತ್ತವೆ ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ. ಸಣ್ಣ ವಿಷಯಗಳಿಂದ ಆರಂಭವಾಗುವ ಕಲಹಗಳು, ಸಂಭಾಷಣೆಯ ಕೊರತೆಯಿಂದ ದೊಡ್ಡ ಸಮಸ್ಯೆಗಳಾಗಿ ರೂಪಾಂತರಗೊಳ್ಳುತ್ತವೆ.

ಇತ್ತೀಚಿನ ದಿನಗಳಲ್ಲಿ ಅನೈತಿಕ ಸಂಬಂಧಗಳ ಅನುಮಾನ, ಅಸೂಯೆ, ಅಹಂಕಾರ ಮತ್ತು ಕೋಪದಿಂದ ದಾಂಪತ್ಯ ಜೀವನದಲ್ಲಿ ಹಿಂಸಾಚಾರ ಹೆಚ್ಚುತ್ತಿದೆ. ಪರಸ್ಪರ ಗೌರವ ಮತ್ತು ವಿಶ್ವಾಸದ ಕೊರತೆ ಈ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಕುಟುಂಬ ಎಂಬ ವ್ಯವಸ್ಥೆ ಪರಸ್ಪರ ಅರ್ಥೈಸಿಕೊಳ್ಳುವಿಕೆಯ ಮೇಲೆ ನಿಂತಿದೆ. ಆದರೆ ಈ ಮೌಲ್ಯಗಳು ನಿಧಾನವಾಗಿ ಕುಸಿಯುತ್ತಿರುವುದು ಇಂತಹ ಘಟನೆಗಳಿಂದ ಸ್ಪಷ್ಟವಾಗುತ್ತಿದೆ.

ಸಾರ್ವಜನಿಕರ ಪಾತ್ರವೂ ಇಲ್ಲಿ ಪ್ರಶ್ನೆಗೆ ಒಳಪಡುತ್ತದೆ. ನಡುರಸ್ತೆಯಲ್ಲಿ ನಡೆಯುತ್ತಿದ್ದ ಈ ಕ್ರೂರ ಕೃತ್ಯವನ್ನು ಕಂಡು ಜನರು ಮೌನವಾಗಿರುವುದು, ಸಮಾಜದ ನೈತಿಕ ಹೊಣೆಗಾರಿಕೆಯನ್ನು ತೋರಿಸುತ್ತದೆ. ಒಂದು ಜೀವ ಉಳಿಸಲು ಸ್ವಲ್ಪ ಧೈರ್ಯ ತೋರಿದ್ದರೆ, ಈ ದುರ್ಘಟನೆ ತಪ್ಪಿಸಬಹುದಿತ್ತು ಎಂಬ ಭಾವನೆ ಎಲ್ಲರಲ್ಲೂ ಮೂಡುತ್ತಿದೆ. ಇಂತಹ ಸಂದರ್ಭಗಳಲ್ಲಿ ಮೌನವೇ ದೊಡ್ಡ ಅಪರಾಧವಾಗುತ್ತದೆ.

ಇನ್ನು ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವವೂ ಇಂತಹ ಘಟನೆಗಳಲ್ಲಿ ಗೋಚರಿಸುತ್ತಿದೆ. ಸಹಾಯ ಮಾಡಲು ಬದಲು ದೃಶ್ಯಗಳನ್ನು ಚಿತ್ರೀಕರಿಸುವ ಮನೋಭಾವ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಮಾನವೀಯತೆಯ

☞10







# ಅಮ್ಮನ ಲವ್ ಮಾಡುತ್ತಿದ್ದ ವ್ಯಕ್ತಿಯ ಪತ್ನಿ, ತಮ್ಮನಿಗೆ ಚಾಕುವಿನಿಂದ ಇರಿದು ಕೊಚ್ಚಿ ಕೊಂದ ಬಾಲಕ!





**ಬೆಂಗಳೂರು ನಗರದ ಪೀಣ್ಯಾ ವ್ಯಾಪ್ತಿಯಲ್ಲಿ ಅಕ್ರಮ ಸಂಬಂಧದ ಆರೋಪದಿಂದ ಹೊತ್ತಿ ಉರಿದ ಕುಟುಂಬ ವೈಮನಸ್ಸು ಭೀಕರ ಅಂತ್ಯ ಕಂಡಿದ್ದು, ಅಪ್ರಾಪ್ತ ಬಾಲಕನೊಬ್ಬ ಚಾಕುವಿನಿಂದ ಇಬ್ಬರನ್ನು ಹತ್ಯೆ ಮಾಡಿದ ಘಟನೆ ಸಂಚಲನ ಮೂಡಿಸಿದೆ. ಮನೆಗೆ ನುಗ್ಗಿ ಜಗಳಕ್ಕೆ ಇಳಿದ ಮಹಿಳೆ ಮತ್ತು ಆಕೆಯ ಸಹೋದರನ ಮೇಲೆ ಬಾಲಕ ದಾಳಿ ನಡೆಸಿದ ಪರಿಣಾಮ, ಇಬ್ಬರೂ ರಕ್ತದ ಮಡುವಿನಲ್ಲಿ ಸಾವನ್ನಪ್ಪಿದ್ದು, ಕ್ಷಣಿಕ ಆಕ್ರೋಶವೇ ಜೀವಹಾನಿಗೆ ಕಾರಣವಾಗಿದೆ.**

ಬೆಂಗಳೂರು ನಗರದಲ್ಲಿ ಸಂಭವಿಸಿದ ಈ ಭೀಕರ ಜೋಡಿ ಕೊಲೆ ಪ್ರಕರಣವು ಅಕ್ರಮ ಸಂಬಂಧ, ಕುಟುಂಬ ವೈಮನಸ್ಸು ಮತ್ತು ಕ್ಷಣಿಕ ಆಕ್ರೋಶವು ಸೇರಿ ಹೇಗೆ ದಾರುಣ ಅಂತ್ಯಕ್ಕೆ ದಾರಿ ಮಾಡಿಕೊಡುತ್ತದೆ ಎಂಬುದಕ್ಕೆ ನೈಜ ಉದಾಹರಣೆಯಾಗಿದೆ. ಪೀಣ್ಯಾ ಪೊಲೀಸ್ ಠಾಣಾ ವ್ಯಾಪ್ತಿಯ ಎಚ್‌ಎಂಟಿ ಲೇಔಟ್ ಸಮೀಪದ ನೆಲಗೆದರನಹಳ್ಳಿಯಲ್ಲಿ ನಡೆದ ಈ ಘಟನೆ ನಗರವನ್ನೇ ಬೆಚ್ಚಿಬೀಳಿಸಿದೆ. ತಿಗಳರ ಪಾಳ್ಯದ ನಿವಾಸಿಗಳಾದ ಯಮುನಾ (36) ಮತ್ತು ಆಕೆಯ ತಮ್ಮ ಸುದೀಪ್ (34) ಕ್ರೂರವಾಗಿ ಹತ್ಯೆಯಾದ ದುರ್ದೈವಿಗಳು. ಈ ಪ್ರಕರಣದಲ್ಲಿ 16 ವರ್ಷದ ಅಪ್ರಾಪ್ತ ಬಾಲಕನೊಬ್ಬ ಪ್ರಮುಖ ಆರೋಪಿಯಾಗಿದ್ದು, ಆತನ ತಾಯಿ ಭಾಯಾಳನ್ನು ಸಹ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಪ್ರಾಥಮಿಕ ತನಿಖೆಯ ಪ್ರಕಾರ, ಅಕ್ರಮ ಸಂಬಂಧದ ಹಿನ್ನೆಲೆಯೇ ಈ ಹತ್ಯೆಗೆ ಕಾರಣವಾಗಿದ್ದು, ಹಲವು ವರ್ಷಗಳಿಂದ ಬೆಳೆದಿದ್ದ ವೈಮನಸ್ಸು ಅಂತಿಮವಾಗಿ ರಕ್ತಪಾತದಲ್ಲಿ ಕೊನೆಗೊಂಡಿದೆ.



ಯಮುನಾ ಹಾಗೂ ಸುದೀಪ್ ಬದುಕಿದ್ದಾಗ

ಈ ಘಟನೆಯ ಮೂಲ ಹಲವು ವರ್ಷಗಳ ಹಿಂದಿನ ನೆರೆಹೊರೆಯ ಸಂಬಂಧಗಳಲ್ಲಿ ಇದೆ. ಯಮುನಾ ಹಾಗೂ ಆಕೆಯ ಪತಿ ಮಲ್ಲೇಗೌಡ ತಿಗಳರ ಪಾಳ್ಯದಲ್ಲಿ ವಾಸವಾಗಿದ್ದಾಗ, ಭಾಯಾ ಕುಟುಂಬ ಅವರ ಎದುರಿನ ಮನೆಯಲ್ಲಿ ವಾಸಿಸುತ್ತಿತ್ತು. ಮಲ್ಲೇಗೌಡ ಫ್ಯಾಬ್ರಿಕೇಷನ್ ಕ್ಷೇತ್ರದಲ್ಲಿ ಸಣ್ಣ ಉದ್ಯಮ ನಡೆಸುತ್ತಿದ್ದು, ಆರ್ಥಿಕವಾಗಿ ಸ್ಥಿರವಾಗಿದ್ದಾನೆ. ಇನ್ನೊಂದೆಡೆ ಭಾಯಾಳ ಪತಿ ಆಟೋ ಚಾಲಕರಾಗಿದ್ದು, ಕುಟುಂಬ ಸಾಮಾನ್ಯ ಜೀವನ ನಡೆಸುತ್ತಿತ್ತು. ಒಂದೇ ಪ್ರದೇಶದಲ್ಲಿ ವಾಸವಾಗಿದ್ದ ಕಾರಣ ಎರಡು ಕುಟುಂಬಗಳ ನಡುವೆ ಆತ್ಮೀಯತೆ ಬೆಳೆದಿತ್ತು. ಮನೆಗೆ ಮನೆಗೆ ಓಡಾಟ, ಪರಸ್ಪರ ಸಹಾಯ, ಹಣಕಾಸಿನ ವ್ಯವಹಾರಗಳು ಇತ್ಯಾದಿಗಳ ಮೂಲಕ ನಂಬಿಕೆ ಬಲ ಗೊಂಡಿತ್ತು. ಭಾಯಾ ಕುಟುಂಬಕ್ಕೆ ಹಣಕಾಸಿನ ಸಂಕಷ್ಟ ಎದುರಾದಾಗ ಮಲ್ಲೇಗೌಡ ನೆರವಾಗಿದ್ದನೆಂದು ತಿಳಿದು ಬಂದಿದೆ. ಈ ಆತ್ಮೀಯತೆ ಕ್ರಮೇಣ ಅತಿಯಾದ ಸಲುಗೆಯಾಗಿ, ಬಳಿಕ ಅಕ್ರಮ ಸಂಬಂಧಕ್ಕೆ ತಿರುಗಿದೆ ಎಂಬ ಆರೋಪ ಹೊರ ಹೊಮ್ಮಿದೆ.



ಪತಿ ಮಲ್ಲೇಗೌಡನೊಂದಿಗೆ ಯಮುನಾ

ಈ ಅಕ್ರಮ ಸಂಬಂಧ ವಿಚಾರ ತಿಳಿದು ಯಮುನಾಳಿಗೆ ತೀವ್ರ ಆಘಾತವಾಗಿತ್ತು. ತನ್ನ ಗಂಡ ಮತ್ತು ಭಾಯಾ ನಡುವೆ ಇರುವ ಅನೈತಿಕ ಸಂಬಂಧವನ್ನು ಪ್ರಶ್ನಿಸಿ ಯಮುನಾ ಹಲವಾರು ಬಾರಿ ಗಲಾಟೆ ಮಾಡಿದ್ದಳು. ಈ ವಿಷಯವಾಗಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಸಹ ದಾಖಲಾಗಿತ್ತು. ಬಳಿಕ ಕುಟುಂಬದ ಹಿರಿಯರು ಮತ್ತು ಪೊಲೀಸರು ಮಧ್ಯಸ್ಥಿಕೆ ವಹಿಸಿ ಸಂಧಾನ ಮಾಡಿಸಿದ್ದರೂ, ಮೂಲ ಸಮಸ್ಯೆ ಪರಿಹಾರವಾಗಿರಲಿಲ್ಲ. ಹೊರಗೆ ಸಮಾಧಾನ ಕಂಡಂತೆ ಕಾಣಿಸಿಕೊಂಡರೂ, ಒಳಗೊಳಗೆ ಕೋಪ ಮತ್ತು ಅನುಮಾನಗಳು ಮುಂದುವರಿದಿದ್ದವು. ಈ ಘಟನೆಯ ನಂತರ ಭಾಯಾ ಕುಟುಂಬ ತಿಗಳರ ಪಾಳ್ಯದಿಂದ ಹೊರಬಂದು ಎಚ್ ಎಂಟಿ ಲೇಔಟ್ ಪ್ರದೇಶಕ್ಕೆ ಮನೆ ಬದಲಿಸಿಕೊಂಡಿತ್ತು. ಆದರೆ ಮಲ್ಲೇಗೌಡನ ಸಂಪರ್ಕ ಭಾಯಾ ಜೊತೆ ಮುಂದುವರಿದಿದ್ದಾನೆ ಎಂಬ ಶಂಕೆ ಯಮುನಾಳಲ್ಲಿ ಮತ್ತಷ್ಟು ಕೋಪವನ್ನು ಉಂಟು ಮಾಡಿತ್ತು.

ಈ ಹಿನ್ನೆಲೆಯಲ್ಲೇ ಎರಡು ಕುಟುಂಬಗಳ ನಡುವೆ ಪದೇ ಪದೇ ವಾಗ್ವಾದಗಳು ನಡೆಯುತ್ತಿದವು. ವಿಶೇಷವಾಗಿ ದೂರವಾಣಿ ಮೂಲಕ ಬೈಗುಳ, ಬೆದರಿಕೆಗಳು ಸಾಮಾನ್ಯವಾಗಿದ್ದವು ಎಂದು ಮೂಲಗಳು ತಿಳಿಸಿವೆ. ಘಟನೆ ನಡೆದ ದಿನವೂ ಇದೇ ರೀತಿ ಬೆಳಿಗ್ಗೆ ಯಮುನಾ ಭಾಯಾಳಿಗೆ ಕರೆ ಮಾಡಿ ತೀವ್ರವಾಗಿ ನಿಂದಿಸಿದ್ದಳು. ಈ ವೇಳೆ ಮನೆಯಲ್ಲಿದ್ದ ಭಾಯಾಳ 16 ವರ್ಷದ ಮಗನ ಕಿವಿಗೆ ಅವಮಾನಕಾರಿ ಮಾತುಗಳು ಬಿದ್ದವು. ತಾಯಿಗೆ ಆಗುತ್ತಿರುವ ಅವಮಾನವನ್ನು ಸಹಿಸಲಾರದೆ ಆಕ್ರೋಶಗೊಂಡ ಬಾಲಕ, ತಕ್ಷಣವೇ ತಾಯಿಯ ಕೈಯಿಂದ ಮೊಬೈಲ್ ಕಸಿದುಕೊಂಡು ಯಮುನಾಳೊಂದಿಗೆ ನೇರವಾಗಿ ವಾಗ್ವಾದಕ್ಕೆ ಇಳಿದಿದ್ದಾನೆ. ಕೋಪದ ಭಾವದಲ್ಲಿ 'ನಮ್ಮ ಮನೆಗೆ ಬಾ, ನೋಡ್ತೀನಿ ಏನು ಮಾಡ್ತೀಯಾ' ಎಂದು ಸವಾಲು ಹಾಕಿದ್ದಾನೆ. ಈ ಮಾತು ಯಮುನಾಳ ಕೋಪವನ್ನು ಮತ್ತಷ್ಟು ಹೆಚ್ಚಿಸಿದೆ.



ಆರೋಪಿಗಳಾದ ಬಾಲಕ ಹಾಗೂ ಭಾಯಾ

## ಬೆಂಗಳೂರಿನಲ್ಲಿ ಭೀಕರ ಜೋಡಿ ಕೊಲೆ!

☞ 14

## ತಾಯಿ ಹತ್ಯೆ ಆಘಾತ: ಮಗಳ ಆತ್ಮಹತ್ಯೆ ಯತ್ನ!

ತಾಯಿ ಯಮುನಾ ಹತ್ಯೆಯ ಸುದ್ದಿ ತಿಳಿದ ಕೂಡಲೇ ಆಕೆಯ ಮಗಳು ತೀವ್ರ ಆಘಾತಕ್ಕೊಳಗಾಗಿ ಆತ್ಮಹತ್ಯೆಗೆ ಯತ್ನಿಸಿದ ದುರ್ಘಟನೆ ನಡೆದಿದೆ. ಮನನೊಂದು ಆಕೆ ಬಾತ್‌ರೂಮ್ ಕ್ಲೀನಿಂಗ್ ದ್ರವ್ಯವನ್ನು ಸೇವಿಸಿದ್ದು, ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಮುಂದುವರಿದಿದೆ. ವೈದ್ಯರು ಆಕೆಯ ಸ್ಥಿತಿಯನ್ನು ಗಮನದಲ್ಲಿಟ್ಟಿದ್ದಾರೆ. ಈ ಘಟನೆ ಕುಟುಂಬದವರಲ್ಲಿ ಅಪಾರ ದುಃಖ ಉಂಟುಮಾಡಿದೆ. ಮೃತ ಸುದೀಪ್ ಅವರ ಮಾವ ಸುರೇಶ್ ಮಾತನಾಡಿ, 'ನಮ್ಮ ಮಗಳನ್ನು ಸುದೀಪ್‌ಗೆ ಮದುವೆ ಮಾಡಿಕೊಟ್ಟಿದ್ದೇವೆ. ಅವಳು ಈಗ ಗರ್ಭಿಣಿ. ಇಂದು ಆಫೀಸಿಗೆ ಹೋಗುತ್ತೇನೆ ಎಂದು ಹೇಳಿ ಹೊರಟಿದ್ದ ಸುದೀಪ್, ಅಕ್ಕನ ಮನೆಗೆ ಹೋಗಿ ಬಳಿಕ ಈ ದುರಂತ ನಡೆದಿದೆ. ನಾವು ಅಳಿಯನನ್ನೇ ಕಳೆದುಕೊಂಡಿದ್ದೇವೆ' ಎಂದು ಕಣ್ಣೀರಿಟ್ಟರು.



ಡಿಸಿಪಿ ಡಿ.ಎಲ್. ನಾಗೇಶ್

ಇದಕ್ಕೂ ಮಧ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಯಮುನಾ ಪುತ್ರ ದೀಕ್ಷಿತ್ ಗಂಭೀರ ಆರೋಪ ಹೊರ ಹಾಕಿದ್ದಾರೆ. 'ನಮ್ಮ ತಂದೆ ಮತ್ತು ಭಾಯಾ ನಡುವೆ ಅಕ್ರಮ ಸಂಬಂಧವಿತ್ತು. ಈ ಬಗ್ಗೆ ನಾವು ಪೊಲೀಸರಿಗೆ ದೂರು ನೀಡಿದ್ದೆವು. ಇಂದು ನಡೆದ ಗಲಾಟೆಯಲ್ಲಿ ಭಾಯಾ ಮಗನೇ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ' ಎಂದು ತಿಳಿಸಿದ್ದಾರೆ.

ಘಟನೆ ಬಗ್ಗೆ ಮಾಹಿತಿ ಪಡೆದ ಪೀಣ್ಯಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣದಲ್ಲಿ ಸಂಬಂಧ ಹೊಂದಿರುವ ಅಪ್ರಾಪ್ತ ಬಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಕುಟುಂಬದ ಒಳಗಿನ ಕಲಹ ಮತ್ತು ಅಕ್ರಮ ಸಂಬಂಧವೇ ಈ ದಾರುಣ ಘಟನೆಯ ಹಿನ್ನೆಲೆಯೇ ಎಂಬುದು ತನಿಖೆಯಿಂದ ತಿಳಿಯಬೇಕಾಗಿದೆ.



ಕೊಲೆಯಾಗಿ ಬಿದ್ದಿರುವ ಯಮುನಾ ಹಾಗೂ ಸುದೀಪ್

# ಕಸ ಹಾಕುವ ವಿಚಾರ ಗಲಾಟೆಗೆ ತಿರುಗಿ ಹತ್ಯೆ!



ಕೊಲೆಯಾದ ಶಾಜುಖಾನ್

**ಜಮೀನಿನಲ್ಲಿ ಕಸ ಹಾಕುವ ವಿಚಾರಕ್ಕೆ ಮಾವ ಮತ್ತು ಬಾವಮೈದುನನ ಮಕ್ಕಳ ನಡುವೆ ಜಗಳವಾಗಿ ಮಾವನನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿದ್ದ ಮೂವರು ಆರೋಪಿಗಳನ್ನು ಶ್ರೀನಿವಾಸಪುರ ತಾಲ್ಲೂಕಿನ ಗೌನಪಲ್ಲಿ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**



ಪ್ರಮುಖ ಆರೋಪಿ ವಾಸೀಂ ಅಕ್ರಮ್

**ಕೋಲಾರ**

✍ ಕೋಲಾರ ಮಂಜು

**ಕೋ**ಲಾರ ಜಿಲ್ಲಾ, ಶ್ರೀನಿವಾಸಪುರ ತಾಲ್ಲೂಕಿನ ಗೌನಪಲ್ಲಿ ಗ್ರಾಮದಲ್ಲಿ ವಾಸವಾಗಿ ಮಾಂಸದ ಅಂಗಡಿ ನಡೆಸುತ್ತಿರುವ ಶಾಜುಖಾನ್‌ಗೆ ಹೆಂಡತಿ, ಮಕ್ಕಳಿದ್ದು ದೊಡ್ಡ ಮಗಳನ್ನು ಗ್ರಾಮದಲ್ಲಿಯೇ ಮದುವೆ ಮಾಡಿದ್ದು, ಎರಡನೇ ಮಗಳನ್ನು ಕೋಲಾರದ ರಹಮತ್‌ನಗರದ ವ್ಯಕ್ತಿಯೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಶಹಾಬುದ್ದೀನ್ ಎಂಬ ಮಗನಿದ್ದು ಈತನಿಗೆ ಮದುವೆಯಾಗಿ ಇಬ್ಬರು ಮಕ್ಕಳಿರುತ್ತಾರೆ. ಶಾಜುಖಾನ್ ತನ್ನ ಮನೆಯನ್ನು ಅಕ್ಕನಿಗೆ ಬಾಡಿಗೆಗೆ ಕೊಟ್ಟಿದ್ದು, ಅವರಿಗೆ ಬಾಬು ಅಲಿಯಾಸ್ ಬಷೀರುದ್ದೀನ್ (48) ಮಗನಿದ್ದು ಇವರಿಗೆ ಮದುವೆಯಾಗಿ ವಾಸೀಂ ಅಕ್ರಮ್ (21) ಮತ್ತು ಮಹಮದ್ ಸಾಖಿಬ್ (20) ಎಂಬ ಇಬ್ಬರು ಮಕ್ಕಳಿರುತ್ತಾರೆ. ಇವರು ಸಹ ಜೀವನೋಪಾಯಕ್ಕಾಗಿ ಮಾಂಸದ ಅಂಗಡಿಯನ್ನು ನಡೆಸುತ್ತಿರುತ್ತಾರೆ. ಶಾಜುಖಾನ್ ಮತ್ತು ಅಕ್ಕನ ಮಗ ಬಾಬುರವರ ಮಾಂಸದ ಅಂಗಡಿಗಳು ಅಕ್ಕಪಕ್ಕದಲ್ಲಿಯೇ ಇದ್ದು, ವ್ಯಾಪಾರದ ವಿಚಾರದಲ್ಲಿ ಇಬ್ಬರ ನಡುವೆ ಪೈಪೋಟಿ ನಡೆಯುತ್ತಿರುತ್ತದೆ. ಜೊತೆಗೆ ಆಗಾಗ ಜಗಳ ಸಹ ಆಗುತ್ತಿರುತ್ತದೆ. ಕಳೆದ ಎರಡು ವರ್ಷಗಳಿಂದ ಬಾಬುರವರ ದೊಡ್ಡ ಮಗ ವಾಸೀಂ ಅಕ್ರಮ್ ಶಾಜುಖಾನ್‌ರವರ ಮೊಮ್ಮಗಳನ್ನು ಪ್ರೀತಿಸುತ್ತಿದ್ದೇನೆ. ಮದುವೆ ಮಾಡಿಕೊಡುವಂತೆ ಒತ್ತಾಯಿಸುತ್ತಿದ್ದನು. ಈ ವಿಚಾರವಾಗಿ ಶಾಜುಖಾನ್ ಮತ್ತು ಮಗ ಶಹಬುದ್ದೀನ್ ರವರು ವಿರೋಧಿಸುತ್ತಿದ್ದು ಯಾವುದೇ ಕಾರಣಕ್ಕೂ ನಮ್ಮ ಮನೆ ಹೆಣ್ಣು ಮಗಳನ್ನು ಮದುವೆಯಾಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿಬಿಟ್ಟರು. ಹೆಣ್ಣು ಕೊಡುವುದಿಲ್ಲವೆಂದು ಹೇಳಿದಕ್ಕೆ ಮಾವ ಮತ್ತು ಅವರ ಮಗನ ಮೇಲೆ ಎದ್ವೇಷ ಸಾಧಿಸುತ್ತಿದ್ದರು. ಇದೇ ವಿಚಾರವನ್ನು ಇಟ್ಟುಕೊಂಡು ವಾಸೀಂ ಅಕ್ರಮ್ ಸಣ್ಣ ವಿಚಾರಕ್ಕೆಲ್ಲ ಅವರೊಂದಿಗೆ ಕಾಲು ಕರೆದುಕೊಂಡು ಜಗಳಕ್ಕೆ ನಿಲ್ಲುತ್ತಿದ್ದನು. ಇವನ ಜೊತೆಗೆ ತಂದೆ ಬಾಬು ಮತ್ತು ತಮ್ಮ ಮಹಮದ್ ಸಾಖಿಬ್ ಸೇರಿಕೊಂಡು ಜಗಳವನ್ನು ದೊಡ್ಡದು ಮಾಡುತ್ತಿದ್ದರು. ಜಗಳ ಮತ್ತು ಮನಸ್ತಾಪದಿಂದ ದೂರವಾಗಿದ್ದ ಎರಡು ಕುಟುಂಬಗಳು ಮನಸ್ಸಿನಲ್ಲಿ ದ್ವೇಷವನ್ನು ತುಂಬಿಟ್ಟುಕೊಂಡು ಅಕ್ಕಪಕ್ಕದಲ್ಲಿ ವಾಸಿಸುತ್ತಿದ್ದರು.

ಯಾವಾಗಲೂ ಜಗಳವಾಡುತ್ತಾ ಅಕ್ಕಪಕ್ಕದಲ್ಲಿಯೇ ಇದ್ದು ದಿನವು ಇಬ್ಬರು ಪರಸ್ಪರ ಮುಖಾಮುಖಿ ಎದುರಾಗಬೇಕಾಗುವುದರಿಂದ ಶಾಜುಖಾನ್‌ರವರು ಅಕ್ಕನಿಗೆ ಮನೆ ಬಿಟ್ಟು ಹೋಗುವಂತೆ ತಿಳಿಸುತ್ತಾರೆ. ಈ ವಿಷಯವನ್ನು ತನ್ನ ಮಗ ಹಾಗೂ ಮೊಮ್ಮಕ್ಕಳಿಗೆ ತಿಳಿಸಿ ಬೇರೆ ಮನೆ ಮಾಡಿಕೊಂಡು ಇಲ್ಲಿಂದ ಹೋಗೋಣವೆಂದು ಹೇಳುತ್ತಾರೆ. ತಾಯಿ ಹೇಳಿದ ಮಾತಿನಿಂದ ಮಾವ ಶಾಜುಖಾನ್‌ರವರ ಮೇಲೆ ಕೋಪ ಮಾಡಿಕೊಂಡ ಬಾಬು ಯಾವುದೇ ಕಾರಣಕ್ಕೂ ಮನೆ ಬಿಡುವುದಿಲ್ಲ. ಬಾಡಿಗೆ ಬೇಕಾದರೆ ಹೆಚ್ಚಿಗೆ ಮಾಡಿ ಎಂದು ಹೇಳಿದನು. ಶಾಜುಖಾನ್ ತನ್ನ ಮೊಮ್ಮಗಳನ್ನು ವಾಸೀಂ ಅಕ್ರಮ್ ಜೊತೆ ಮದುವೆ ಮಾಡಿಕೊಡುವುದಿಲ್ಲವೆಂದು, ಮನೆಯನ್ನು ಖಾಲಿ ಮಾಡುವಂತೆ ಹೇಳಿದ್ದು ಹಾಗೂ ಅಂಗಡಿಯಲ್ಲಿ ಪೈಪೋಟಿ ಮಾಡುತ್ತಿರುವ ಮಾವ ಶಾಜುಖಾನ್‌ರವರ ಮೇಲೆ ವಿಷ ಕಾರುತ್ತಿದ್ದ ಬಾಬು ಮತ್ತು ವರ ಮಕ್ಕಳು ಅವರಿಗೊಂದು ಗತಿ ಕಾಣಿಸಬೇಕೆಂದು ಸಮಯಕ್ಕಾಗಿ ಕಾದಿದ್ದರು.

**ಕಸದ ವಿಚಾರಕ್ಕೆ ಜಗಳವಾಗಿ ಕೊಲೆ**

ಶಾಜುಖಾನ್ ಎಂದಿನಂತೆ ಮಾರ್ಚ್ 6ರಂದು ಶುಕ್ರವಾರ ಬೆಳಿಗ್ಗೆ ಮಾಂಸದ ಅಂಗಡಿಗೆ ಬಂದು 11 ಗಂಟೆಯವರೆಗೂ ವ್ಯಾಪಾರ ಮಾಡಿಕೊಂಡು ನಂತರ ತಂದೆ, ಮಗ ಮನೆಗೆ ಬಂದು ಸ್ನಾನ ಮಾಡಿ ಮಸೀದಿಗೆ ಹೋಗಿ ನಮಾಜ್ ಮಾಡಿಕೊಂಡು ಬಂದು ಮನೆಯಲ್ಲಿ ಊಟ ಮಾಡಿ ಸ್ವಲ್ಪ ಹೊತ್ತು ರೇಸ್ಟ್ ಮಾಡಿ ಸಂಜೆ 4 ಗಂಟೆಗೆ ಅಂಗಡಿಗೆ ಹೋಗಿ ಶಾಜುಖಾನ್ ಕಸಗುಡಿಸಿ ಮರದಲ್ಲಿ ಕಸವನ್ನು ತೆಗೆದುಕೊಂಡು ಹೊರಗೆ ಹೋಗುತ್ತಿದ್ದಂತೆ ಮಗ ಶಹಾಬುದ್ದೀನ್ ಮಾಂಸವನ್ನು ಅಂಗಡಿ ಮುಂದೆ ನೇತು ಹಾಕುತ್ತಿದ್ದರು. ಆಗ ಶಾಜುಖಾನ್ ರವರು ಬಾಬುರವರ ಅಂಗಡಿ ಮುಂದೆ ಬರುತ್ತಿರುವಾಗ ನಡೆದ ಗಲಾಟೆಯಲ್ಲಿ ಶಾಜುಖಾನ್‌ರವರಿಗೆ ಮೈಯೆಲ್ಲ ಗಾಯಗಳಾಗಿ ನೆಲದ ಮೇಲೆ ಬಿದ್ದು ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದರು. ಮಗ ಶಹಾಬುದ್ದೀನ್ ರವರ ಮುಂಗೈ ಕಟ್ಟಾಗಿದ್ದು ಕೂಡಲೇ ಅವರನ್ನು ಗೌನಪಲ್ಲಿ ಆಸ್ಪತ್ರೆಗೆ ಸೇರಿಸಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದು ಶಾಜುಖಾನ್‌ರವರನ್ನು ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದ್ದು ನಂತರ ಮಗ ಶಹಾಬುದ್ದೀನ್ ರವರನ್ನು ಕೋಲಾರದ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಗೆ ಒಳಪಡಿಸಲಾಯಿತು. ಶಾಜುಖಾನ್‌ರವರ ಪತ್ನಿಯವರು ಗೌನಪಲ್ಲಿ ಪೊಲೀಸ್ ಠಾಣೆಗೆ ಹಾಜರಾಗಿ ಗಂಡ ಶಾಜುಖಾನ್‌ರವರ ಅಕ್ಕನ ಮಗ ಬಾಬು ಮತ್ತು ಅವರ ಮಕ್ಕಳಾದ ವಸೀಂ ಅಕ್ರಮ್ ಮತ್ತು ಮಹಮದ್ ಸಾಖಿಬ್ ಸೇರಿದಂತೆ ಮೂವರು ಸೇರಿಕೊಂಡು ನನ್ನ ಗಂಡನನ್ನು ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳನ್ನು ಬಂಧಿಸಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ದೂರು ನೀಡಿದರು.

ಠಾಣಾಧಿಕಾರಿ ಪಿಎಸ್‌ಐ ಶಶಿಕಲಾ ರವರು ಮೊ.ಸಂ. 15/2026 ಅಡಿ ಕಲಂ 103(1), 106(1), 3(5) ಬಿಎನ್‌ಎಸ್ ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮಕ್ಕಾಗಿ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳಕ್ಕೆ ಎಸ್ಪಿ ಶ್ರೀಮತಿ ಕನ್ನಿಕಾ ಸಿಕ್ರಿವಾಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ರಾಜೇಶ್ ಮತ್ತು ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿದ ನಂತರ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಪಂಚರು ಮತ್ತು ವಾರಸುದಾರರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ಮೇಲೆ ಮೃತದೇಹದ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ

☞ 14



ಆರೋಪಿಗಳಾದ ಬಾಬು ಅಲಿಯಾಸ್ ಬಷೀರುದ್ದೀನ್ ಹಾಗೂ ಮಹಮದ್ ಸಾಖಿಬ್



ಎಸ್ಪಿ ಶ್ರೀಮತಿ ಕನ್ನಿಕಾ ಸಿಕ್ರಿವಾಲ್





ಪಿಐ ಶಿವಕುಮಾರ್





ಪಿಎಸ್‌ಐ ಶಶಿಕಲಾ



ಶಾಜುಖಾನ್‌ನ ಮೃತದೇಹ



ಅಕ್ಕಪಕ್ಕದಲ್ಲಿರುವ ಮಾಂಸದ ಅಂಗಡಿಗಳು



**ನಗರ ಪೊಲೀಸ್ ಇಲಾಖೆಯನ್ನು ನಡುಗಿಸುವಂತಹ ಗಂಭೀರ ಆರೋಪವೊಂದು ಬೆಳಕಿಗೆ ಬಂದಿದೆ. ಕೋಣನಕುಂಟೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪಾಪಣ್ಣ ವಿರುದ್ಧ ಲೇಡಿ ರೌಡಿಶೀಟರ್ ಯಶಸ್ವಿನಿ ಲೈಂಗಿಕ ಕಿರುಕುಳದ ಆರೋಪ ಹೊರಿಸಿ, ಆಡಿಯೋ ಹಾಗೂ ವಾಟ್ಸ್‌ಆಪ್ ಸಂದೇಶಗಳ ಸಾಕ್ಷ್ಯಗಳೊಂದಿಗೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿರುವುದು ದೊಡ್ಡ ಚರ್ಚೆಗೆ ಕಾರಣವಾಗಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಆಯುಕ್ತರು ತಕ್ಷಣವೇ ಇಲಾಖಾ ಮಟ್ಟದ ತನಿಖೆಗೆ ಆದೇಶಿಸಿದ್ದು, ಪ್ರಕರಣದ ಸತ್ಯಾಸತ್ಯತೆ ಹೊರಬರುವತ್ತ ಎಲ್ಲರ ಗಮನ ಹರಿದಿದೆ.**

ದೂರುದಾರೆಯ ಪ್ರಕಾರ, ಪಾಪಣ್ಣ ಕಚೇರಿಯ ಹಾಗೂ ವೈಯಕ್ತಿಕ ಮೊಬೈಲ್ ಸಂಖ್ಯೆಯಿಂದ ಅನೇಕ ಬಾರಿ ಕರೆ ಮಾಡಿ ಅಸಭ್ಯವಾಗಿ ಮಾತನಾಡುತ್ತಿದ್ದಾನೆ. 'ನಿನ್ನ ಮನೆಗೆ ಬರುತ್ತೇನೆ, ಒಬ್ಬರೇ ಇರುವಾಗ ಭೇಟಿಯಾಗಬೇಕು, ಏಕಾಂತದಲ್ಲಿ ಸಮಯ ಕಳೆಯಬೇಕು' ಎಂಬಂತೆ ಮಾತನಾಡಿ ತನ್ನ ಮೇಲೆ ಒತ್ತಡ ಹೇರುತ್ತಿದ್ದಾನೆ ಎಂದು ಆರೋಪಿಸಲಾಗಿದೆ. ಇಂತಹ ವರ್ತನೆಯಿಂದ ತಾನು ಮಾನಸಿಕವಾಗಿ ಹಿಂಸೆಗೆ ಒಳಗಾಗಿದ್ದು, ಸಾಮಾನ್ಯ ಜೀವನ ನಡೆಸಲು ಕಷ್ಟವಾಗುತ್ತಿದೆ ಎಂದು ಯಶಸ್ವಿನಿ ಹೇಳಿದ್ದಾರೆ.

ಈ ಪ್ರಕರಣದಲ್ಲಿ ಅತ್ಯಂತ ಗಂಭೀರ ಅಂಶವೆಂದರೆ, ಕಿರುಕುಳಕ್ಕೆ ವಿರೋಧ ವ್ಯಕ್ತಪಡಿಸಿದಾಗ ಜೀವ

ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಅವರು ತಕ್ಷಣ ಕ್ರಮ ಕೈಗೊಂಡು ಹಿರಿಯ ಪೊಲೀಸ್ ಅಧಿಕಾರಿಗೆ ಸಂಪೂರ್ಣ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಇಲಾಖಾ ಮಟ್ಟದಲ್ಲಿ ಈ ಪ್ರಕರಣವನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದ್ದು, ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ಸತ್ಯಾಸತ್ಯತೆ ತಿಳಿದುಕೊಳ್ಳುವ ಕಾರ್ಯ



ದ್ದವು. ವೈಟ್‌ಫೀಲ್ಡ್, ಬನ್ನೇರುಘಟ್ಟ ಸೇರಿದಂತೆ ಹಲವು ಭಾಗಗಳಲ್ಲಿ ಕೆಲ ಪೊಲೀಸ್ ಸಿಬ್ಬಂದಿ ಹಣದ ಸುಲಿಗೆ, ಡ್ರಗ್ಸ್ ದಂಧೆ, ಸುಳ್ಳು ಕೇಸ್ ದಾಖಲಿಸುವಂತಹ ಆರೋಪಗಳನ್ನು ಎದುರಿಸಿದ್ದ ಘಟನೆಗಳು ದಾಖಲಾಗಿವೆ. ಇಂತಹ ಪ್ರಕರಣಗಳ ಹಿನ್ನೆಲೆಯಲ್ಲೇ ಇದೀಗ ಮತ್ತೊಮ್ಮೆ ಲೈಂಗಿಕ ಕಿರುಕುಳದ ಆರೋಪ ಕೇಳಿಬಂದಿರುವುದು ಇಲಾಖೆಯ ವಿಶ್ವಾಸಾರ್ಹತೆಗೆ ಹೊಡೆತ ನೀಡುವಂತಾಗಿದೆ.

ಸಾಮಾನ್ಯವಾಗಿ ಪೊಲೀಸ್ ಇಲಾಖೆ ಜನರ ರಕ್ಷಣೆಗೆ ಕೆಲಸ ಮಾಡುವ ಸಂಸ್ಥೆಯಾಗಿದ್ದು, ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು ಕಾನೂನು ಪಾಲನೆ ಮತ್ತು ನೈತಿಕ ಮೌಲ್ಯಗಳನ್ನು ಕಾಪಾಡಬೇಕಾಗುತ್ತದೆ. ಆದರೆ ಇಂತಹ ಆರೋಪಗಳು ಹೊರಬರುತ್ತಿರುವುದು ಜನರಲ್ಲಿ ಭಯ ಹಾಗೂ ಅಸಮಾಧಾನ ಉಂಟು ಮಾಡುತ್ತಿದೆ. ವಿಶೇಷವಾಗಿ ಮಹಿಳೆಯರ ಭದ್ರತೆ ಬಗ್ಗೆ ಪ್ರಶ್ನೆಗಳು ಎದ್ದಿವೆ.

ಈ ಪ್ರಕರಣದಲ್ಲಿ ಸತ್ಯಾಸತ್ಯತೆ ಏನೆಂಬುದು ತನಿಖೆಯ ಬಳಿಕವೇ ಸ್ಪಷ್ಟವಾಗಲಿದೆ. ಆದರೆ ದೂರುದಾರೆಯು ನೀಡಿರುವ ಆಡಿಯೋ ಮತ್ತು ಡಿಜಿಟಲ್ ಸಾಕ್ಷ್ಯಾಧಾರಗಳು ಪ್ರಕರಣವನ್ನು ಗಂಭೀರವಾಗಿ

# ಲೇಡಿ ರೌಡಿಶೀಟರ್‌ಗೆ ಇನ್ಸ್‌ಪೆಕ್ಟರ್‌ನಿಂದ ಲೈಂಗಿಕ ಕಿರುಕುಳ ಆರೋಪ! ಆಡಿಯೋ ಸಾಕ್ಷ್ಯಗಳೊಂದಿಗೆ ದೂರು, ಇಲಾಖಾ ತನಿಖೆಗೆ ಆಯುಕ್ತರ ಆದೇಶ

ದೂರುದಾರೆಯಾದ ಯಶಸ್ವಿನಿ ನೀಡಿರುವ ಮಾಹಿತಿಯ ಪ್ರಕಾರ, ಇನ್ಸ್‌ಪೆಕ್ಟರ್ ಪಾಪಣ್ಣ ಹಲವು ದಿನಗಳಿಂದ ತನ್ನನ್ನು ನಿರಂತರವಾಗಿ ಕಿರುಕುಳ ನೀಡುತ್ತಿದ್ದರು. ಪ್ರತಿದಿನ ಮೊಬೈಲ್ ಕರೆಗಳ ಮೂಲಕ ಸಂಪರ್ಕ ಸಾಧಿಸಿ, ಅಸಭ್ಯವಾಗಿ ಮಾತನಾಡುವುದರ ಜೊತೆಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸುತ್ತಿದ್ದರು ಎಂಬ ಆರೋಪ ಕೇಳಿಬಂದಿದೆ. ಈ ಕಿರುಕುಳವನ್ನು ಪ್ರಶ್ನಿಸಿದಾಗ, 'ನನ್ನನ್ನು ಸರ್ ಎಂದು ಕರೆಯಬೇಡ, ನಾನು ನಿನ್ನ ಇನ್ಸ್‌ಪೆಕ್ಟರ್ ಅಲ್ಲ, ನಿನ್ನ ಬಾಯ್‌ಫ್ರೆಂಡ್' ಎಂದು ಹೇಳಿ ಮತ್ತಷ್ಟು ಒತ್ತಡ ಹೇರುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಮಾನಸಿಕವಾಗಿ ಕಂಗೆಟ್ಟ ಯಶಸ್ವಿನಿ, ನ್ಯಾಯಕ್ಕಾಗಿ ಮೇಲಾಧಿಕಾರಿಗಳ ಮೊರೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಯಶಸ್ವಿನಿ ತನ್ನ ದೂರಿನಲ್ಲಿ, ಈ ಸಂಬಂಧ ಕೇವಲ ಇತ್ತೀಚಿನ ಘಟನೆಗಳಲ್ಲ, ಹಲವು ವರ್ಷಗಳಿಂದಲೂ ಇನ್ಸ್‌ಪೆಕ್ಟರ್ ಪಾಪಣ್ಣ ತನ್ನ ಮೇಲೆ ದುರ್ವ್ಯವಹಾರ ನಡೆಸುತ್ತಿದ್ದಾನೆ ಎಂದು ಗಂಭೀರ ಆರೋಪ ಮಾಡಿದ್ದಾರೆ. 2017ರಲ್ಲಿ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಪಾಪಣ್ಣ ಇನ್ಸ್‌ಪೆಕ್ಟರ್ ಆಗಿದ್ದಾಗಲೇ ಪರಿಚಯವಾಗಿದ್ದು, ಆಗಲೂ ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಅವರು ಹೇಳಿದ್ದಾರೆ. ಆ ಬಳಿಕ ಪಾಪಣ್ಣ ಕೋಣನಕುಂಟೆ ಠಾಣೆಗೆ ವರ್ಗಾವಣೆಗೊಂಡರೂ, ತನ್ನ ಮೇಲಿನ ಕಿರುಕುಳ ನಿಲ್ಲಲಿಲ್ಲ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಬೆದರಿಕೆ ಹಾಕಲಾಗಿದೆ ಎಂಬ ಆರೋಪ. ದೂರುದಾರೆಯು ತನ್ನ ದೂರಿನಲ್ಲಿ, ಈ ವಿಷಯವನ್ನು ಬಹಿರಂಗಪಡಿಸಿದರೆ ತನ್ನನ್ನೂ ತನ್ನ ಮಕ್ಕಳನ್ನೂ ಸುಪಾರಿ ಕೊಟ್ಟು ಕೊಲೆ ಮಾಡಿಸುವುದಾಗಿ ಪಾಪಣ್ಣ ಬೆದರಿಕೆ ಹಾಕಿದ್ದಾನೆ ಎಂದು ಹೇಳಿದ್ದಾಳೆ. ಈ ಹೇಳಿಕೆ ಪ್ರಕರಣದ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿದ್ದು, ಪೊಲೀಸ್ ಇಲಾಖೆಯೊಳಗಿನ ಶಿಸ್ತು ಹಾಗೂ ನೈತಿಕತೆ ಕುರಿತು ಪ್ರಶ್ನೆಗಳು ಎದ್ದಿವೆ.


ಕಮೀಷನರ್ ಸೀಮಂತ್‌ಕುಮಾರ್ ಸಿಂಗ್

ಯಶಸ್ವಿನಿ ತನ್ನ ಆರೋಪಗಳಿಗೆ ಬಲ ನೀಡಲು ವಾಟ್ಸ್‌ಆಪ್ ಚಾಟ್ ಸ್ಕ್ರೀನ್‌ಶಾಟ್‌ಗಳು, ಅಶ್ಲೀಲ ಸಂದೇಶಗಳ ದಾಖಲೆಗಳು ಮತ್ತು ಫೋನ್ ಸಂಭಾಷಣೆಯ ಆಡಿಯೋ ಕ್ಲಿಪ್‌ಗಳನ್ನು ಸಹ ಸಾಕ್ಷ್ಯವಾಗಿ ಸಲ್ಲಿಸಿದ್ದಾರೆ. ಈ ಎಲೆಕ್ಟ್ರಾನಿಕ್ ಸಾಕ್ಷ್ಯಾಧಾರಗಳು ಪ್ರಕರಣದ ತನಿಖೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ. ಈಗಾಗಲೇ ಕೆಲವು ಆಡಿಯೋ ಕ್ಲಿಪ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಸಾರ್ವಜನಿಕರಲ್ಲಿ ಭಾರೀ ಚರ್ಚೆಗೆ ಕಾರಣವಾಗಿವೆ. ಈ ವೈರಲ್ ಆಡಿಯೋಗಳಲ್ಲಿ ಆರೋಪಿತ ಇನ್ಸ್‌ಪೆಕ್ಟರ್‌ನ ಧ್ವನಿಯಾಗಿದೆ ಎಂಬ ಮಾತುಗಳು ಕೇಳಿಬರುತ್ತಿದ್ದು, ಪ್ರಕರಣದ ಗಂಭೀರತೆ ಹೆಚ್ಚಾಗಿದೆ.

ನಡೆಯಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸ್ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ, ತನಿಖೆ ಪೂರ್ಣಗೊಂಡ ನಂತರ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. ಆರೋಪಗಳು ಸಾಬೀತಾದರೆ ಸಂಬಂಧಿತ ಅಧಿಕಾರಿಯ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸುವ ಸಾಧ್ಯತೆ ಇದೆ. ಈ ಪ್ರಕರಣವು ಕೇವಲ ಒಬ್ಬ ಅಧಿಕಾರಿ ವಿರುದ್ಧದ ಆರೋಪವಾಗಿಯೇ ಉಳಿಯದೆ, ಪೊಲೀಸ್ ಇಲಾಖೆಯ ಇಮೇಜ್ ಮೇಲೆ ಪರಿಣಾಮ ಬೀರುವಂತಹ ಘಟನೆ ಎಂದು ಪರಿಗಣಿಸಲಾಗುತ್ತಿದೆ.

ಇದೇ ಸಂದರ್ಭದಲ್ಲಿ, ಬೆಂಗಳೂರು ಪೊಲೀಸ್ ಇಲಾಖೆಯಲ್ಲಿ ಇಂತಹ ಆರೋಪಗಳು ಇದೇ ಮೊದಲಲ್ಲ ಎಂಬ ಮಾತುಗಳು ಕೇಳಿಬರುತ್ತಿವೆ. ಹಿಂದೆಯೂ ಕೆಲವು ಪೊಲೀಸ್ ಸಿಬ್ಬಂದಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿ

ಪರಿಗಣಿಸುವಂತೆ ಮಾಡಿವೆ. ಈಗ ಎಲ್ಲರ ಗಮನ ತನಿಖೆಯ ಫಲಿತಾಂಶದ ಮೇಲೆ ನೆಟ್ಟಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಸಾರ್ವಜನಿಕರಿಂದ ಕೇಳಿಬರುತ್ತಿದೆ.

ಒಟ್ಟಿನಲ್ಲಿ, ಕೋಣನಕುಂಟೆ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಪ್ರಕರಣವು ಬೆಂಗಳೂರು ನಗರದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದ್ದು, ಪೊಲೀಸ್ ಇಲಾಖೆಯ ಒಳಗಣ್ಣಿನ ವಿಚಾರಗಳು ಮತ್ತೆ ಬಹಿರಂಗವಾಗುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ಈ ಪ್ರಕರಣ ಯಾವ ತಿರುವು ಪಡೆಯುತ್ತದೆ ಎಂಬುದು ಕುತೂಹಲ ಮೂಡಿಸಿದೆ.







**ಮಂಗಳೂರು ನಗರದಲ್ಲಿ ಕಳೆದ ಹಲವು ತಿಂಗಳಿನಿಂದ ನಿರ್ಮಾಣವಾಗಿದ್ದ ಶಾಂತಿಯ ವಾತಾವರಣವನ್ನು ಬೆಚ್ಚಿಬೀಳಿಸುವಂತಹ ಘಟನೆ ಇದೀಗ ಬೆಳಕಿಗೆ ಬಂದಿದೆ. ಕಟ್ಟುನಿಟ್ಟಿನ ಪೊಲೀಸ್ ಕ್ರಮಗಳಿಂದ ರೌಡಿಸಂ, ಮಾದಕ ಜಾಲ ಹಾಗೂ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿದ್ದ ವೇಳೆಯಲ್ಲೇ, ತೊಕ್ಕೊಟ್ಟು ಫ್ಲೈ ಓವರ್ ಮೇಲೆಯೇ ರೌಡಿಶೀಟರ್ ಸೈಯ್ಯದ್ ಆರೀಫ್ ಹತ್ಯೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ. ಮುಂಜಾನೆ ಸಮಯದಲ್ಲಿ ನಡೆದ ಈ ದಾಳಿ, ಹಳೆಯ ವೈಷಮ್ಯ ಹಾಗೂ ಗ್ಯಾಂಗ್ ವೈಮನಸ್ಸಿನ ಭೀಕರ ಮುಖವನ್ನು ಮತ್ತೊಮ್ಮೆ ಹೊರತಂದಿದ್ದು, ಮಂಗಳೂರು ನಗರದಲ್ಲಿ ಮತ್ತೆ ಅಶಾಂತಿಯ ಸುಳಿವು ಮೂಡಿಸಿದೆ.**

# ಫ್ಲೈ ಓವರ್ ಮೇಲೆಯೇ ಬಿತ್ತು ರೌಡಿಶೀಟರ್ ಶವ!

ದಕ್ಷಿಣ ಕನ್ನಡ


ಮೋಹನ್ ಬೋಳಂಗಡಿ

ಕಡಲ ನಗರಿ ಮಂಗಳೂರು ಕಳೆದ 10 ತಿಂಗಳಿನಿಂದ ಸ್ತಬ್ಧವಾಗಿತ್ತು. ಯಾವುದೇ ರೀತಿಯ ರೌಡಿಸಂ ಚಟುವಟಿಕೆಗಳು ನಡೆಯುತ್ತಿರಲಿಲ್ಲ. ಇದಕ್ಕೆ ಕಾರಣವಾದದ್ದು ಇಬ್ಬರು ಐಪಿಎಸ್ ಅಧಿಕಾರಿಗಳ ಕಟ್ಟುನಿಟ್ಟಿನ ಕ್ರಮ. ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿ ಕೆ. ಅರುಣ್ ಅವರ ಸಕಾಲಿಕ ಕಾರ್ಯಾಚರಣೆಗಳು ಇಡೀ ಜಿಲ್ಲೆಯಲ್ಲಿ ನೆಮ್ಮದಿಯ ವಾತಾವರಣವನ್ನು ಸೃಷ್ಟಿಸಿತ್ತು. ಎಲ್ಲಾ ರೀತಿಯ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿತ್ತು. ಎಲ್ಲಿಯವರೆಗೆ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದರೆಂದರೆ ಜೂಜಾಟಕ್ಕೆ ಅವಕಾಶ ಇರುವಂತಹ ಸಾಂಪ್ರದಾಯಿಕ ಕೋಳಿ ಅಂಕಕ್ಕೂ ತಡೆ ಬಿದ್ದಿತ್ತು. ಒಟ್ಟಾರೆಯಾಗಿ ಶಾಂತಿಯುತ ಜಿಲ್ಲೆಯ ಹೆಸರು ಮರುಕಳಿಸುತ್ತಿತ್ತು. ಪೊಲೀಸರು ನಿಷ್ಪಕ್ಷಪಾತವಾಗಿ ಕ್ರಮ ಕೈಗೊಳ್ಳುತ್ತಿದ್ದರು. ಜಿಲ್ಲಾದ್ಯಂತ ನಿಯಂತ್ರಣಕ್ಕೆ ಬಾರದ ರೀತಿಯಲ್ಲಿ ವ್ಯಾಪಕವಾಗಿದ್ದ ಮಾದಕ ವಸ್ತು ಸಾಗಾಟ ಮತ್ತು ಮಾರಾಟ ಜಾಲದ ನಡುವನ್ನೇ ಪೊಲೀಸರು ಮುರಿದಿದ್ದರು. ಕಳೆದ 10 ತಿಂಗಳಿನಿಂದ 300ಕ್ಕೂ ಹೆಚ್ಚು ಮಂದಿ ಮಾದಕ ವಸ್ತು ಜಾಲದಲ್ಲಿ ಒಳಗೊಂಡವರು ಜೈಲು ಪಾಲಾಗಿದ್ದಾರೆ ಅಂದರೆ ಪೊಲೀಸರ ಕಾರ್ಯಾಚರಣೆ ಯಾವ ಮಟ್ಟದಲ್ಲಿತ್ತು ಎನ್ನುವುದನ್ನು ಅರ್ಥೈಸಿಕೊಳ್ಳಬಹುದು. ಅಂತಹ ವಾತಾವರಣ ನಿರ್ಮಾಣವಾಗಿರುವಂತಹ ಸಂದರ್ಭದಲ್ಲಿಯೇ ರೌಡಿ ಶೀಟರ್‌ನ ಹೆಣ ಮಂಗಳೂರು ಹೊರವಲಯದ ತೊಕ್ಕೊಟ್ಟು ಫ್ಲೈ ಓವರ್ ಮೇಲೆ ಬಿದ್ದಿದೆ. ಪೊಲೀಸರ ತಂಡಗಳು ಹಂತಕರ ಬೆನ್ನಿಗೆ ಬಿದ್ದಿದೆ. ಪೊಲೀಸರು 6 ಮಂದಿ ಹಂತಕರನ್ನು ಗುರುತು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಈ ಹತ್ಯೆ ನಡೆದದ್ದು ಹಳೆಯ ದ್ವೇಷದ ಕಾರಣಕ್ಕಾಗಿ ಮತ್ತು ಕೆಲವೇ ಸಮಯಗಳ ಹಿಂದೆ ನಡದಿದ್ದ ರೌಡಿಯೊಬ್ಬನ ಸಂಶಯಾಸ್ಪದ ಸಾವಿನ ಹಿನ್ನೆಲೆಯಲ್ಲಿ. ಒಂದೇ ಸಮುದಾಯದ ಹಂತಕ ತಂಡ ಅದೇ ಸಮುದಾಯದ ರೌಡಿ ಶೀಟರ್‌ನ ಹೆಣ ಕೆಡವಿದೆ.



### ಆಗಿದ್ದೇನು?

ಮುಂಜಾನೆಯ ವೇಳೆಗೆ ತೊಕ್ಕೊಟ್ಟು ಫ್ಲೈ ಓವರ್‌ನ ಮೇಲ್ಗಡೆ ಹಂತಕ ತಂಡದ ಕೈಗೆ ಸಿಕ್ಕಿ ಹತನಾದ ರೌಡಿ ಶೀಟರ್ ಸೈಯ್ಯದ್ ಆರೀಫ್. ಮೂಲತಃ ಈತ ಮಂಗಳೂರಿನ ಕುದ್ರೋಳಿಯವ. ಸುಮಾರು 5 ದಶಕಗಳ ಹಿಂದೆ ಕುದ್ರೋಳಿ ಪರಿಸರದಲ್ಲಿ ತಂಡ ಕಟ್ಟಿಕೊಂಡು ದಾಂಧಲೆ ನಡೆಸುತ್ತಿದ್ದ ಖಾವಂಞ ಎಂಬವರ ಮಗ. ಖಾವಂಞ ಮೇಲೆ ಬಂದರು ಪೊಲೀಸ್ ಠಾಣೆಯಲ್ಲಿ 30ಕ್ಕೂ ಹೆಚ್ಚು ಹಲ್ಲೆ ಪ್ರಕರಣಗಳು ದಾಖಲಾಗಿತ್ತು. ಕೆಲವು ವರ್ಷಗಳ ಹಿಂದೆ ಖಾವಂಞಯನ್ನು ಬಂದರು ಪೊಲೀಸರು ಹಳೆಯ ಪ್ರಕರಣವೊಂದರ ವಾರಂಟ್‌ನ ಆಧಾರದಲ್ಲಿ ಬಂಧಿಸಿ ಜೈಲಿಗೆ ಅಟ್ಟಿದ್ದರು. ಆತನ ಮೇಲಿದ್ದ ಎಲ್ಲಾ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಯಾಗಿವೆ. ಸುಮಾರು 80 ವರ್ಷ ಪ್ರಾಯದ ಖಾವಂಞ ಸದ್ಯ ತೀವ್ರ ಅನಾರೋಗ್ಯ ಪೀಡಿತನಾಗಿ ಅತ್ತಾವರದ ತನ್ನ ಮಗನ ಮನೆಯಲ್ಲಿದ್ದ. ಆತನ ಇಳಿ ವಯಸ್ಸಿನಲ್ಲಿ ತನ್ನ ಮಗನ ಸಾವನ್ನು ಕಾಣುವಂತಹ ದೌರ್ಭಾಗ್ಯ ಒದಗಿದೆ. ಅಂತಹ ದೌರ್ಭಾಗ್ಯವಂತನೇ ಸೈಯ್ಯದ್ ಆರೀಫ್. 46ರ ಹರೆಯ. ಮೂಲತಃ ಕುದ್ರೋಳಿಯವನಾಗಿದ್ದರೂ ಸದ್ಯಕ್ಕೆ ಕರ್ನಾಟಕ-ಕೇರಳ ಗಡಿಭಾಗವಾದ ತಲಪಾಡಿ, ಕಿನ್ಯದ ಅಜ್ಜಿನಡ್ಕ ಎಂಬಲ್ಲಿ ಪತ್ನಿ ಮಕ್ಕಳೊಂದಿಗೆ ವಾಸವಿದ್ದಾನೆ. ಕಳೆದ 28 ವರ್ಷಗಳಿಂದ ಮಂಗಳೂರಿನ ಮೀನುಗಾರಿಕಾ ಬಂದರು ಧಕ್ಕೆಯಲ್ಲಿ ಮೀನಿನ ವ್ಯವಹಾರ ನಡೆಸುತ್ತಿದ್ದ. ಈತನ ಮೇಲೂ 10-12 ಪ್ರಕರಣಗಳು ಇವೆ. ಅದು ಎಲ್ಲವೂ ಮೀನಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಉಂಟಾದ ವೈಮನಸ್ಸಿನಿಂದ ಆದ ಘಟನೆಗಳು. ಬಹುತೇಕ ಪ್ರಕರಣಗಳು ನ್ಯಾಯಾಲಯದಲ್ಲಿ ಖುಲಾಸೆಗೊಂಡಿವೆ. ಕೆಲವು ಪ್ರಕರಣಗಳು ವಿಚಾರಣೆ ಹಂತದಲ್ಲಿದೆ. ಬಹುತೇಕ ಪ್ರಕರಣಗಳಲ್ಲಿ ಪರಸ್ಪರ ರಾಜಿಯೂ ಆಗಿದೆ. ಇಂತಹ ಹಿನ್ನೆಲೆಯ ಸೈಯ್ಯದ್ ಆರೀಫ್ ಮಾರ್ಚ್ 27ರಂದು ಮುಂಜಾನೆ 3.30ರ ವೇಳೆಗೆ ತೊಕ್ಕೊಟ್ಟು ಫ್ಲೈ ಓವರ್‌ನಲ್ಲಿ ಹಂತಕ ತಂಡದ ಕೈಗೆ ಸಿಕ್ಕಿ ಜೀವ ಕಳೆದುಕೊಂಡಿದ್ದಾನೆ.



### ನಡೆದದ್ದೇನು?

ಸೈಯ್ಯದ್ ಆರೀಫ್ ದಿನನಿತ್ಯ ಅಜ್ಜಿನಡ್ಕದ ತನ್ನ ಮನೆಯಿಂದ ಹೊರಡುವುದು ಮುಂಜಾನೆ 3.00 ಗಂಟೆಯ ವೇಳೆಗೆ. ಮುಂಜಾನೆ 4.00 ಗಂಟೆಗೆ ಮೀನುಗಾರಿಕಾ ಬಂದರು ಧಕ್ಕೆಯಲ್ಲಿ ಮೀನಿನ ವ್ಯವಹಾರ ಆರಂಭವಾಗುತ್ತದೆ. ಈ ವೇಳೆಗೆ ಸೈಯ್ಯದ್ ಆರೀಫ್ ಅಲ್ಲಿ ಬಂದೇ ಬರುತ್ತಾನೆ. ದಿನನಿತ್ಯ ಮುಂಜಾನೆ 3.00 ಗಂಟೆಗೆ ಎದ್ದೇಳುವ ಆರೀಫ್ ಸ್ನಾನ ಮುಗಿಸಿ ನಮಾಜ್ ನಿರ್ವಹಿಸಿ ಉಪಹಾರ ಸೇವಿಸಿ ತನ್ನ ರಾಯಲ್ ಎನ್‌ಫೀಲ್ಡ್ ಬೈಕಿಗೆ ಕಿಕ್ ಹೊಡೆದನೆಂದರೆ ಮತ್ತೆ ನಿಲ್ಲುವುದು ಬಂದರಿನ ಧಕ್ಕೆಯಲ್ಲಿಯೇ. ಅದೇ ರೀತಿ ಮಾರ್ಚ್ 27 ರಂದು ಮುಂಜಾನೆಯೂ ಬೈಕ್‌ನಲ್ಲಿ ಹೊರಟಿದ್ದ. ಮನೆಯಿಂದ ಸುಮಾರು 8 ಕಿ.ಮೀ. ದೂರಕ್ಕೆ ಮಂಗಳೂರು ಕಡೆಗೆ ಇರುವ ಊರೇ ತೊಕ್ಕೊಟ್ಟು. ಇಲ್ಲಿ ಸುಮಾರು ಅರ್ಧ ಕಿ.ಮೀ. ಉದ್ದದ ಫ್ಲೈ ಓವರ್ ಇದೆ. ಆ ಫ್ಲೈ ಓವರ್‌ನ ಮೇಲೆ ಸೈಯ್ಯದ್ ಆರೀಫ್ ಚಲಾಯಿಸುತ್ತಿದ್ದ ಬೈಕ್ ಬರುತ್ತಿದ್ದಂತೆಯೇ ಹಿಂಬದಿಯಿಂದ ಬೆನ್ನಟ್ಟಿಕೊಂಡು ಬಂದದ್ದು ಕೇರಳ ನೋಂದಣಿ ಹೊಂದಿದ್ದ ಇನೋವಾ ಕಾರು. ಫ್ಲೈ ಓವರ್‌ನ ಮಧ್ಯಭಾಗದಲ್ಲಿ ಇನೋವಾ ಕಾರು ಮುಂದಿನಿಂದ ಹೋಗುತ್ತಿದ್ದ ಸೈಯ್ಯದ್ ಆರೀಫ್‌ನ ಬೈಕ್‌ಗೆ ಗುದ್ದಿದೆ. ಆರೀಫ್ ಬೈಕ್ ಸಹಿತ ರಸ್ತೆಗೆ ಬಿದ್ದಿದ್ದಾನೆ. ಆ ಸಂದರ್ಭದಲ್ಲಿ ಕಾರಿನಿಂದ ಇಳಿದ ಹಂತಕ ತಂಡ ಮನಸ್ಸೋಇಚ್ಚೆ ಕಡಿದು ಕೊಲೆಗೈದಿದ್ದು, ಆರೀಫ್ ಸತ್ತಿದ್ದಾನೆ ಎನ್ನುವುದನ್ನು ಖಚಿತಪಡಿಸಿಕೊಂಡೇ ಮಂಗಳೂರು ಕಡೆಗೆ ಪರಾರಿಯಾಗಿದೆ.

ಫ್ಲೈ ಓವರ್ ಮೇಲೆ ಬುಲೆಟ್ ಬೈಕ್ ಬಿದ್ದಿತ್ತು. ಪಕ್ಕದಲ್ಲಿಯೇ ರಕ್ತದ ಮಡುವಿನಲ್ಲಿ ಯುವಕ ಬಿದ್ದಿದ್ದ. ಇದನ್ನು ಕಂಡ ಸಾರ್ವಜನಿಕರು ಅಪಘಾತ ಸಂಭವಿಸಿರಬೇಕೆಂದು ಭಾವಿಸಿ ಉಳ್ಳಾಲ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ಇದು ಅಪಘಾತವಲ್ಲ ಬದಲಾಗಿ ಕೊಲೆಯೆನ್ನುವುದು ಖಚಿತವಾಗಿತ್ತು. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳು ಧಾವಿಸಿ ಬಂದಿದ್ದರು. ಕೊಲೆಗೀಡಾದವ ಸೈಯ್ಯದ್ ಆರೀಫ್ ಹಾಗೂ ಉಳ್ಳಾಲ ಮತ್ತು ಪಾಂಡೇಶ್ವರ ಪೊಲೀಸ್ ಠಾಣೆಯ ರೌಡಿ ಶೀಟರ್ ಎಂದು ಖಚಿತವಾಗುತ್ತಿದ್ದಂತೆಯೇ ಇದು ರೌಡಿ ತಂಡಗಳ ಮಧ್ಯೆ ಇರುವ ವೈಷಮ್ಯದ ಹಿನ್ನೆಲೆಯಲ್ಲಿ ನಡೆದ ಕೊಲೆ ಎನ್ನುವುದು ಪೊಲೀಸರಿಗೆ ಖಚಿತವಾಗಿತ್ತು.

ಪೊಲೀಸರ ತಂಡ ತಕ್ಷಣವೇ ಹಂತಕರ ಪತ್ತೆಗೆ ಕಾರ್ಯಾಚರಣೆಗೆ ಇಳಿದಿತ್ತು. ಅದೇ ವೇಳೆಯಲ್ಲಿ ಬಂಟ್ವಾಳ ತಾಲೂಕಿನ ಮಾಣಿ ಬಳಿಯ ಬುಡೋಳಿ ಎಂಬಲ್ಲಿ ಸೈಯ್ಯದ್ ಆರೀಫ್ ಹತ್ಯೆಗೆ ಬಳಸಲಾಗಿದ್ದ ಇನೋವಾ ಕಾರು ಅನಾಥ ಸ್ಥಿತಿಯಲ್ಲಿ ನಿಂತಿತ್ತು. ಕಾರನ್ನು ಕಂಡ ಸ್ಥಳೀಯರು ವಿಟ್ಲ ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಟ್ಲ ಠಾಣಾ ಇನ್ಸ್‌ಪೆಕ್ಟರ್ ಪ್ರಕಾಶ್ ದೇವಾಡಿಗ ಮತ್ತು ಅವರ ಸಿಬ್ಬಂದಿಗಳು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದಾಗ ಕಾರಿನಲ್ಲಿ ರಕ್ತದ ಕಲೆಗಳು ಕಂಡು ಬಂದವು. ಸಮೀಪದಲ್ಲಿಯೇ ಸಾಕ್ಸ್, ಕೈಗವಸುಗಳು, ರಕ್ತಸಿಕ್ತ ಬಟ್ಟೆಗಳು ಪತ್ತೆಯಾದವು. ತಕ್ಷಣ ಉಳ್ಳಾಲ ಪೊಲೀಸರಿಗೆ ಮಾಹಿತಿ ರವಾನಿಸಲಾಯಿತು. ಹತ್ಯಾ ಪ್ರಕರಣದ ತನಿಖೆಗೆ ಇಳಿದಿದ್ದ ಪೊಲೀಸರ ತಂಡ ಎಫ್‌ಎಸ್‌ಐಎಲ್ ಅಧಿಕಾರಗಳ ತಂಡದೊಂದಿಗೆ ಬುಡೋಳಿಗೆ ಧಾವಿಸಿ ಕಾರನ್ನು ವಶಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಿದಾಗ ಅದೇ ಕಾರಿನಲ್ಲಿದ್ದ ತಂಡವೇ ಸೈಯ್ಯದ್ ಆರೀಫ್‌ನನ್ನು ಹತ್ಯೆ ಮಾಡಿದೆ ಎನ್ನುವುದನ್ನು ಖಚಿತ ಪಡಿಸಿಕೊಂಡಿದೆ.

ಕಾರು ಪತ್ತೆಯಾದ ಕೂಡಲೇ ಪೊಲೀಸರ ತಂಡ ಕಾರಿನ ಮಾಲೀಕನ ಪತ್ತೆಗೆ ಮುಂದಾಯಿತು. ಕಾರಿನ ನೋಂದಣಿ ಸಂಖ್ಯೆ ಕೇರಳದ್ದಾಗಿದ್ದು, ಅದರ ಮೂಲಕವೇ ಮಾಲಕನನ್ನು ಸಂಪರ್ಕಿಸಿ ಉಳ್ಳಾಲಕ್ಕೆ ಕರೆಸಲಾಯಿತು. ಆ ವೇಳೆಗೆ ಬಯಲಿಗೆ ಬಂದ ಸತ್ಯ ಎಂದರೆ ಉಳ್ಳಾಲದ ಇಮ್ರಾನ್ ಎಂಬಾತ ಈ ಕಾರನ್ನು ಪಡೆದುಕೊಂಡಿದ್ದ ಮತ್ತು ಆತನೇ ಹಂತಕ ತಂಡಕ್ಕೆ ಕಾರು ನೀಡಿದ್ದ ಎನ್ನುವುದು. ಸದ್ಯಕ್ಕೆ ಇಮ್ರಾನ್‌ನನ್ನು ಪೊಲೀಸರು ವಶದಲ್ಲಿರಿಸಿಕೊಂಡಿದ್ದು ಕಾರು ಮಾಲೀಕನನ್ನು ಬಿಟ್ಟು ಕಳುಹಿಸಿದ್ದಾರೆ.

### ಬೆಂಗಳೂರಿನತ್ತ ತಂಡ

ಮಾಣಿ ಸಮೀಪದ ಬುಡೋಳಿಗೆ ಹಂತಕ ತಂಡ ಸಮೀಪಿಸಿದಾಗ ಕಾರಿನಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿತ್ತು. ಅಲ್ಲೇ ಪಕ್ಕದಲ್ಲಿ ಮನೆಯೊಂದರ ಎದುರು ರಿಕ್ಷಾ ನಿಂತಿತ್ತು. ಸಮಯ ಮುಂಜಾನೆ 6.00 ಗಂಟೆಯಾಗಿತ್ತು. ಹಂತಕರು ಆ ಮನೆಗೆ ಹೋಗಿ ಬಾಗಿಲು ತಟ್ಟಿದ್ದರು. ಬಾಗಿಲು ತೆಗೆದು ಹೊರಬಂದವರು ರಿಕ್ಷಾದ ಚಾಲಕ ಮಾಲಕರಾಗಿದ್ದ ಖಾಸಿಮ್ ಅವರು. ಹಂತಕರು ಅವರಲ್ಲಿ ಕಾರು ಕೈಕೊಟ್ಟಿದೆ. ಉಪ್ಪಿನಂಗಡಿಗೆ ರಿಕ್ಷಾದಲ್ಲಿ ಡ್ರಾಪ್ ಕೊಡುವಂತೆ ವಿನಂತಿಸಿದ್ದರು. ಆದರೆ 6 ಮಂದಿ ಇರುವುದರಿಂದ ರಿಕ್ಷಾದಲ್ಲಿ ಕರೆದೊಯ್ಯಲು ಸಾಧ್ಯ ಇಲ್ಲ ಎಂದು ಖಾಸಿಮ್ ಅವರು ಕೋರಿಕೆಯನ್ನು ತಿರಸ್ಕರಿಸಿದ್ದರು. ತದನಂತರ 6 ಮಂದಿ ಹಂತಕರು ಹೆದ್ದಾರಿ ದಾಟಿ ಮಂಗಳೂರಿನಿಂದ ಹಾಸನ ಕಡೆಗೆ ಹೋಗುತ್ತಿದ್ದ ತರಕಾರಿ ಕೊಂಡೊಯ್ಯುವ ಟಾಟಾ ಏಸ್ ಲಾರಿಯಲ್ಲಿ ಹೋಗಿದ್ದರು.

ಇದನ್ನು ಖಚಿತಪಡಿಸಿಕೊಂಡ ಪ್ರಕರಣದ ತನಿಖೆಗೆ ಇಳಿದಿದ್ದ ಮಂಗಳೂರು ಸಿಸಿಬಿ ಪೊಲೀಸರು ಉಪ್ಪಿನಂಗಡಿಗೆ ತೆರಳಿ ಕೆಲವು ಮಾಹಿತಿಗಳನ್ನು ಸಂಗ್ರಹಿಸಿ ಬೆಂಗಳೂರಿಗೆ ಹೋಗಿ ಅಪರಾಧಿಗಳ ಪತ್ತೆಗೆ ಪ್ರಯತ್ನ ನಡೆಸುತ್ತಿದ್ದಾರೆ. ಸೈಯ್ಯದ್ ಆರೀಫ್ ಹತ್ಯೆಯಲ್ಲಿ ಭಾಗಿಗಳಾದಂತಹ 6 ಮಂದಿ ಆರೋಪಿಗಳ ಗುರುತು ಪತ್ತೆಯಾಗಿದೆ. ಆರೋಪಿಗಳೆಲ್ಲರೂ ಪಡೀಲ್ ಬಜಾಲ್‌ನ ತಲ್ಲತ್ ಎಂಬಾತನೊಂದಿಗೆ ನಿಕಟ ಸಂಪರ್ಕದಲ್ಲಿದ್ದವರು ಎನ್ನುವಂತಹ ಮಾಹಿತಿ ಲಭ್ಯವಾಗಿದೆ. ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಸೈಯ್ಯದ್ ಆರೀಫ್‌ನ ಮಗ ನೀಡಿದ್ದ ದೂರಿನಂತೆ ಬಜಾಲ್‌ನ ಮಹಮ್ಮದ್ ಅರಫತ್ ಅಲಿ ಮತ್ತು ಇತರರ ವಿರುದ್ಧ ಕೇಸು ದಾಖಲಾಗಿದೆ. ಅರಫತ್ ಅಲಿ ಮತ್ತು ಸೈಯ್ಯದ್ ಆರೀಫ್‌ಗೆ ಈ ಹಿಂದೆ ಗಲಾಟೆಯಾಗಿದ್ದು, ಇದುವೇ ಹತ್ಯೆಗೆ ಮೂಲ ಕಾರಣ ಎನ್ನುವುದು ಬಯಲಾಗಿದೆ.



## ಆರೀಫ್ ಹತ್ಯೆಗೆ ನೈಜ ಕಾರಣವೇನು?

ಸೈಯ್ಯದ್ ಆರೀಫ್ ಕಳೆದ 28 ವರ್ಷಗಳಿಂದ ಮೀನುಗಾರಿಕಾ ಧಕ್ಕೆಯಲ್ಲಿ ಮೀನು ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ. ಈತನಿಗೂ ಈತನ ಜೊತೆಯಲ್ಲಿಯೇ ಮೀನು ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದ ಅವರ ಮಧ್ಯೆ ಗಲಾಟೆಗಳಾಗುತ್ತಿತ್ತು. ಈ ಸಂಬಂಧ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ 6-7 ಪ್ರಕರಣಗಳು ದಾಖಲಾಗಿದ್ದವು. ಇತ್ತೀಚೆಗೆ ಆ ಎರಡೂ ತಂಡಗಳ ಮಧ್ಯೆ ರಾಜಿ ಪಂಚಾತಿಕೆಯೂ ನಡೆದಿತ್ತು. ಕೆಲವು ತಿಂಗಳ ಹಿಂದೆ ಪಡೀಲ್ ಬಜಾಲ್‌ನ ಟೊಪ್ಪಿ ನೌಫಾಲ್ ಎಂಬಾತನ ಮೃತದೇಹ ಜರ್ಜರಿತ ಸ್ಥಿತಿಯಲ್ಲಿ ಕಾಸರಗೋಡು ಜಿಲ್ಲೆಯ ಉಪ್ಪಳ ರೈಲ್ವೇ ಗೇಟ್ ಬಳಿ ಪತ್ತೆಯಾಗಿತ್ತು. ಆತನನ್ನು ಕೊಲೆಗೈಯ್ಯಲಾಗಿದೆ ಎಂದು ಆತನ ಸಂಬಂಧಿಕರು ಮತ್ತು ಸ್ನೇಹಿತರು ನಂಬಿದ್ದರು. ನೌಫಾಲ್ ಮತ್ತು ಆತನ ತಂಡ 2022ರಲ್ಲಿ ಮಹಮ್ಮದ್ ಆರೀಫ್‌ನನ್ನು ಹಣಕಾಸಿನ ವಿವಾದಕ್ಕೆ ಸಂಬಂಧಿಸಿದಂತೆ ಹತ್ಯೆಗೈಯ್ಯಲು ಯತ್ನ ನಡೆಸಿತ್ತು. 2022 ಮೇ 24 ರಂದು ಉಚ್ಚಿಲದ ಮುಳ್ಳುಗುಡ್ಡೆಯಲ್ಲಿ ನೌಫಾಲ್, ಸಾದಿಕ್ ಹಾಗೂ ಇತರ ಐವರು ಈ ಕೃತ್ಯ ನಡೆಸಿದ್ದರು. ಕಾರಿನಲ್ಲಿ ಅವಿತುಕೊಳ್ಳುತ್ತಿದ್ದ ಈ ತಂಡ ಬೈಕಿನಲ್ಲಿ ಬರುತ್ತಿದ್ದ ಆರೀಫ್‌ನ ಮೇಲೆ ತಲವಾರಿನಿಂದ ಕೊಲೆಗೆ ಯತ್ನಿಸಿತ್ತು. ಈ ತಂಡವನ್ನು ಸಿಸಿಬಿ ಪೊಲೀಸರು ಮತ್ತು ಉಳ್ಳಾಲ ಪೊಲೀಸರು ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಿದ್ದರು. ಆರೀಫ್ ಅವರ ಸಹೋದರ ಕರೀಮ್ ಎಂಬಾತ ನೌಫಾಲ್ ಮತ್ತು ಆತನ ತಂಡದವರಿಂದ ಸಾಲ ಪಡೆದಿದ್ದು, ಹೆಚ್ಚುವರಿಯಾಗಿ ಬಡ್ಡಿ ಪಾವತಿಸದ ಕಾರಣಕ್ಕಾಗಿ ಈ ಹತ್ಯೆ ಯತ್ನ ನಡೆದಿತ್ತು. ಈ ಬಾರಿಯೂ ಇದೇ ರೀತಿಯಲ್ಲಿ ಸಂಚು ನಡೆಸಲಾಗಿದ್ದು, ಕೊಲೆಯಲ್ಲಿ ಪರ್ಯಾವಸಾನಗೊಂಡಿದೆ. ಕೆಲವು ದಿನಗಳ ಹಿಂದೆ ನೌಫಾಲ್ ಉಪ್ಪಳ ಬಳಿ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಾಗ ಸೈಯ್ಯದ್ ಆರೀಫ್ ತನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ಸಂಭ್ರಮಾಚರಣೆ ಮಾಡಿದ್ದ ಅಲ್ಲದೇ ನೌಫಾಲ್ ಸಾವಿನ ಹಿನ್ನೆಲೆಯಲ್ಲಿ ಆರೀಫ್‌ನ ಕೈವಾಡ ಇರಬೇಕು ಎಂದು ಭಾವಿಸಿ ನೌಫಾಲ್ ಸಹಚರರು ಈ ಕೃತ್ಯ ನಡೆಸಿದ್ದಾರೆ ಎನ್ನುವುದು ಪೊಲೀಸ್ ತನಿಖೆಯಲ್ಲಿ ಖಚಿತವಾಗಿದೆ.

# ಕ್ಲಾಸಲ್ಲೇ ಮೆಡಿಕಲ್ ವಿದ್ಯಾರ್ಥಿನಿಗೆ ಲವ್ ಯು ಎಂದ ಪ್ರೊಫೆಸರ್ ಅರೆಸ್ಟ್!

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕಿನ ಟಿ. ಬೇಗೂರು ಸಮೀಪದ ಸಿದ್ಧಾರ್ಥ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದಲ್ಲಿ ನಡೆದ ಘಟನೆ ಒಂದು ಶಿಕ್ಷಣ ಸಂಸ್ಥೆಯೊಳಗಿನ ಶಿಸ್ತಿನ ಪ್ರಶ್ನೆಯನ್ನು ಗಂಭೀರವಾಗಿ ಎತ್ತಿದೆ. ತರಗತಿ ನಡೆಯುತ್ತಿದ್ದ ಸಮಯದಲ್ಲೇ ಪ್ರಾಧ್ಯಾಪಕನೊಬ್ಬ ವಿದ್ಯಾರ್ಥಿನಿಗೆ ಪ್ರೇಮ ನಿವೇದನೆ ಮಾಡಿದ್ದಾನೆ ಎಂಬ ಆರೋಪ ಹೊರಬಂದಿದ್ದು, ಈ ಘಟನೆ ಕಾಲೇಜು ವಲಯದಲ್ಲಷ್ಟೇ ಅಲ್ಲದೆ ಸಾರ್ವಜನಿಕ ವಲಯದಲ್ಲಿಯೂ ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಮೈಕ್ರೋಬಯಾಲಜಿ ವಿಭಾಗದ ಪ್ರಾಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿದ್ದ ಅಬ್ದುಲ್ ರೆಹಮಾನ್ ಷರೀಫ್, ಮಾರ್ಚ್ 23ರಂದು ನಡೆದ ತರಗತಿಯಲ್ಲಿ ವಿದ್ಯಾರ್ಥಿನಿಗೆ ಚಾಕೊಲೇಟ್ ನೀಡುತ್ತಾ ಟಲವ್ ಯುಟ ಎಂದು ಪ್ರಪೋಸ್ ಮಾಡಿದನೆಂಬ ಆರೋಪ ಕೇಳಿಬಂದಿದೆ. ತರಗತಿಯಂತಹ ಗಂಭೀರ ಮತ್ತು ಶೈಕ್ಷಣಿಕ ವಾತಾವರಣದಲ್ಲಿ ನಡೆದ ಈ ರೀತಿಯ ವರ್ತನೆಗೆ ವಿದ್ಯಾರ್ಥಿನಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಇದೇ ಘಟನೆ ನಂತರದ ಗಲಾಟೆಗೆ ಕಾರಣವಾಗಿದೆ.



ಘಟನೆಯ ವಿವರಗಳ ಪ್ರಕಾರ, ಪ್ರಾಧ್ಯಾಪಕ ಅಬ್ದುಲ್ ವಿದ್ಯಾರ್ಥಿನಿಯೊಂದಿಗೆ ಮಾತನಾಡುವ ವೇಳೆ 'ನೀನು ನನಗೆ ಹಿಂದೆ ಪ್ರಪೋಸ್ ಮಾಡಿಲ್ಲವೇ?' ಎಂದು ಪ್ರಶ್ನಿಸಿದ್ದಾನೆ ಎನ್ನಲಾಗಿದೆ. ಇದಕ್ಕೆ ವಿದ್ಯಾರ್ಥಿನಿ ತಕ್ಷಣವೇ ಪ್ರತಿಕ್ರಿಯೆ ನೀಡಿ, ಇಂತಹ ಹೇಳಿಕೆಗಳ ಬಗ್ಗೆ ಸ್ಪಷ್ಟನೆ ಕೇಳಿದ್ದಾಳೆ. ಅಲ್ಲದೆ, ಪ್ರಾಧ್ಯಾಪಕ ಸಿಸಿಟಿವಿ ದೃಶ್ಯಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದಂತೆ, ವಿದ್ಯಾರ್ಥಿನಿ ಅದನ್ನು ತಕ್ಷಣ ತೋರಿಸುವಂತೆ ಒತ್ತಾಯಿಸಿದ್ದಾಳೆ. ಆದರೆ ಪ್ರಾಧ್ಯಾಪಕ 'ಈ ಬಗ್ಗೆ ನಾಳೆ ಮಾತನಾಡೋಣ' ಎಂದು ಹೇಳಿ ತರಗತಿಯಿಂದ ಹೊರನಡೆದಿದ್ದಾನೆ. ಈ ಘಟನೆ ತರಗತಿಯಲ್ಲಿದ್ದ ಇತರ ವಿದ್ಯಾರ್ಥಿಗಳಲ್ಲಿ ತೀವ್ರ ಅಸಮಾಧಾನ ಮತ್ತು ಆಕ್ರೋಶಕ್ಕೆ ಕಾರಣವಾಯಿತು.



ವಿದ್ಯಾರ್ಥಿನಿಯ ಪರವಾಗಿ ನಿಂತ ಸಹಪಾಠಿಗಳು, ಶಿಕ್ಷಕನ ವರ್ತನೆಯನ್ನು ಖಂಡಿಸಿ ಪ್ರಶ್ನೆ ಕೇಳಲು ಮುಂದಾದರು. 'ಸ್ತ್ರೀಯರ ಗೌರವವನ್ನು ಕಾಪಾಡುವ ಹೊಣೆಗಾರಿಕೆ ಶಿಕ್ಷಕರಿಗೇ ಇದೆ, ಆದರೆ ಈ ರೀತಿಯ ನಡೆ ಹೇಗೆ ಸಮರ್ಥಿಸಿಕೊಳ್ಳಬಹುದು?' ಎಂಬ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ಕೇಳಿದರೆಂಬ ಮಾಹಿತಿ ಲಭ್ಯವಾಗಿದೆ. ಪರಿಸ್ಥಿತಿ ಕ್ರಮೇಣ ತೀವ್ರಗೊಂಡು, ಮಾತಿನ ಚರ್ಚೆ ಹಲ್ಲೆಯ ರೂಪ ತಾಳಿತು. ಕಾಲೇಜು ಆವರಣದಲ್ಲೇ ಪ್ರಾಧ್ಯಾಪಕನನ್ನು ಕೆಲ ವಿದ್ಯಾರ್ಥಿಗಳು ಹಿಂಬಾಲಿಸಿ ಹಿಗ್ಗಾಮುಗ್ಗಾ ಥಳಿಸಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿನಿಯೂ ಕೂಡ ಆಕ್ರೋಶದಿಂದ ಚಪ್ಪಲಿಯಿಂದ ಹೊಡೆದಿದ್ದಾಳೆ ಎಂಬ ವರದಿಗಳು ತಿಳಿಸಿವೆ. ಪರಿಸ್ಥಿತಿ ನಿಯಂತ್ರಣ ತಪ್ಪುತ್ತಿದ್ದಂತೆ ಪ್ರಾಧ್ಯಾಪಕ ಸ್ಥಳದಿಂದ ಪಾರಾಗಲು ಯತ್ನಿಸಿದ್ದಾನೆ.

ಈ ಗಲಾಟೆಯಿಂದ ಕಾಲೇಜು ಆವರಣದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ವಿದ್ಯಾರ್ಥಿಗಳ ಗುಂಪುಗಳು ಸೇರಿಕೊಂಡು ಪ್ರತಿಭಟನೆ ನಡೆಸಿದರೆಂಬ ಮಾಹಿತಿಯೂ ಇದೆ. ವಿಷಯ ತಿಳಿಯುತ್ತಿದ್ದಂತೆ ನೆಲಮಂಗಲ ಗ್ರಾಮಾಂತರ ಪೊಲೀಸರು ತಕ್ಷಣ ಕಾಲೇಜಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆಯ ವಾಸ್ತವಾಂಶಗಳನ್ನು ತಿಳಿದುಕೊಳ್ಳಲು ಸಿಸಿಟಿವಿ ದೃಶ್ಯಗಳು ಹಾಗೂ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಲಾಗುತ್ತಿದೆ. ವಿದ್ಯಾರ್ಥಿನಿ ನೀಡಿದ ದೂರಿನ ಆಧಾರದ ಮೇಲೆ ಪ್ರಾಧ್ಯಾಪಕ ಅಬ್ದುಲ್ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ನಂತರ ಅವರನ್ನು ಪೊಲೀಸರು ಬಂಧಿಸಿ ವಿಚಾರಣೆ ಆರಂಭಿಸಿದ್ದಾರೆ.

ಈ ಘಟನೆ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರ ಜವಾಬ್ದಾರಿಯ ಕುರಿತು ಗಂಭೀರ ಚರ್ಚೆಯನ್ನು ಹುಟ್ಟುಹಾಕಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ವ್ಯಕ್ತಿಗಳಾಗಿದ್ದು, ಅವರ ನಡೆನುಡಿ ವಿದ್ಯಾರ್ಥಿಗಳ ಮೇಲೆ ನೇರ ಪ್ರಭಾವ ಬೀರುತ್ತದೆ. ಈ ಹಿನ್ನೆಲೆ, ತರಗತಿಯೊಳಗಿನ ವೃತ್ತಿಪರ ನಡವಳಿಕೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದ ಅಗತ್ಯವನ್ನು ಈ ಘಟನೆ ಮತ್ತೊಮ್ಮೆ ನೆನಪಿಸಿದೆ. ಜೊತೆಗೆ, ವಿದ್ಯಾರ್ಥಿಗಳು ತಮ್ಮ ಗೌರವಕ್ಕೆ ಧಕ್ಕೆ ಉಂಟಾದಾಗ ತಕ್ಷಣ ಪ್ರತಿಕ್ರಿಯೆ ನೀಡುವುದು ಸಹಜವಾದರೂ, ಹಲ್ಲೆಯಂತಹ ಘಟನೆಗಳು ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸುವ ಸಾಧ್ಯತೆಯೂ ಇದೆ ಎಂಬುದನ್ನು ಗಮನಿಸಬೇಕಾಗಿದೆ.

ಒಟ್ಟಿನಲ್ಲಿ, ಈ ಪ್ರಕರಣ ಕೇವಲ ಒಬ್ಬ ಪ್ರಾಧ್ಯಾಪಕನ ವಿರುದ್ಧದ ಆರೋಪವಷ್ಟೇ ಅಲ್ಲ, ಶಿಕ್ಷಣ ವ್ಯವಸ್ಥೆಯೊಳಗಿನ ಶಿಸ್ತಿನ ಕೊರತೆ, ಮಾನವೀಯ ಮೌಲ್ಯಗಳ ಅಗತ್ಯ ಮತ್ತು ಕಾನೂನು ಕ್ರಮಗಳ ಮಹತ್ವವನ್ನು ಒತ್ತಿಹೇಳುವ ಘಟನೆ ಆಗಿದೆ. ಪೊಲೀಸರು ಈಗಾಗಲೇ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದು, ಮುಂದಿನ ದಿನಗಳಲ್ಲಿ ಸತ್ಯಾಸತ್ಯತೆ ಹೊರಬೀಳುವ ನಿರೀಕ್ಷೆಯಿದೆ.

# ಸಾಲದ ಹಣಕ್ಕಾಗಿ ಗೆಳೆಯನನ್ನೇ ಕೊಂದ ಗ್ಯಾಂಗ್! ಶವದ ಜೊತೆ ದಿನ ಕಳೆದು ಬಳಿಕ ಸುಟ್ಟ ಕ್ರೂರಿಗಳು!!

**ಸ್ನೇಹದ ಹೆಸರಿನಲ್ಲಿ ನಡೆದ ಭೀಕರ ದ್ರೋಹದ ಪ್ರಕರಣವೊಂದು ಹಾಸನ ಜಿಲ್ಲೆಯನ್ನು ನಡುಗಿಸಿದೆ. ಸಿನಿಮೀಯ ಶೈಲಿಯಲ್ಲಿ ಸ್ನೇಹಿತನನ್ನೇ ಅಪಹರಿಸಿ, ಎರಡು ದಿನಗಳ ಕಾಲ ಕೂಡಿ ಹಾಕಿ ಹಲ್ಲೆ ನಡೆಸಿ ಬಳಿಕ ಕೊಲೆ ಮಾಡಿ ಶವವನ್ನು ಸುಟ್ಟು ಹಾಕಿದ ಘಟನೆ ಇದೀಗ ಬೆಳಕಿಗೆ ಬಂದಿದೆ. ನಾಪತ್ತೆಯಾಗಿದ್ದ ಡೆಲಿವರಿ ಬಾಯ್ ಪ್ರಕರಣ ತನಿಖೆಯ ಬಳಿಕ ಕ್ರೂರ ಹತ್ಯೆಯಾಗಿ ಹೊರಬಿದ್ದಿದ್ದು, ಪೊಲೀಸರು ಈಗಾಗಲೇ ಐವರನ್ನು ಬಂಧಿಸಿದ್ದಾರೆ. ಇನ್ನೂ ಪ್ರಮುಖ ಆರೋಪಿಗಳಿಗಾಗಿ ಬಲೆ ಬೀಸಲಾಗಿದೆ.**



ಕೊಲೆಯಾದ ವರುಣ್

ಮೃತ ಯುವಕನನ್ನು ಅರಸೀಕೆರೆ ತಾಲ್ಲೂಕಿನ ಕಾಡಯ್ಯನಕೊಪ್ಪಲು ಗ್ರಾಮದ 22 ವರ್ಷದ ವರುಣ್ ಎಂದು ಗುರುತಿಸಲಾಗಿದೆ. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೆಲ ತಿಂಗಳುಗಳ ಹಿಂದೆ ಬೆಂಗಳೂರು ನಗರಕ್ಕೆ ತೆರಳಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದನು. ಆರು ತಿಂಗಳ ಹಿಂದೆ ತಂದೆಯನ್ನು ಕಳೆದುಕೊಂಡಿದ್ದ ವರುಣ್ ಮನೆಯ ಹೊಣೆ ಹೊತ್ತಿದ್ದನು. ಯುಗಾದಿ ಹಬ್ಬದ ಹಿನ್ನೆಲೆ ತಾಯಿಯ ಜೊತೆ ಕಾಲ ಕಳೆಯಲು ಊರಿಗೆ ಬಂದಿದ್ದ ಈ ಯುವಕನಿಗೆ ಇಂತಹ ದುರ್ಭಾಗ್ಯಕರ ಅಂತ್ಯ ಎದುರಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ.

ಮಾರ್ಚ್ 10ರಂದು ಬೈಕ್ ರಿಪೇರಿ ಮಾಡಿಸಿಕೊಂಡು ಬರುತ್ತೇನೆ ಎಂದು ಹೇಳಿ ಮನೆಯಿಂದ ಹೊರಟ ವರುಣ್ ಮರಳಿ ಮನೆಗೆ ಬಾರದ ಹಿನ್ನೆಲೆ ಆತಂಕಗೊಂಡ ತಾಯಿ ಕಲಾವತಿ ಎಲ್ಲೆಡೆ ಹುಡುಕಾಟ ನಡೆಸಿದರು. ಸಂಬಂಧಿಕರು, ಸ್ನೇಹಿತರು ಎಲ್ಲರನ್ನೂ ಸಂಪರ್ಕಿಸಿದರೂ ಯಾವುದೇ ಮಾಹಿತಿ ಸಿಗಲಿಲ್ಲ. ಕೊನೆಗೆ ಮಾರ್ಚ್ 15ರಂದು ಗಂಡಸಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಲಾಯಿತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದಾಗ ಆರಂಭದಲ್ಲಿ ಇದು ಸಾಮಾನ್ಯ ಮಿಸ್ಸಿಂಗ್ ಕೇಸ್ ಎಂದು ಕಂಡುಬಂದಿತ್ತು. ಆದರೆ ನಂತರ ದೊರೆತ ಕೆಲವು ಸುಳಿವುಗಳು ತನಿಖೆಯನ್ನು ಸಂಪೂರ್ಣವಾಗಿ ಬದಲಿಸಿತು.



ಎಸ್ಪಿ ಶುಭಾನ್ವಿತಾ

ತನಿಖೆಯಲ್ಲಿ ತಿಳಿದುಬಂದಂತೆ, ವರುಣ್‌ನ ಸ್ನೇಹಿತ ಶಶಾಂಕ್ ಹಾಗೂ ಅವನ ಸಂಗಡಿಗರು ಪೂರ್ವ ಯೋಜನೆಯೊಂದಿಗೆ ಮಾರ್ಚ್ 10ರಂದು ವರುಣ್‌ನನ್ನು ಅಪಹರಿಸಿದ್ದಾರೆ. ಕೇವಲ 7 ಸಾವಿರ ರೂಪಾಯಿ ಸಾಲದ ಹಣ ವಾಪಸ್ ನೀಡಿಲ್ಲ ಎಂಬ ಕಾರಣಕ್ಕೆ, ಅವನನ್ನು ಕಿರಣ್ ಎಂಬಾತನ ತೋಟದ ಮನೆಯಲ್ಲಿಟ್ಟು ಎರಡು ದಿನಗಳ ಕಾಲ ಬಂಧಿಸಿ ಕ್ರೂರವಾಗಿ ಹಲ್ಲೆ ನಡೆಸಿದ್ದಾರೆ. ನಿರಂತರ ಹಲ್ಲೆಯಿಂದ ವರುಣ್ ಮಾರ್ಚ್ 12ರಂದು ಮೃತಪಟ್ಟಿದ್ದಾನೆ.

ಆದರೂ ಆರೋಪಿಗಳ ಕ್ರೌರ್ಯ ಇಲ್ಲಿ ನಿಲ್ಲಲಿಲ್ಲ. ಕೊಲೆ ಮಾಡಿದ ನಂತರ ಶವವನ್ನು ಹೇಗೆ ವಿಲೇವಾರಿ ಮಾಡುವುದು ಎಂಬುದರ ಬಗ್ಗೆ ಆರೋಪಿಗಳು ಒಂದು ದಿನವಿಡೀ ಚರ್ಚೆ ನಡೆಸಿದ್ದಾರೆ. ವರುಣ್ ಶವವನ್ನು ಹಾಸನದ ಗುಡ್ಡೇಗೌಡನ ಕೊಪ್ಪಲಿನಲ್ಲಿರುವ ಶಶಾಂಕ್‌ನ ಕೋಣೆಯಲ್ಲಿ ಇಟ್ಟುಕೊಂಡೇ ಕಾಲ ಕಳೆಯಲಾಗಿದೆ ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ. ಬಳಿಕ ಮಾರ್ಚ್ 13ರ ಮುಂಜಾನೆ ಅರಸೀಕೆರೆ ತಾಲ್ಲೂಕಿನ ಜೇನುಕಲ್ ಸಿದ್ದೇಶ್ವರ ಸ್ವಾಮಿ ಬೆಟ್ಟದ ಸಮೀಪಕ್ಕೆ ಕೊಂಡೊಯ್ದು ಶವವನ್ನು ಸಂಪೂರ್ಣವಾಗಿ ಸುಟ್ಟು ಹಾಕಿ ಅಲ್ಲಿಂದ ಪರಾರಿಯಾಗಿದ್ದಾರೆ.



ಬಂಧಿತ ಆರೋಪಿಗಳು

ಪೊಲೀಸರು ಮಿಸ್ಸಿಂಗ್ ಕೇಸ್ ತನಿಖೆ ವೇಳೆ ಸಂಗ್ರಹಿಸಿದ ತಾಂತ್ರಿಕ ಸಾಕ್ಷ್ಯಾಧಾರಗಳು, ಮೊಬೈಲ್ ಕಾಲ್ ಡೀಟೇಲ್ಸ್ ಹಾಗೂ ಶಂಕಿತ ವ್ಯಕ್ತಿಗಳ ವಿಚಾರಣೆ ಆಧಾರವಾಗಿ ಪ್ರಕರಣದ ಸುಳಿವು ಪತ್ತೆಹಚ್ಚಿದರು. ತಕ್ಷಣವೇ ಪ್ರಕರಣವನ್ನು ಕೊಲೆ ಕೇಸಾಗಿ ಪರಿವರ್ತಿಸಿ ದುದ್ದಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಯಿತು. ಬಳಿಕ ವೇಗವಾಗಿ ಕಾರ್ಯಾಚರಣೆ ನಡೆಸಿದ ಪೊಲೀಸರು ಸತೀಶ್, ಉಮರ್, ವಿಜಯ್, ಚೇತನ್ ಮತ್ತು ಮನು ಎಂಬ ಐವರನ್ನು ಬಂಧಿಸಿದ್ದಾರೆ.

ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಖಕ) ಶುಭಾನ್ವಿತ ಮಾಹಿತಿ ನೀಡಿದ್ದು, ಪ್ರಮುಖ ಆರೋಪಿ ಶಶಾಂಕ್ ಸೇರಿದಂತೆ ಇನ್ನೂ ಕೆಲವರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ವಿಶೇಷ ತಂಡಗಳನ್ನು ರಚಿಸಿ ಶೋಧ ಕಾರ್ಯ ಮುಂದುವರಿಸಲಾಗಿದೆ ಎಂದು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಗಾಂಜಾ ವ್ಯವಹಾರವೂ ಈ ಪ್ರಕರಣಕ್ಕೆ ಸಂಬಂಧ ಹೊಂದಿರುವ ಶಂಕೆ ವ್ಯಕ್ತವಾಗಿದ್ದು, ಶಶಾಂಕ್ ವರುಣ್‌ಗೆ 7 ಸಾವಿರ ರೂಪಾಯಿ ನೀಡಿ ಗಾಂಜಾ ಪಡೆಯಲು ಯತ್ನಿಸಿದ್ದಾನೆ. ಆದರೆ ಗಾಂಜಾ ನೀಡದ ಹಿನ್ನೆಲೆ ಉಂಟಾದ ಜಗಳವೇ ಕೊಲೆಗೆ ಕಾರಣವಾಗಿರಬಹುದು ಎಂದು ಎಸ್‌ಪಿ ಶುಭಾನ್ವಿತ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಮತ್ತೊಬ್ಬ ಯುವಕ ಲೋಹಿತ್‌ನನ್ನೂ ಅಪಹರಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದ್ದು, ಆತನ ಪಾತ್ರ ಹಾಗೂ ಸ್ಥಿತಿಗತಿಗಳ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ. ಒಟ್ಟಾರೆ ಈ ಪ್ರಕರಣದಲ್ಲಿ 8 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಇನ್ನೂ ಕೆಲವರು ಪರಾರಿಯಾಗಿದ್ದಾರೆ.

ಘಟನೆ ಬೆಳಕಿಗೆ ಬಂದ ಬಳಿಕ ಹಾಸನ ಜಿಲ್ಲೆಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಸ್ನೇಹಿತರ ಹೆಸರಿನಲ್ಲಿ ಇಂತಹ ಕ್ರೂರ ಕೃತ್ಯಗಳು ನಡೆಯುತ್ತಿರುವುದು ಸಮಾಜದಲ್ಲಿ ನೈತಿಕ ಮೌಲ್ಯಗಳ ಕುಸಿತವನ್ನು ತೋರಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಕೇವಲ 7 ಸಾವಿರ ರೂಪಾಯಿ ಮತ್ತು ಗಾಂಜಾ ವ್ಯವಹಾರದಂತಹ ಅಲ್ಪ ಕಾರಣಕ್ಕೆ ಯುವಕನ ಜೀವ ಕಳೆದುಕೊಂಡಿರುವುದು ನೋವುಂಟುಮಾಡುವ ಸಂಗತಿಯಾಗಿದೆ.

ಮೃತ ವರುಣ್ ಕುಟುಂಬ ದುಃಖದಲ್ಲಿ ಮುಳುಗಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿದೆ. ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಪ್ರಮುಖ ಆರೋಪಿಗಳ ಬಂಧನದ ಬಳಿಕ ಇನ್ನಷ್ಟು ಸತ್ಯಾಂಶಗಳು ಬಹಿರಂಗವಾಗುವ ಸಾಧ್ಯತೆಯಿದೆ.

ಒಟ್ಟಾರೆ, ನಾಪತ್ತೆ ಪ್ರಕರಣವಾಗಿ ಆರಂಭವಾದ ಈ ಘಟನೆ ಕೊನೆಯಲ್ಲಿ ಭೀಕರ ಕೊಲೆ ಪ್ರಕರಣವಾಗಿ ಬದಲಾಗಿದ್ದು, ಹಾಸನ ಜಿಲ್ಲೆಯ ಜನತೆಗೆ ಬೆಚ್ಚಿಬೀಳುವಂತಾಗಿದೆ. ಯುವಜನರಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರವೃತ್ತಿ ಮತ್ತು ಮದ್ದು ವ್ಯಸನದ ದುಷ್ಪರಿಣಾಮಗಳ ಬಗ್ಗೆ ಈ ಪ್ರಕರಣ ಮತ್ತೊಮ್ಮೆ ಎಚ್ಚರಿಕೆಯ ಸಂದೇಶ ನೀಡುತ್ತಿದೆ. ☯

# ಶವದ ಮೇಲೆ ಕಾರು ಹರಿಸಿದ ಪತಿಯ ಕ್ರೂರ ಅಟ್ಟಹಾಸ!

4 ☞

ಗಿಂತ ಕೌತುಕ ಮತ್ತು ವೈರಲ್ ಸಂಸ್ಕೃತಿ ಮೇಲುಗೈ ಸಾಧಿಸುತ್ತಿರುವುದು ಸಮಾಜದ ಮೌಲ್ಯಗಳನ್ನು ಹಾಳುಮಾಡುತ್ತಿದೆ.

ಈ ಘಟನೆಯು ನಮಗೆ ಒಂದು ಗಂಭೀರ ಪಾಠ ನೀಡುತ್ತದೆ ಯಾವುದೇ ಸಮಸ್ಯೆಗೆ ಹಿಂಸೆಯೇ ಪರಿಹಾರವಲ್ಲ. ದಾಂಪತ್ಯದಲ್ಲಿ ಭಿನ್ನಾಭಿಪ್ರಾಯಗಳು ಸಹಜ, ಆದರೆ ಅವುಗಳನ್ನು ಸಂಭಾಷಣೆ ಮತ್ತು ಸಮಜಾಯಿಷಿಯಿಂದ ಪರಿಹರಿಸಬೇಕು. ಕೋಪದ ಕ್ಷಣದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳು ಅನಿರೀಕ್ಷಿತ ದುರಂತಗಳಿಗೆ ಕಾರಣವಾಗುತ್ತವೆ.

ಒಂದು ಕಾಲದಲ್ಲಿ ಪ್ರೀತಿ ಮತ್ತು ನಂಬಿಕೆಯಿಂದ ಕೂಡಿದ್ದ ಗಂಡಹೆಂಡತಿ ಸಂಬಂಧ, ಇಂತಹ ದುರಂತದಲ್ಲಿ ಅಂತ್ಯಗೊಳ್ಳುವುದು ನಿಜಕ್ಕೂ ದುಃಖಕರ. ಶೈಲಾಳ ಜೀವನವು ಹೀಗೆ ಕ್ರೂರವಾಗಿ ಕೊನೆಗೊಂಡಿರುವುದು ಸಮಾಜಕ್ಕೆ ಎಚ್ಚರಿಕೆಯ ಗಂಟೆಯಾಗಿದೆ. ಇಂತಹ ಘಟನೆಗಳು ಮರುಕಳಿಸದಂತೆ ಕುಟುಂಬಗಳು, ಸಮಾಜ ಮತ್ತು ಕಾನೂನು ವ್ಯವಸ್ಥೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕಾಗಿದೆ. ಪತ್ನಿಯನ್ನೇ ಕೊಂದು ಅಮಾನವೀಯ ಕೃತ್ಯ ಮೆರೆದ ಪತಿ ಈಗ ಪೊಲೀಸ್ ಬಂಧನದಲ್ಲಿದ್ದಾನೆ. ಆದರೆ ಒಂದು ಅಮಾಯಕ ಜೀವ ಕಳೆದುಹೋಗಿರುವ ನೋವು ಎಂದಿಗೂ ಮಾಯವಾಗದು. ಈ ಘಟನೆ ಕಲಬುರಗಿ ಮಾತ್ರವಲ್ಲ, ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳನ್ನು ತಡೆಗಟ್ಟಲು ಕಠಿಣ ಕ್ರಮಗಳು ಮತ್ತು ಸಮಾಜದ ಜಾಗೃತಿ ಅತ್ಯಗತ್ಯವಾಗಿದೆ.

-ವೀರನಗೌಡ

ಪೊಲೀಸ್: ಈ ಮನೆಗೆ ನುಗ್ಗಿದ್ದು ಯಾಕೆ?

ಕಳ್ಳ: ಸಾರ್, ನಾನು "home delivery" ಅಂತ ಬೋರ್ಡ್ ನೋಡಿದೆ.

ಪೊಲೀಸ್: ಅದರಿಂದ?

ಕಳ್ಳ: ಅಂದ್ರೆ, ನಾನು delivery ತೆಗೆದುಕೊಳ್ಳೋಕೆ ಬಂದೆ!



# ನೇಣು ಬಿಗಿದ ಸ್ಥಿತಿಯಲ್ಲಿ ಎಂಟು ತಿಂಗಳ ಗರ್ಭಿಣಿ ನವ್ಯಶ್ರೀ ಶವ : ಕೊಲೆಯೋ? ಆತ್ಮಹತ್ಯೆಯೋ??

**ಬೆಂ. ದಕ್ಷಿಣ**
ಶಾಂತರಾಜು ಜಿ. ಕಲ್ಲಹಳ್ಳಿ



ನವ್ಯಶ್ರೀ ಬದುಕಿದ್ದಾಗ


ಆರೋಪಿ ಶಿವಕುಮಾರ್

ಸಾಮಾನ್ಯವಾಗಿ ಗ್ರಾಮೀಣ ಭಾಗದ ಜನರು ಅಲ್ಪಸ್ವಲ್ಪ ಜಮೀನಿಟ್ಟುಕೊಂಡು ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುವುದು ರೂಢಿಯಾಗಿದೆ. ಆಗಿನ ಕಾಲದಲ್ಲಿ ದಂಪತಿಗಳಿಗೆ 6ರಿಂದ 12 ಮಕ್ಕಳು ಇರುತ್ತಿದ್ದರು. ಚಿಕ್ಕ ಕುಟುಂಬ ದೊಡ್ಡ ಕುಟುಂಬವಾಗಿ ಬೆಳೆಯುತ್ತಿತ್ತು. ತಮ್ಮ ಮಕ್ಕಳನ್ನು ಸಹ ಬೇರೆ ಕಡೆ ಮದುವೆ ಮಾಡಿ ಕಳುಹಿಸದೆ, ಅಕ್ಕನ ಮಗ, ಮಗಳು, ಅಣ್ಣತಮ್ಮನ ಮಕ್ಕಳಿಗೆ ಮದುವೆ ಮಾಡಿಕೊಳ್ಳುತ್ತಿದ್ದರು. ಯಾಕೆಂದರೆ ತಮ್ಮ ಜಮೀನುಗಳಿಗೆ ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ನಂಬಿಕೆಯಿಂದ ಈ ರೀತಿ ಮಾಡಿಕೊಳ್ಳುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ಹಿರಿಯರು ನಡೆದುಕೊಂಡು ಬಂದ ದಾರಿಯನ್ನೇ ಕೆಲವರು ಪಾಲಿಸುತ್ತಿದ್ದರು. ಮತ್ತೆ ಕೆಲವರು ಹೊಸ ಸಂಬಂಧಗಳನ್ನು ಹುಡುಕುವುದು ಸಾಮಾನ್ಯವಾಗಿದೆ. ಅದರಲ್ಲಿ ಒಳ್ಳೆಯದಾಗಿರುವುದು ಕೆಲವರಿಗೆ ಕೆಟ್ಟದ್ದು ಆಗಿರುವುದು ಹಲವರಿಗೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಉ/ಯಂಬಳ್ಳಿ ಹೋಬಳಿಯ ಮರಳೆ ಗ್ರಾಮದ ಶ್ರೀಮತಿ ಭದ್ರಮ್ಮ-ಬೆಟ್ಟೇಗೌಡ ದಂಪತಿಗಳಿಗೆ 5 ಗಂಡು, 3 ಹೆಣ್ಣು ಮಕ್ಕಳು. ಇವರಿಗೆ ಸ್ವಲ್ಪಮಟ್ಟಿಗೆ ಜಮೀನು ಹೊಂದಿದ್ದು, ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಕಾಲಕ್ರಮೇಣ ಮಕ್ಕಳು ದೊಡ್ಡವರಾಗಿ ಮದುವೆಯಾಗಿ ಅವರವರ ಜೀವನ ಮಾಡಿಕೊಂಡು ಬಂದಿದ್ದರು. ಗಂಡು ಮಕ್ಕಳು ಇದೇ ಮರಳೆ ಗ್ರಾಮದಲ್ಲಿ ನೆಲೆಯೂರಿದರು. ಹೆಣ್ಣು ಮಕ್ಕಳು ಬೇರೆ ಕಡೆ ಮದುವೆಯಾಗಿ ಹೋಗಿದ್ದರು. ಇವರಲ್ಲಿ ಕಮಲಮ್ಮ ಎಂಬಾಕೆಯನ್ನು ಸಾತನೂರು ಹೋಬಳಿಯ ಗೇರಹಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿ ಗಂಡನ ಮನೆಯಲ್ಲಿ ನೆಲೆಸಿದ್ದರು. ಕಮಲಮ್ಮ-ಕರಿಯಪ್ಪ ದಂಪತಿಗಳಿಗೆ ಇಬ್ಬರು ಮಕ್ಕಳು. ಒಂದು ಗಂಡು ಶಿವಕುಮಾರ್, ಒಂದು ಹೆಣ್ಣು ಭಾಗ್ಯ ಎಂಬುವರಿದ್ದರು. ಈ ಕುಟುಂಬದಲ್ಲಿ ಬಜಾರಿ ಹೆಣ್ಣು ಕಮಲಮ್ಮ ಆಗಿದ್ದ ಕಾರಣ ತನ್ನ ಸ್ವಂತ ಮಗಳು ಸುಮಾರು 17 ವರ್ಷ ವಯಸ್ಸಾಗಿದ್ದ ಭಾಗ್ಯ ಎಂಬಾಕೆಗೆ ಕೆಲಸದ ವಿಚಾರದಲ್ಲಿ ಬಾಯಿಗೆ ಬಂದ ಹಾಗೆ ಬೈಯ್ದು, ಮಾನಸಿಕವಾಗಿ ನೋವುಂಟು ಮಾಡಿದ್ದರಿಂದ 22 ವರ್ಷಗಳ ಹಿಂದೆಯೇ ಭಾಗ್ಯ ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಳು ಎಂದು ಕಮಲಮ್ಮನ ಸ್ವಂತ ಅಕ್ಕ ಪುಟ್ಟನಂಜಮ್ಮರೇ ಹೇಳಿದ ಮಾತಾಗಿದೆ.


ಜಿಲ್ಲಾ ಎಸ್ಪಿ ಶ್ರೀನಿವಾಸ ಗೌಡ


ಡಿವೈಎಸ್ಪಿ ಶ್ರೀಗಿರಿ


ಸಿಪಿಐ ವಿಕಾಸ್ ಎಸ್.


ಪಿಎಸ್ಐ ದುರ್ಗೇಗೌಡ

ಬಾಯಿ ಬಡಕಿ ಬಜಾರಿ ಕಮಲಮ್ಮಳ ತಮ್ಮ ಚಾಮರಾಜ ಈತ ಮರಳೆ ಗ್ರಾಮದಲ್ಲಿ ದೇವರಾಜಮ್ಮನ ಮದುವೆಯಾಗಿ, ಈ ದಂಪತಿಗಳಿಗೂ ಮೂರು ಹೆಣ್ಣು ಮಕ್ಕಳು. ಮೊದಲನೇ ಮಗಳು ನವ್ಯಶ್ರೀ ಎಂಬಾಕೆ ಮದುವೆ ವಯಸ್ಸಿಗೆ ಬಂದಿದ್ದಳು. ಇತ್ತ ಕಮಲಮ್ಮನ ಮಗ ಶಿವಕುಮಾರ್‌ಗೂ ಮದುವೆ ವಯಸ್ಸುಲ. ಈತ ಎಂ.ಎ.ಬಿಇಡ್ ಪದವಿ ಮಾಡಿಕೊಂಡು ಶಿಕ್ಷಕ ವೃತ್ತಿ ಮಾಡುತ್ತಿದ್ದನಂತೆ. ಈಗ ಅಕ್ಕ ತಮ್ಮ ಮಾತನಾಡಿಕೊಂಡು ಇವರಿಬ್ಬರಿಗೆ ಮದುವೆ ಮಾಡಿಬಿಡೋಣ ಎಂದು ನಿರ್ಧರಿಸಿ, ಕೊರೋನಾ ಸಂದರ್ಭವಾಗಿದ್ದರಿಂದ 2020ರಲ್ಲಿ ಮರಳೆ ಗ್ರಾಮದ ಚಾಮರಾಜು ಮಗಳು ನವ್ಯಶ್ರೀರವರ ಮನೆಯ ಮುಂದೆಯೇ ನವ್ಯಶ್ರೀ (26) ಮತ್ತು ಶಿವಕುಮಾರ್ (38) ಮದುವೆ ನಡೆಸಿದರು. ಈ ದಂಪತಿಗಳಿಗೆ ನಾಲ್ಕೂವರೆ ವರ್ಷದ ಒಂದು ಗಂಡು ಲಸ್ವಿಕ್‌ಗೌಡ ಮಗನಿದ್ದು, ಈ ಪುಟ್ಟ ಬಾಲಕ ಕಬ್ಬಾಳು ಸಮೀಪ ಚಿರಂತನ ಪಬ್ಲಿಕ್ ಶಾಲೆಯಲ್ಲಿ ಯುಕೆಜಿ ವ್ಯಾಸಂಗ ಮಾಡುತ್ತಿದ್ದು, ಈ ಸುಂದರ ಕುಟುಂಬ, ಅತ್ತೆ ಕಮಲಮ್ಮ, ಮಾವ ಕರಿಯಪ್ಪರ ಜೊತೆ ಜೀವನ ಸಾಗಿಸುತ್ತಿತ್ತು. ಮದುವೆಯ ಸಂದರ್ಭದಲ್ಲಿ ಸುಮಾರು 60 ಗ್ರಾಂ ಚಿನ್ನದ ಒಡವೆಯನ್ನು ಕೊಟ್ಟು ಮದುವೆ ಕಾರ್ಯ ಮಾಡಿಕೊಟ್ಟಿದ್ದರು.

ಮದುವೆಯಾಗಿ ಎರಡು-ಮೂರು ಕಳೆಯುತ್ತಿದ್ದಂತೆ ಬಜಾರಿ ಅತ್ತೆ ಕಮಲಮ್ಮ ತನ್ನ ಸ್ವಂತ ತಮ್ಮನ ಮಗಳಾದ ನವ್ಯಶ್ರೀ, ಸೊಸೆಯನ್ನು ಕೆಲಸದ ವಿಚಾರ ಮತ್ತು ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆ ಮಾಡಿ ಅತ್ತೆ ಸೊಸೆ ಕಿತ್ತಾಟ ಜಾಸ್ತಿಯಾದಾಗ, ಗಂಡ ಶಿವಕುಮಾರ್‌ಗೆ ವಿಷಯ ತಿಳಿಸಿದರು. ಆತನೂ ಸೇರಿ ಹೊಡೆದು ಬಡಿದು ನವ್ಯಶ್ರೀಯ ಮೇಲೆ ಜಗಳವಾಡಿದಾಗ, ನವ್ಯಶ್ರೀ ತನ್ನ ತಾಯಿ ದೇವರಾಜಮ್ಮ ಹತ್ತಿರ ಹೇಳಿಕೊಳ್ಳುತ್ತಿದ್ದು, ಜೊತೆಗೆ ಜಗಳ ಜಾಸ್ತಿಯಾದಾಗ ತನ್ನ ತವರುಮನೆ ಸೇರುತ್ತಿದ್ದಳು. ಆಗ ರಾಜಿ ಸಂಧಾನಗಳು ಮಾಡಿ ಸೊಸೆಯನ್ನು ಕರೆದುಕೊಂಡು ಬರುತ್ತಿದ್ದ ಕಮಲಮ್ಮ, ಇತ್ತೀಚೆಗೆ ನವ್ಯಶ್ರೀ ಗಂಡ ಶಿವಕುಮಾರ್ ಶಿಕ್ಷಕ ವೃತ್ತಿ ಬಿಟ್ಟು ತನ್ನ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು, ಗ್ರಾಮದ ಕೆಲ ವ್ಯಕ್ತಿಗಳ ಜೊತೆ ಸೇರಿ ಪ್ರತಿದಿನ ಪಾರ್ಟಿಗಳು ಮಾಡಿಕೊಂಡು ಬಂದು ಹೆಂಡತಿಯ ಮೇಲೆ ಜಗಳವಾಡಲು ಪ್ರಾರಂಭಿಸಿದನಂತೆ. ಆಗಲೂ ಸಹ ನವ್ಯಶ್ರೀ ತವರುಮನೆ ಸೇರಿದಾಗ, ಗಂಡ ಶಿವಕುಮಾರ್ ತನ್ನ ಸ್ನೇಹಿತರ ಜೊತೆಗೂಡಿ ಹೆಂಡತಿಯ ತವರುಮನೆ ಅಂದರೆ ಈತನಿಗೂ ಸೋದರಮಾವನ ಮನೆಗೆ ಹೋಗಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಜಗಳವಾಡುವುದಿಲ್ಲ, ನಮ್ಮ ತಾಯಿಗೂ ಬುದ್ಧಿ ಹೇಳುತ್ತೇನೆ. ಮುಂದೆ ಏನೇ ಆದರೂ ನಾನೇ ಜವಾಬ್ದಾರಿ ಎಂದು ನಂಬಿಕೆಯ ಮಾತು ಹೇಳಿದಾಗ ನವ್ಯಶ್ರೀಯನ್ನು ತಂದೆತಾಯಿ ಬುದ್ಧಿಮಾತು ಹೇಳಿ ಧೈರ್ಯ ತುಂಬಿ ಗಂಡನ ಜೊತೆ ಕಳುಹಿಸಿಕೊಟ್ಟಿದ್ದರಂತೆ.



ಆರೋಪಿ ಕಮಲಮ್ಮ

**ನವ್ಯಶ್ರೀಯ ಕೊನೆಯ ದಿನ...**

ಆ ದಿನ 15-03-2026 ಭಾನುವಾರ, ಯುಗಾದಿ ಹಬ್ಬ ಸಮೀಪ, ಹಬ್ಬಹರಿದಿನಗಳಲ್ಲಿ ಮನೆಯನ್ನು ಕ್ಲೀನ್ ಮಾಡುವುದು ಪದ್ಧತಿ. ಅದರಂತೆ ನವ್ಯಶ್ರೀ ಮನೆ ಕ್ಲೀನ್ ಮಾಡುವ ವಿಚಾರದಲ್ಲಿ ಅತ್ತೆ ಕಮಲಮ್ಮ ಎಂದಿನಂತೆ ಗಲಾಟೆ ಪ್ರಾರಂಭಿಸಲಾಗಿ, ಆ ವಾರದಲ್ಲಿ ನವ್ಯಶ್ರೀ ಮಗ ಲಸ್ವಿಕ್‌ಗೌಡ ಯುಕೆಜಿ ಶಾಲೆಯಲ್ಲಿ 15 ಸಾವಿರ ಫೀಸ್ ಕಟ್ಟುವ ವಿಚಾರಕ್ಕೆ ಜಗಳಗಳು ಆಗುತ್ತಿತ್ತಂತೆ. ಈ ವಿಚಾರ ಮತ್ತು ಮನೆ ಕ್ಲೀನ್ ಮಾಡುವ ವಿಚಾರ ಎರಡೂ ಸೇರಿ ಜೋರು ಗಲಾಟೆಯಾದಾಗ ಅತ್ತೆ ಕಮಲಮ್ಮ, ಗಂಡ ಶಿವಕುಮಾರ್, ಮಾವ ಕರಿಯಪ್ಪರು ಸೇರಿ ನವ್ಯಶ್ರೀ ಹೊಡೆದು ಗಲಾಟೆ ಮಾಡುವ ಸಂದರ್ಭದಲ್ಲಿ ನವ್ಯಶ್ರೀಯ ತುಟಿ ಹೊಡೆದು ಹೋಗಿ ರಕ್ತ ಸೋರುತ್ತಿರುವ ಫೋಟೋ ತೆಗೆದು ತಾಯಿಯ ಮನೆಗೆ ವಾಟ್ಸಾಪ್ ಮುಖಾಂತರ ಫೋಟೋ ಸೆಂಡ್ ಮಾಡಿ, ಕರೆ ಮಾಡಿ ಗಲಾಟೆ ವಿಷಯ ತಿಳಿಸಿದ್ದರೂ ಸಹ ನವ್ಯಶ್ರೀ ತವರುಮನೆಯವರು ಸಾಮಾನ್ಯವಾಗಿ ಗಲಾಟೆ ಮಾಡಿಕೊಂಡಿರುತ್ತಾರೆ. ಮತ್ತೆ ಸರಿಹೋಗುತ್ತಾರೆ ಎಂದು ತಿಳಿದು ಸಮಾಧಾನಪಡಿಸಿದ್ದರಂತೆ. ಅದೇ ದಿನ ಸಂಜೆ ಮತ್ತೆ 7 ಗಂಟೆಯ ಸಮಯದಲ್ಲಿ ನವ್ಯಶ್ರೀ ತನ್ನ ತಾಯಿಗೆ ಕರೆ ಮಾಡಿ ನನ್ನ ಕೈಯಲ್ಲಿ ಇಲ್ಲಿ ಇರೋದಕ್ಕೆ ಆಗುತ್ತಿಲ್ಲ. ಎಲ್ಲರೂ ಸೇರಿ ನನಗೆ ಹೊಡೆದು ಜೋರಾಗಿ ಗಲಾಟೆ ಮಾಡುತ್ತಿದ್ದಾರೆ. ನೀವು ಬಂದು ನನ್ನನ್ನು ಕರೆದುಕೊಂಡು ಹೋಗಿ ಎಂದು ಅಳಲು ತೋಡಿಕೊಂಡಾಗ ತಾಯಿಯ ಮನೆಯವರು, ರಾತ್ರಿ ಸಮಯವಾದ್ದರಿಂದ ಆನೆಗಳು, ಕಾಡುಪ್ರಾಣಿಗಳ ಹಾವಳಿ ಹೆಚ್ಚು ಎಂದು ತಿಳಿದು, ಬೆಳಿಗ್ಗೆ ಹೋಗಿ ನೋಡೋಣ ಎಂದು ಸುಮ್ಮನಾಗಿದ್ದರಂತೆ. ಆದರೆ ಅದೇ ದಿನ ರಾತ್ರಿಯ ಸಮಯದಲ್ಲಿ ನಡೆದಿರುವ ವಿಚಾರ ತನ್ನ ಅಪ್ಪನ ಮನೆಗೆ ಫೋನ್ ಮಾಡಿ ತಿಳಿಸುತ್ತಿದ್ದಾಳೆ ನವ್ಯಶ್ರೀ ಎಂದು ಅತ್ತೆ ಕಮಲಮ್ಮ ಮಗನಿಗೆ ತಿಳಿಸಿದ ನಂತರ ಅತ್ತೆ, ಮಾವ, ಗಂಡ ಸೇರಿಕೊಂಡು ನವ್ಯಶ್ರೀಯ ಮೇಲೆ ಜಗಳವಾಡಿ ಹೊಡೆದಾಡಿಕೊಂಡಿರುವ ದೃಶ್ಯವನ್ನು ನವ್ಯಶ್ರೀಯ ಮಗ ಲಸ್ವಿಕ್‌ಗೌಡ ಆಲಿಸಿದ್ದನಂತೆ.

☞15


ಆಸ್ಪತ್ರೆಯಲ್ಲಿ ಶವದ ಮುಂದೆ ತಹಶೀಲ್ದಾರ್ ಸಂಜಯ್, ಪಿಎಸ್ಐ ಇನ್ನಿತರರು


ಗೇರಹಳ್ಳಿ ಇದೇ ಮನೆಯಲ್ಲಿ ನವ್ಯಶ್ರೀ ಮೃತಪಟ್ಟಿದ್ದು


ಕೃತ್ಯ ನಡೆದಸ್ಥಳ ಮಹಜರ್ ಮಾಡುತ್ತಿರುವ ಪಿಎಸ್ಐ ದುರ್ಗೇಗೌಡ


ನವ್ಯಶ್ರೀ ಕೊನೆ ದಿನ ತಾಯಿಗೆ ತುಟಿ ಗಾಯದ ಫೋಟೋ ಕಳುಹಿಸಿರುವುದು

# ಸೌಜನ್ಯ ಫೈಲ್ಸ್



25

ನಿರೂಪಣೆ :

**ಮೋಹನ್ ಬೋಳಂಗಡಿ**

# ಗುಡ್ಡದ ಮೇಲೆ ಕರೆದುಕೊಂಡು ಹೋದ ಸಂತೋಷ್‌ರಾವ್!

**ಯಾ**ವುದೇ ಕೊಲೆ ಪ್ರಕರಣದಲ್ಲಿ ಪ್ರಮುಖವಾಗಿ ಗಮನಿಸಬೇಕಾದಂತಹ ಸಾಕ್ಷಿ ಅಂದರೆ ಕೊಲೆ ಆರೋಪಿಯೊಬ್ಬ ಕೊಲೆ ಮಾಡಿದಂತಹ ಸ್ಥಳವನ್ನು ವಿಚಾರಣಾ ಅಧಿಕಾರಿಗಳಿಗೆ ತೋರಿಸಿಕೊಡುವಂತಹ ಪ್ರಕ್ರಿಯೆ. ಇದನ್ನು ಪೊಲೀಸರು ನಾಜೂಕಾಗಿ ನಿರ್ವಹಿಸುತ್ತಾರೆ. ಪ್ರತಿಯೊಂದು ಅಂಶವನ್ನೂ ದಾಖಲಿಸಿಕೊಳ್ಳುತ್ತಾರೆ. ಫೋಟೋಗ್ರಾಫಿ, ವಿಡಿಯೋಗ್ರಾಫಿ ಮಾಡಿಸಿಕೊಳ್ಳುತ್ತಾರೆ. ಎಲ್ಲಾ ಪ್ರಕ್ರಿಯೆಗಳಿಗೂ ಸ್ವತಂತ್ರ ಸಾಕ್ಷಿಗಳಿರುತ್ತಾರೆ. ಅವರ ಸಹಿಯನ್ನೂ ಸಹ ಮಹಜರಿಗೆ ತೆಗೆದುಕೊಳ್ಳಲಾಗುತ್ತದೆ. ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುವ ಸಂದರ್ಭದಲ್ಲಿ ಈ ಸಾಕ್ಷ್ಯವೂ ಪ್ರಮುಖವಾಗುತ್ತದೆ. ಸೌಜನ್ಯ ಪ್ರಕರಣದಲ್ಲಿ ಘಟನಾ ಸ್ಥಳದಲ್ಲಿ ಆರೋಪಿಯ ಸಮ್ಮುಖದಲ್ಲಿ ನಡೆದ ಮಹಜರು ಪ್ರಕ್ರಿಯೆಯಲ್ಲಿ ಪ್ರಮುಖ ಸಾಕ್ಷಿಯಾಗಿದ್ದವರು ಬೆಳ್ತಂಗಡಿಯ ರಿಕ್ಷಾಚಾಲಕ 59ರ ಹರೆಯದ ಮಾಕ್ಸಿಮ್ ಕ್ರಾಸ್ತಾ. ಇವರು ಈ ಪ್ರಕರಣದ 35ನೇಯ ಸಾಕ್ಷಿ.

ಮಾಕ್ಸಿಮ್ ಕ್ರಾಸ್ತಾ ಅವರು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಾ ಸೌಜನ್ಯ ಎಂಬ ಹುಡುಗಿ ಕಾಣೆಯಾಗಿ ಕೊಲೆಯಾದ ವಿಚಾರ ಗೊತ್ತಿತ್ತು. 13.10.2012ರಂದು ಬೆಳ್ತಂಗಡಿ ಪೊಲೀಸ್ ಠಾಣೆಗೆ ಮಧ್ಯಾಹ್ನ 3.30ರ ವೇಳೆಗೆ ಆರೋಪಿ ಸಿಕ್ಕಿದ್ದಾನೆ ಎಂದು ಗೊತ್ತಾಗಿದ್ದರಿಂದ ಕುತೂಹಲದಿಂದ ನೋಡಲು ಹೋಗಿದ್ದರು. ಆರೋಪಿಯು ಕೃತ್ಯ ಎಸಗಿದ್ದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದರಿಂದ ಅಲ್ಲಿಗೆ ಆತನನ್ನು ಕರೆದುಕೊಂಡು ಹೋಗಬೇಕು. ಸ್ಥಳೀಯರು ಬರಬೇಕು ಎಂದು ಪೊಲೀಸರು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಮಾಕ್ಸಿಮ್ ಕ್ರಾಸ್ತಾ ಮತ್ತು ರಾಮಣ್ಣಗೌಡ ಅವರು ಎಸ್.ಐ. ಅವರ ಜೀಪಿನಲ್ಲಿಯೂ ಆರೋಪಿಯೂ ಪ್ರಕರಣದ ತನಿಖಾಧಿಕಾರಿಯಾಗಿದ್ದ ಇನ್ಸ್‌ಪೆಕ್ಟರ್ ಅವರ ಜೀಪಿನಲ್ಲಿಯೂ ಹೋಗಿದ್ದರು. ಸಾಕ್ಷಿದಾರರು ಪೊಲೀಸರ ಜೊತೆ ಸಂಜೆ 4.00 ಗಂಟೆಗೆ ಬೆಳ್ತಂಗಡಿ ಠಾಣೆಯಿಂದ ಹೊರಟಿದ್ದರು. ಜೀಪು ಧರ್ಮಸ್ಥಳದ ನೇಚರ್ ಕೇರ್ ಆಸ್ಪತ್ರೆಯ ಎದುರುಗಡೆ ನಿಂತಿತು. ಆರೋಪಿಯು ಜೀಪಿನಿಂದ ಇಳಿದು ಕಲ್ಲಸಂಕಕ್ಕೆ ಅಂದರೆ ಸುಮಾರು 200 ಮೀ. ದೂರಕ್ಕೆ ಕರೆದುಕೊಂಡು ಹೋದ. ಪೊಲೀಸರು ಗದರಿಸಿದ್ದರಿಂದ ಆರೋಪಿಯು ಇದೇ ಸ್ಥಳದಲ್ಲಿ ಅಂದರೆ ಸೌಜನ್ಯಳ ಮೃತದೇಹ ಸಿಕ್ಕ ಸ್ಥಳವನ್ನು ತೋರಿಸಿ ಕೊಲೆ ಮಾಡಿರುವುದಾಗಿ ತಿಳಿಸಿದ. ಅಲ್ಲಿಂದ 5 ನಿಮಿಷದ ದಾರಿ ಕ್ರಮಿಸಿ ಗುಡ್ಡಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಆತನ ಪ್ಯಾಂಟ್, ಶರ್ಟ್ ತೋರಿಸಿದ. ಪೊಲೀಸರು ಅದನ್ನು ಬಂದೋಬಸ್ತ್ ಮಾಡಿ ಮಹಜರು ಮಾಡಿದರು. ಈ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ಸೀಲ್ ಹಾಕಿ ಇಡಲಾಗಿದ್ದ ಬಿಳಿಬಟ್ಟೆಯಿಂದ ಸುತ್ತಿದ್ದ ವಸ್ತುಗಳಾದ ಕಂದು, ಕಾಫಿ, ಬಿಳಿ ಗೆರೆಗಳಿರುವ ಹಾಗೂ ಚೌಕುಳಿಯ ಅರ್ಧ ತೋಳಿನ ಹಳೆಯ ಅಂಗಿ, ನೀಲಿ ಕಪ್ಪು ಕೆಂಪು ಗೆರೆಗಳಿರುವ ತುಂಬು ತೋಳಿನ ಕಪ್ಪು ಮಣ್ಣು ಅಂಟಿಕೊಂಡಿರುವ ಅಂಗಿ, ಕಡು ನೀಲಿ, ಕಂದು ಹಳದಿ ಚೌಕಳಿ ಇರುವ ತುಂಬು ತೋಳಿನ ಅಂಗಿ, ಮಾಸಲು ಕುಂಕುಮ ಬಣ್ಣದ ಬಿಳಿ ಗೆರೆಗಳಿರುವ ಬೈರಾಸ್, ಕುಂಕುಮ ಹಸಿರು ಬಣ್ಣದ ಡಿಸೈನ್‌ನ ಬಾರ್ಡರ್ ಇರುವ ಅಲ್ಲಲ್ಲಿ ಕಲೆಗಳಿರುವ ಬಿಳಿ ಪಂಚೆ, ಕುಂಕುಮ ಬಣ್ಣದ ತುಳಸಿ ಮಾಲೆ, ಕ್ರೀಮ್ ಬಣ್ಣದ ಉದ್ದನೆಯ ತುಳಸಿಮಾಲೆ, ನಗದು ಹಣ 3721/- ರೂಗಳನ್ನು ಸಾಕ್ಷಿದಾರರ ಸಮ್ಮುಖದಲ್ಲಿ ಪೊಲೀಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದರು. ಈ ಸೊತ್ತುಗಳನ್ನು ನ್ಯಾಯಾಲಯದಲ್ಲಿ ಸಾಕ್ಷಿ ಗುರುತಿಸಿದರು. ಈ ಪ್ರಕ್ರಿಯೆಯನ್ನು ಘಟನಾ ಸ್ಥಳದಲ್ಲಿ ಪೊಲೀಸರು ನಡೆಸಿದ್ದು, ಅಲ್ಲಿಯೇ ತಮ್ಮ ಸಹಿಗಳಿರುವ ಚೀಟಿಗಳನ್ನು ಆ ವಸ್ತುಗಳ ಮೇಲೆ ಅಂಟಿಸಿದ್ದರು ಎಂದು ಮಾಕ್ಸಿಮ್ ಕ್ರಾಸ್ತಾ ನ್ಯಾಯಾಲಯಕ್ಕೆ ವಿವರಿಸಿದರು. ಈ ಮಹಜರನ್ನು ಸಂಜೆ 6.00 ರಿಂದ 6.30ರವರೆಗೆ ಘಟನಾ ಸ್ಥಳದಲ್ಲಿ ಆರೋಪಿಯ ಉಪಸ್ಥಿತಿಯಲ್ಲಿಯೇ ನಡೆಸಲಾಗಿತ್ತು ಎಂಬುದನ್ನು ಸಾಕ್ಷಿ ಸ್ಪಷ್ಟಪಡಿಸಿದರು.

ಪೊಲೀಸ್ ಠಾಣೆಯಲ್ಲಿ ಆರೋಪಿಯ ಮೈಮೇಲಿದ್ದ ಅಲ್ಲಲ್ಲಿ ಕಲೆಗಳಿದ್ದ ನೀಲಿ ಬಾರ್ಡರ್‌ನ ಬಿಳಿಪಂಚೆ, ಕಡು ಹಸಿರು, ಕಪ್ಪು ಬಿಳಿ ಚೌಕುಳಿ ಗೆರೆಗಳಿರುವ ಅರ್ಧ ತೋಳಿನ ಅಂಗಿ ಹಸಿರು ಬಣ್ಣದ ಒಳಚಡ್ಡಿ ಇವುಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಅದನ್ನು ನ್ಯಾಯಾಲಯದಲ್ಲಿ ಸಾಕ್ಷಿ ಗುರುತಿಸಿದರು. ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತಹ ಮಾಕ್ಸಿಮ್ ಕ್ರಾಸ್ತಾ ಸದರಿ ಮಹಜರನ್ನು ಸಂಜೆ 7.30ರಿಂದ 8.00 ಗಂಟೆಯವರೆಗೆ ಮಾಡಲಾಗಿದ್ದು, ಸಿಬಿಐ ಅಧಿಕಾರಿಗಳು ತನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಮತ್ತು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿದರು.

ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿದ ಮಾಕ್ಸಿಮ್ ಕ್ರಾಸ್ತಾ ಅವರು ಕೊಲೆ ಆದ ಸ್ಥಳವು ಮಹಜರಿಗೆಂದು ಹೋಗುವ 3 ದಿನಗಳ ಮೊದಲು ಎಲ್ಲರಿಗೂ ಗೊತ್ತಿತ್ತು ಎಂದರೆ ತನಗೆ ಗೊತ್ತಿಲ್ಲ ಎಂದು ಉತ್ತರಿಸಿದ ಅವರು ಅಲ್ಲಿ ಇದ್ದ ಹಣದ ಮೌಲ್ಯ ಮತ್ತು ಅದರ ಮುಖಬೆಲೆ ಎಷ್ಟು ಎಂದು ಗೊತ್ತಿಲ್ಲ. ಸಾಧಾರಣವಾಗಿ ಒಂದು ಮೈಲಿ ನಡೆಯಲು 10 ನಿಮಿಷ ಬೇಕು. 5 ನಿಮಿಷದಲ್ಲಿ ಅರ್ಧ ಮೈಲು ನಡೆಯಬಹುದು ಪೊಲೀಸರು ವಶಪಡಿಸಿಕೊಂಡಂತಹ ವಸ್ತುಗಳನ್ನು ಮುಟ್ಟಿ ನೋಡಲಿಲ್ಲ. ಅವುಗಳು ಒದ್ದೆಯಾಗಿತ್ತೋ ಇಲ್ಲವೋ ಎಂದು ಗೊತ್ತಿಲ್ಲ, ಆ ವಸ್ತುಗಳು ಒಂದರ ಪಕ್ಕ ಒಂದರಂತೆ ಇದ್ದವು. ಅದರ ಜೊತೆ ಬೇರೆ ವಸ್ತುಗಳು ಇರಲಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದರು.


ಧೀರಜ್ ಜೈನ್


ಉದಯ್ ಜೈನ್


ಮಲ್ಲಿಕ್ ಜೈನ್

ಪೊಲೀಸರು ಸ್ವಾಧೀನ ಪಡಿಸಿಕೊಂಡ ವಸ್ತುಗಳನ್ನು ಅದೇ ದಿನ ಸೀಲು ಮಾಡಲಾಗಿತ್ತು. ಅದನ್ನು ಈ ದಿನವೇ ನೋಡುತ್ತಿರುವುದು ಇದೇ ಮೊದಲ ಬಾರಿಗೆ ತೆಗೆಯುತ್ತಿರುವುದು. ಆ ವಸ್ತುಗಳನ್ನು ಆ ವ್ಯಕ್ತಿಯೇ ತೋರಿಸಿದ್ದರಿಂದ ಅದು ಆತನಿಗೆ ಸಂಬಂಧಪಟ್ಟದ್ದು. ಆ ವಸ್ತುಗಳನ್ನು ಆ ದಿನ ಪೊಲೀಸರೇ ಬೆಳಿಗ್ಗೆ ಹೋಗಿ ಆರೋಪಿಯ ಸಹಿತ ಇಟ್ಟು ಬಂದಿದ್ದರು ಎಂದರೆ ಸರಿಯಲ್ಲ ಎಂದ ಮಾಕ್ಸಿಮ್ ಕ್ರಾಸ್ತಾ ಬೆಳ್ತಂಗಡಿಯಲ್ಲಿ ಆಟೋ ಚಾಲಕರನ್ನು ಹೊರತು ಪಡಿಸಿ ಬೇರೆ ಜವಾಬ್ದಾರಿಯುತ ವ್ಯಕ್ತಿಗಳು ಇದ್ದಾರೆ ಎಂದು ಪಾಟೀ ಸವಾಲಿಗೆ ಉತ್ತರಿಸಿದರು.


ಸಂತೋಷ್ ರಾವ್

ಪ್ರಕರಣದ 16ನೇ ಸಾಕ್ಷಿ ಧರ್ಮಸ್ಥಳದಲ್ಲಿ ಕೆಲಸ ಮಾಡುತ್ತಿದ್ದ 59ರ ಹರೆಯದ ಶಿವಪ್ಪ ಮಲೆಕುಡಿಯ. ಧರ್ಮಸ್ಥಳ ದೇವಸ್ಥಾನಕ್ಕೆ ಸಂಬಂಧಪಟ್ಟ ವಸತಿ ಗೃಹದಲ್ಲಿ ರೂಮ್ ಬಾಯ್ ಆಗಿ 2010ರಿಂದ ಕೆಲಸ ಮಾಡುತ್ತಿದ್ದ. ಬೆಳಿಗ್ಗೆ 7.00 ಗಂಟೆಯಿಂದ ರಾತ್ರಿ 7.00 ಗಂಟೆಯವರೆಗೆ ಕೆಲಸ ಇತ್ತು. ಇವರಿಗೆ ಸೌಜನ್ಯ ಕಾಣೆಯಾದ ಮೂರು ದಿನಗಳ ನಂತರ ಆಕೆ ಕೊಲೆಯಾದ ವಿಷಯ ಗೊತ್ತಾಯಿತು. ಅವರ ಜೊತೆ ರೂಮ್ ಬಾಯ್ ಆಗಿ ಗೋಪಾಲಕೃಷ್ಣ ಗೌಡ ಹಾಗೂ ರವಿ ಪೂಜಾರಿ ಇದ್ದರು. ಅವರಿಬ್ಬರೂ ಸಾಧಾರಣ 45 ರ ಹರೆಯದವರು. ಅವರಿಬ್ಬರೂ ಈಗ ಅಂದರೆ ವಿಚಾರಣೆ ನಡೆಯುವ ಸಂದರ್ಭದಲ್ಲಿ ಬದುಕಿಲ್ಲ. ರವಿ ಪೂಜಾರಿ ಆತ್ಮಹತ್ಯೆ ಮಾಡಿಕೊಂಡಿದ್ದರೆ ಗೋಪಾಲಕೃಷ್ಣ ಗೌಡ ಖಾಯಿಲೆಯಿಂದ ತೀರಿಕೊಂಡರು. ಸೌಜನ್ಯ ನಾಪತ್ತೆಯಾದ 2-3 ದಿನಗಳ ಬಳಿಕ ಆರೋಪಿ ಸಿಕ್ಕಿದ್ದು ರವಿ, ಗೋಪಾಲ, ಮಲ್ಲಿಕ್ ಜೈನ್, ಆಶಿಕ್ ಜೈನ್ ಸೇರಿ ಗೊಮ್ಮಟ ಬೆಟ್ಟದಿಂದ ಬರುತ್ತಿದ್ದಾಗ ಆರೋಪಿಯನ್ನು ನೋಡಿ ಮಲ್ಲಿಕ್ ಜೈನ್ ಈ ರಾತ್ರಿಯಲ್ಲಿ ಏನು ಮಾಡುತ್ತಿದ್ದೀಯ ಎಂದು ಕೇಳಿದರು. ಆಗ ರಾತ್ರಿ 7.00 ಗಂಟೆ ಆಗಿತ್ತು. ಆಗ ಅವನು ಇಬ್ಬರು ಗೊಮ್ಮಟ ಬೆಟ್ಟಕ್ಕೆ ಹೋಗಿದ್ದಾರೆ ಎಂದು ಹೇಳಿದ್ದ. ನೀನು ಕತ್ತಲಲ್ಲಿ ಯಾವ ಕಾರಣಕ್ಕೆ ಇದ್ದೀಯ. ರಸ್ತೆಯಲ್ಲಿ ನಿಂತಿರಬೇಕಿತ್ತು ಎಂದು ಮಲ್ಲಿಕ್ ಜೈನ್ ಆತನಿಗೆ ಕೇಳಿದ್ದಾರೆ. ಆಗ ಮಲ್ಲಿಕ್ ಜೈನ್ ಈ ರೀತಿ ಓಡಾಡಬಾರದು ನಿಮ್ಮನ್ನು ಹಿಡಿದುಕೊಳ್ಳುತ್ತಾರೆ. ನಾವು ಚಾಪೆ ಕೊಡುತ್ತೇವೆ ಕಚೇರಿಗೆ ಬನ್ನಿ ಎಂದು ಕರೆದ ಎಂದು ಸಾಕ್ಷಿ ಶಿವಪ್ಪ ಮಲೆಕುಡಿಯ ಆ ದಿನ ಅಂದರೆ ಸಂತೋಷ್ ರಾವ್ ಬಾಹುಬಲಿ ಬೆಟ್ಟದ ಕೆಳಗೆ ಸ್ಥಳೀಯರ ಕೈಗೆ ಸಿಕ್ಕಿಬಿದ್ದ ಸಂದರ್ಭವನ್ನು ನ್ಯಾಯಾಲಯಕ್ಕೆ ವಿವರಿಸಿದರು.

ಆ ಸಂದರ್ಭದಲ್ಲಿ ಆತ ನಾನು ಇಲ್ಲೇ ಮಲಗಿಕೊಳ್ಳುತ್ತೇನೆ. ಕಚೇರಿಗೆ ಬರುವುದಿಲ್ಲ. ಕಚೇರಿಗೆ ಬರುವಂತಹ ತಪ್ಪು ನಾನು ಮಾಡಿಲ್ಲ ಎಂದು ಹೇಳಿದ. ಆಗ ನಾನೂ ಸಹ ಆತನಿಗೆ ಕಚೇರಿಗೆ ಬನ್ನಿ ಚಾಪೆ ಕೊಡುತ್ತೇನೆ. ಬೆಳಿಗ್ಗೆ ಎದ್ದು ಹೋಗಿ ಎಂದು ಹೇಳಿದರು. ನಂತರ ಮಲ್ಲಿಕ್ ಜೈನ್ ಆತನನ್ನು ಹಿಡಿದುಕೊಂಡಿದ್ದು, ನಾವೆಲ್ಲರೂ ಆತನನ್ನು ಕರೆದುಕೊಂಡು ಬರುತ್ತಿದ್ದಾಗ ಅಲ್ಲಿ ಇಬ್ಬರು ಮಾತನಾಡಿ ಕೊಂಡು ಬರುತ್ತಿದ್ದರು. ಆ ವ್ಯಕ್ತಿಗಳು ಆತನನ್ನು ಯಾಕೆ ಹಿಡಿದುಕೊಂಡಿದ್ದೀರಿ, ಆತ ಏನು ತಪ್ಪು ಮಾಡಿದ್ದಾನೆ ಎಂದು ಕೇಳಿದರು. ಆತ ಏನೂ ತಪ್ಪು ಮಾಡಿಲ್ಲ, ಕತ್ತಲಲ್ಲಿ ನಿಂತಿದ್ದ, ಚಾಪೆ ಕೊಡುತ್ತೇವೆ ಎಂದು ಕರೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದೆವು. ನಾವು ಕೈ ಬಿಟ್ಟಿದ್ದರಿಂದ ಆತ ಓಡಿ ಹೋದ. ಆಗ ಅಲ್ಲಿ ಇದ್ದ ಜನರು ಆತನನ್ನು ಹಿಡಿದುಕೊಂಡರು. ಆತನನ್ನು ಹೊಡೆಯುತ್ತಾ ಠಾಣೆಗೆ ಕರೆದುಕೊಂಡು ಹೋದರು. ಆತನಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದರು ಎಂದು ಶಿವಪ್ಪ ಮಲೆಕುಡಿಯ ನ್ಯಾಯಾಲಯಕ್ಕೆ ವಿವರಿಸಿದರು. ಶಿವಪ್ಪ ಮಲೆಕುಡಿಯ ಅವರು ಕಚೇರಿಯಲ್ಲಿದ್ದ ಸಮಯ ರಾತ್ರಿ 8.00 ಗಂಟೆಯ ನಂತರ ಸೌಜನ್ಯಳ ಕೊಲೆಯನ್ನು ಆರೋಪಿ ಮಾಡಿದ್ದಾನೆ ಎಂದು ಮಾತನಾಡುತ್ತಿದ್ದರು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಿಬಿಐ ಪೊಲೀಸರು ಹೇಳಿಕೆಯನ್ನು ಪಡೆದುಕೊಂಡಿದ್ದಾರೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಆರೋಪಿ ಪರ ವಕೀಲ ಮೋಹಿತ್ ಕುಮಾರ್ ಅವರ ಪಾಟೀ ಸವಾಲಿಗೆ ಉತ್ತರಿಸಿದ ಶಿವಕುಮಾರ್ ಅವರು ನ್ಯಾಯಾಲಯಕ್ಕೆ ಸಾಕ್ಷಿದಾರರಾಗಿ ಹಾಜರಾದ ವಿಚಾರ ಮಲ್ಲಿಕ್‌ಜೈನ್‌ಗೆ ಗೊತ್ತು. ಆದರೆ ಮಲ್ಲಿಕ್ ಜೈನ್ ತನ್ನನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ, 2012ರಲ್ಲಿ ಧರ್ಮಸ್ಥಳದಲ್ಲಿ ಸಿಸಿಟಿವಿ ವ್ಯವಸ್ಥೆ ಬಾಹುಬಲಿ ಬೆಟ್ಟದ ಎರಡೂ ಕಡೆ ಬೆಳಕಿನ ವ್ಯವಸ್ಥೆ ಇತ್ತು. ಬೆಟ್ಟದ ಕೆಳಗಡೆ ದೀಪದ ವ್ಯವಸ್ಥೆ ಇತ್ತು. ಬಾಹುಬಲಿ ಬೆಟ್ಟದ ದ್ವಾರದ ಬಳಿ ಆಟೋ ಸ್ಟ್ಯಾಂಡ್ ಮತ್ತು ಅಂಗಡಿಗಳಿವೆ. ಬಾಹುಬಲಿ ದೇವಸ್ಥಾನದ ಪೂಜಾ ಅವಧಿ ರಾತ್ರಿ 9.00 ರಿಂದ 9.30ರ ತನಕ ಇದೆ.

2016 ನವೆಂಬರ್ 22ರಂದು ಶಿವಪ್ಪ ಮಲೆಕುಡಿಯರ ಸಾಕ್ಷಿ ವಿಚಾರಣೆ ನಡೆದಿದ್ದು ಅಂದಿನಿಂದ 4-5 ತಿಂಗಳ ಹಿಂದೆ ಮಾಹಿತಿ ಕಚೇರಿಯಲ್ಲಿ ರೂಮ್ ಬಾಯ್ ಆಗಿ ಕೆಲಸ ಮಾಡುತ್ತಿದ್ದರು. 2010ರಿಂದ 2014ರವರೆಗೆ ಕತ್ತಲೆಯಲ್ಲಿ ಕುಳಿತಿದ್ದ ಎಂದು ಯಾವ ವ್ಯಕ್ತಿಯನ್ನು ಅಂದರೆ ಆರೋಪಿಯನ್ನು ಹೊರತು ಪಡಿಸಿ ಹಿಡಿದಿಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದರು. ಆರೋಪಿಯನ್ನು ಹಿಡಿದ ದಿನ ತುಂಬಾ ಜನಜಂಗುಳಿ ಇತ್ತು. ರಶ್ ಇದ್ದ ಸಮಯದಲ್ಲಿ ಧರ್ಮಸ್ಥಳದಲ್ಲಿ ರೂಮುಗಳು ಸಿಗುವುದು ಕಷ್ಟ. ಆಗ ಜನರು ಹೊರಗಡೆ ಮಲಗುತ್ತಾರೆ ಎಂದು ಪಾಟೀ ಸವಾಲಿಗೆ ಉತ್ತರಿಸಿದರು.

ರವಿ ಪೂಜಾರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಎಂದು ಜನ ಮಾತಾಡುತ್ತಿದ್ದರು. ಆರೋಪಿಯನ್ನು ಅಂದಿನ ಆಟೋ ಚಾಲಕರು ಸೌಜನ್ಯಳನ್ನು ಕೊಲೆ ಮಾಡಿದ್ದಾನೆ ಎಂದು ಹೊಡೆದರು ಎಂದರೆ ಸರಿಯಲ್ಲ. ಸಾರ್ವಜನಿಕರು ಸಿಕ್ಕ ಸಿಕ್ಕಲ್ಲಿಗೆ ಆತನಿಗೆ ಹೊಡೆದರು ಎಂದು ಶಿವಪ್ಪ ಮಲೆಕುಡಿಯ ಪಾಟೀ ಸವಾಲಿಗೆ ಉತ್ತರಿಸಿದರು. ಸೌಜನ್ಯ ಕೊಲೆಯಾದ ನಂತರ ಬೆಳ್ತಂಗಡಿಯಲ್ಲಿ ಪ್ರತಿಭಟನೆಯಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆ ಬಂದ್ ಆಗಿ ಗೊತ್ತಿದೆ. ಆರೋಪಿಯನ್ನು ಹಿಡಿದ ನಂತರವೂ ಬಂದ್ ಆಗಿತ್ತು ಎಂದರೆ ಇರಬಹುದು. ಯಾರೂ ನಿಜವಾದ ಆರೋಪಿ ಇದ್ದಾರೆ ಅವರನ್ನು ಬಂಧಿಸಬೇಕು ಎಂದು ಬಂದ್ ಆಗಿತ್ತು ಎಂದು ಸಾಕ್ಷಿ ಶಿವಪ್ಪ ಮಲೆಕುಡಿಯ ಉತ್ತರಿಸಿದರು. ಧೀರಜ್ ಜೈನ್, ಮಲ್ಲಿಕ್ ಜೈನ್ ಮತ್ತು ಉದಯ್ ಜೈನ್ ಅವರ ಮೇಲೆ ಅನುಮಾನ ಇದೆಯೆಂದು ಟಿವಿ ಮತ್ತು ದಿನಪತ್ರಿಕೆಗಳಲ್ಲಿ ಬಂದಿತ್ತು. ರವಿ ಪೂಜಾರಿಯ ಸಾವು ಕೂಡಾ ಒಂದು ಕೊಲೆ ಎಂದು ಜನರ ಅಭಿಪ್ರಾಯ. ಮಲ್ಲಿಕ್ ಜೈನ್ ಅವರ ಮಾತು ಕೇಳಿ ಆರೋಪಿ ಕತ್ತಲಲ್ಲಿ ಕುಳಿತಿದ್ದ ಮತ್ತು ನಾವು ಕರೆದುಕೊಂಡು ಹೋಗುವಾಗ ತಪ್ಪಿಸಿಕೊಂಡ ಎಂದು ಸಿಬಿಐ ಅಧಿಕಾರಿಗಳಿಗೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿದರು.

ಮುಂದುವರಿಯುವುದು.....

# ಪತಿಯ ವಿರುದ್ಧ ಪತ್ನಿಯೇ ಹೋರಾಟ: ಟಿ.ಸಿ ಅಳವಡಿಕೆಯಲ್ಲಿ ಕೋಟಿ ಭ್ರಷ್ಟಾಚಾರ ಆರೋಪ

ರಾಯಚೂರು
✍ ವೀರನಗೌಡ

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನಲ್ಲಿ ಟ್ರಾನ್ಸ್‌ಫಾರ್ಮರ್ (ಟಿ.ಸಿ) ಅಳವಡಿಕೆ ವಿಚಾರವಾಗಿ ಭಾರೀ ಭ್ರಷ್ಟಾಚಾರ ನಡೆದಿರುವ ಆರೋಪ ಕೇಳಿ ಬಂದಿದ್ದು, ಈ ಪ್ರಕರಣ ಜಿಲ್ಲಾದ್ಯಂತ ಸಂಚಲನ ಮೂಡಿಸಿದೆ. ವಿಶೇಷವೆಂದರೆ, ಈ ಪ್ರಕರಣದಲ್ಲಿ ಪತಿಯ ವಿರುದ್ಧ ಪತ್ನಿಯೇ ಸಾಕ್ಷಿ ಸಮೇತ ಹೋರಾಟಕ್ಕೆ ಇಳಿದಿರುವುದು ಜನರ ಗಮನ ಸೆಳೆದಿದೆ. ಅಧಿಕಾರದ ದುರುಪಯೋಗ, ರೈತರ ಹಕ್ಕುಗಳ ಹರಣ ಹಾಗೂ ಲಂಚದ ಆಧಾರದ ಮೇಲೆ ಕಾರ್ಯನಿರ್ವಹಣೆ ನಡೆದಿರುವ ಆರೋಪಗಳು ಇದೀಗ ಗಂಭೀರ ಚರ್ಚೆಗೆ ಕಾರಣವಾಗಿವೆ.



ಮಾನ್ವಿ ತಾಲೂಕಿನ ರಾಜಲಬಂಡಾ 33 ಕೆ.ವಿ ಜೆಸ್ಕಾಂ ಕಚೇರಿಯಲ್ಲಿ 2018ರಿಂದ 2023ರವರೆಗೆ ಜೂನಿಯರ್ ಎಂಜಿನಿಯರ್ (ಜೆ.ಇ) ಆಗಿ ಕಾರ್ಯನಿರ್ವಹಿಸಿದ್ದ ಗುರುರಾಜ ವಿರುದ್ಧ ಅವರ ಪತ್ನಿ ಅಮೃತಾ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ರೈತರ ಜಮೀನಿನಲ್ಲಿ ಅಳವಡಿಸಬೇಕಾದ ಟ್ರಾನ್ಸ್‌ಫಾರ್ಮರ್‌ಗಳನ್ನು ನಿಯಮಗಳನ್ನು ಉಲ್ಲಂಘಿಸಿ ಬೇರೆಡೆ ಅಳವಡಿಕೆ ಮಾಡಲಾಗಿದೆ. ಇದಕ್ಕಾಗಿ ಪ್ರತಿ ಟಿ.ಸಿ ಅಳವಡಿಕೆಗೆ ಲಕ್ಷಾಂತರ ರೂಪಾಯಿ ಲಂಚ ವಸೂಲಿ ಮಾಡಲಾಗಿದೆ ಎಂದು ಅವರು ದೂರಿದ್ದಾರೆ. ರೈತರ ಅಗತ್ಯಗಳನ್ನು ನಿರ್ಲಕ್ಷಿಸಿ, ಹಣದ ಆಧಾರದ ಮೇಲೆ ಅಕ್ರಮವಾಗಿ ಟಿ.ಸಿ ಅಳವಡಿಕೆ ನಡೆದಿದೆ ಎಂಬುದು ಆರೋಪಗಳ ಸಾರಾಂಶವಾಗಿದೆ.


ಜೆಸ್ಕಾಂನ ಪ್ರಭಾರಿ ನಿರ್ದೇಶಕಿಯ ಪ್ರಾದೇಶಿಕ ಆಯುಕ್ತೆ ಝುಹೀರಾ ನಸೀಮ್

ಅಮೃತಾ ನೀಡಿರುವ ಮಾಹಿತಿಯ ಪ್ರಕಾರ, 2018ರಿಂದ 2023ರವರೆಗೆ ಸುಮಾರು 1800 ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆಯಲ್ಲಿ ಅಕ್ರಮ ನಡೆದಿದೆ. ಪ್ರತಿ ಟಿ.ಸಿ ಅಳವಡಿಕೆಗೆ ಸರಾಸರಿ ಒಂದು ಲಕ್ಷ ರೂಪಾಯಿವರೆಗೆ ಅನಧಿಕೃತ ಹಣ ವಸೂಲಿ ಮಾಡಲಾಗಿದೆ ಎಂದು ಹೇಳಲಾಗಿದೆ. ಇದರಿಂದ ಕೋಟ್ಯಂತರ ರೂಪಾಯಿ ಹಗರಣ ನಡೆದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಈ ಅಕ್ರಮಗಳಿಂದ ಅನೇಕ ರೈತರಿಗೆ ಅನ್ಯಾಯವಾಗಿದ್ದು, ವಿದ್ಯುತ್ ಸೌಲಭ್ಯಗಳ ವಿತರಣೆ ಸಮರ್ಪಕವಾಗಿ ನಡೆದಿಲ್ಲ ಎಂಬ ಆಕ್ರೋಶವೂ ವ್ಯಕ್ತವಾಗಿದೆ.

ತಮ್ಮ ಪತಿಯ ವಿರುದ್ಧವೇ ಹೋರಾಟಕ್ಕೆ ಇಳಿದಿರುವ ಅಮೃತಾ, ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಿದ್ದಾರೆ. ಲಂಚದ ಹಣ ವ್ಯವಹಾರ, ಅಕ್ರಮ ಅಳವಡಿಕೆ ಮತ್ತು ನಿಯಮ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳು ತಮ್ಮ ಬಳಿ ಇರುವುದಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಮೇಲಾಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಆರೋಪಿಸಿದ್ದಾರೆ.








ಇದಲ್ಲದೆ, ರಾಜಲಬಂಡಾ ಪ್ರದೇಶದ ಬಾರ್ ಅಂಡ್ ರೆಸ್ಟೋರೆಂಟ್ ಸಮೀಪ ಅನಧಿಕೃತವಾಗಿ ಟಿ.ಸಿ ಅಳವಡಿಕೆ ಮಾಡಿರುವ ಬಗ್ಗೆ ನೀಡಿದ ದೂರಿನ ಆಧಾರದ ಮೇಲೆ ಜಾಗೃತ ದಳವು ನವೆಂಬರ್ ತಿಂಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿ ಅಕ್ರಮವನ್ನು ಪತ್ತೆಹಚ್ಚಿತ್ತು. ಆದರೆ ನಂತರ ದಾಖಲೆಗಳಿಲ್ಲ ಎಂಬ ಕಾರಣ ನೀಡಿ ಕೇವಲ ರೂ. 38,000 ದಂಡ ವಿಧಿಸಿ ಪ್ರಕರಣವನ್ನು ಮುಚ್ಚಿಹಾಕಲಾಗಿದೆ ಎಂಬ ಆರೋಪವೂ ಕೇಳಿಬಂದಿದೆ. ಈ ಕ್ರಮವು ಅಧಿಕಾರಿಗಳ ನಿರ್ಲಕ್ಷ್ಯವೋ ಅಥವಾ ಉದ್ದೇಶಪೂರ್ವಕ ಮುಚ್ಚಿಹಾಕುವಿಕೆಯಾಗಿಯೋ ಎಂಬ ಪ್ರಶ್ನೆಗಳು ಉದ್ಭವಿಸಿವೆ.

ಈ ಪ್ರಕರಣವು ಸಾರ್ವಜನಿಕ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ರೈತರ ಹಕ್ಕುಗಳನ್ನು ಕಾಪಾಡಬೇಕಾದ ಅಧಿಕಾರಿಗಳೇ ಅಕ್ರಮದಲ್ಲಿ ಭಾಗಿಯಾಗಿರುವುದು ಖಂಡನೀಯ ಎಂಬ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಸರ್ಕಾರ ಹಾಗೂ ಜೆಸ್ಕಾಂ ಮೇಲಾಧಿಕಾರಿಗಳು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪಾರದರ್ಶಕ ತನಿಖೆ ನಡೆಸಬೇಕೆಂಬ ಒತ್ತಾಯ ಹೆಚ್ಚುತ್ತಿದೆ. ಆರೋಪಗಳು ಸತ್ಯವೆಂದು ದೃಢಪಟ್ಟರೆ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಆಗ್ರಹವೂ ಕೇಳಿಬರುತ್ತಿದೆ. ಒಟ್ಟಾರೆ, ಪತಿಯ ವಿರುದ್ಧ ಪತ್ನಿಯೇ ಹೋರಾಟಕ್ಕೆ ಇಳಿದಿರುವ ಈ ಪ್ರಕರಣ, ಭ್ರಷ್ಟಾಚಾರದ ವಿರುದ್ಧ ವ್ಯಕ್ತಿಯೊಬ್ಬರು ಎಷ್ಟು ಮಟ್ಟಿಗೆ ಹೋರಾಡಬಹುದು ಎಂಬುದಕ್ಕೆ ಉದಾಹರಣೆಯಾಗಿ ಕಾಣುತ್ತಿದೆ. ಇದೇ ಸಮಯದಲ್ಲಿ, ಸರ್ಕಾರದ ಯಂತ್ರಾಂಗವು ಜನರ ವಿಶ್ವಾಸವನ್ನು ಉಳಿಸಿಕೊಳ್ಳಲು ತ್ವರಿತ ಹಾಗೂ ನಿಷ್ಪಕ್ಷಪಾತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಯಾವ ರೀತಿಯ ಬೆಳವಣಿಗೆಗಳು ನಡೆಯುತ್ತವೆ ಎಂಬುದನ್ನು ಕಾದು ನೋಡಬೇಕಾಗಿದೆ.

# ಪತಿ ಬಿಟ್ಟು ನವವಿವಾಹಿತೆ ನಾಪತ್ತೆ; ವಿಷಯ ತಿಳಿದು ಮಾವ ಹೃದಯಾಘಾತದಿಂದ ಸಾವು!



ದಾಂಪತ್ಯ ಜೀವನ ಆರಂಭವಾಗಿ ಇನ್ನೂ ಒಂದು ತಿಂಗಳು ಕೂಡ ಪೂರೈಸದ ಸಂದರ್ಭದಲ್ಲೇ ನವವಿವಾಹಿತೆಯೊಬ್ಬಳು ಪತಿಯನ್ನು ಬಿಟ್ಟು ನಾಪತ್ತೆಯಾಗಿರುವ ಘಟನೆ ಕೊಪ್ಪಳದಲ್ಲಿ ಬೆಳಕಿಗೆ ಬಂದಿದೆ. ಈ ಆಘಾತಕಾರಿ ಬೆಳವಣಿಗೆಯ ಸುದ್ದಿ ತಿಳಿದ ಯುವತಿಯ ಮಾವ ಹೃದಯಾಘಾತದಿಂದ ಸಾವನ್ನಪ್ಪಿರುವುದು ಪ್ರಕರಣಕ್ಕೆ ಮತ್ತಷ್ಟು ದುಃಖದ ಮೆರಗು ತಂದಿದೆ. ಒಂದೇ ಕುಟುಂಬದಲ್ಲಿ ಒಂದೇ ಸಮಯದಲ್ಲಿ ಸಂಭವಿಸಿದ ಎರಡು ದುರ್ಘಟನೆಗಳು ಸಂಬಂಧಿ ಕರು ಹಾಗೂ ಸ್ಥಳೀಯರನ್ನು ಕಂಗಾಲಾಗಿಸಿವೆ.



ಮೂಲತಃ ಕೊಪ್ಪಳ ನಗರದ ಗೌರಿ ಅಂಗಳ ಪ್ರದೇಶದ ನಿವಾಸಿಯಾಗಿರುವ ನಾಗರಾಜ್ ಎಂಬ ಯುವಕನಿಗೆ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಂಜನಾ ಎಂಬ ಯುವತಿಯೊಂದಿಗೆ ಫೆಬ್ರವರಿ 8ರಂದು ವೈವಾಹಿಕ ಜೀವನದ ಆರಂಭವಾಗಿತ್ತು. ಎರಡೂ ಕುಟುಂಬಗಳ ಒಪ್ಪಿಗೆಯೊಂದಿಗೆ ಹಾಗೂ ಸಂಭ್ರಮದ ವಾತಾವರಣದಲ್ಲಿ ಕೊಪ್ಪಳದ ಪಾರ್ಥಾ ಕಲ್ಯಾಣ ಮಂಟಪದಲ್ಲಿ ಈ ಮದುವೆ ನಡೆದಿತ್ತು. ಮದುವೆಯ ನಂತರ ದಂಪತಿಗಳು ನಾಗರಾಜ್ ಅವರ ಮನೆಯ ಮೇಲ್ಮಹಡಿಯಲ್ಲಿ ವಾಸವಾಗಿದ್ದು, ಎಲ್ಲವೂ ಸುಖಕರವಾಗಿಯೇ ಸಾಗುತ್ತಿದೆ ಎಂಬ ಭಾವನೆ ಕುಟುಂಬಸ್ಥರಲ್ಲಿತ್ತು. ಆದರೆ ಮಾರ್ಚ್ 21ರ ರಾತ್ರಿ ನಡೆದ ಘಟನೆ ಕುಟುಂಬದ ಜೀವನವನ್ನೇ ತಲೆಕೆಳಗಾಗಿಸಿದೆ. ರಾತ್ರಿ ಸುಮಾರು 8.30ರ ವೇಳೆಗೆ ಸಂಜನಾ ತನ್ನ ಆರೋಗ್ಯದಲ್ಲಿ ತೊಂದರೆ ಇದೆ ಎಂದು ಹೇಳಿ ಪತಿ ನಾಗರಾಜ್ ಅವರನ್ನು ಔಷಧ ತಂದುಕೊಡಲು ಕಳುಹಿಸಿದ್ದಾಳೆ. ಪತ್ನಿಯ ಆರೋಗ್ಯದ ಬಗ್ಗೆ ಕಾಳಜಿಯಿಂದ ನಾಗರಾಜ್ ಸಮೀಪದ ಔಷಧ ಅಂಗಡಿಗೆ ತೆರಳಿ ಸುಮಾರು 15 ನಿಮಿಷಗಳಲ್ಲೇ ಮನೆಗೆ ಹಿಂದಿರುಗಿದ್ದಾರೆ. ಆದರೆ ಮನೆಗೆ ಬಂದಾಗ ಪತ್ನಿ ಕಾಣಿಸದಿರುವುದು ಅವರಲ್ಲಿ ಆತಂಕ ಮೂಡಿಸಿದೆ.

ಮೊದಲು ಮನೆಯಲ್ಲೇ ಎಲ್ಲೆಡೆ ಹುಡುಕಿದ ನಾಗರಾಜ್ ಬಳಿಕ ಕೆಳ ಮಹಡಿಯಲ್ಲಿ ವಾಸಿಸುತ್ತಿದ್ದ ತಮ್ಮ ಸಹೋದರರ ಮನೆಗೆ ತೆರಳಿ ವಿಚಾರಿಸಿದರೂ ಸಂಜನಾ ಅಲ್ಲಿ ಬಂದಿಲ್ಲ ಎಂಬ ಮಾಹಿತಿ ಲಭ್ಯವಾಗಿದೆ. ನಂತರ ಆತಂಕಗೊಂಡ ನಾಗರಾಜ್ ತಮ್ಮ ಸಂಬಂಧಿಕರು ಹಾಗೂ ಪರಿಚಿತರ ಮನೆಗಳಿಗೆ ಕರೆ ಮಾಡಿ ವಿಚಾರಿಸಿದರೂ ಯಾವುದೇ ಸುಳಿವು ಸಿಕ್ಕಿಲ್ಲ. ಈ ಸಂದರ್ಭದಲ್ಲಿ ಪತ್ನಿ ನಾಪತ್ತೆಯಾಗಿರುವುದು ಖಚಿತವಾಗುತ್ತಿದ್ದಂತೆ ಅವರು ಕೊಪ್ಪಳ ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ನಾಪತ್ತೆಯಾದ ಸಂಜನಾ ಅವರಿಗಾಗಿ ವ್ಯಾಪಕ ಶೋಧ ಕಾರ್ಯ ಆರಂಭಿಸಿದ್ದಾರೆ. ಆಕೆಯ ಮೊಬೈಲ್ ಕರೆ ದಾಖಲೆಗಳು, ಸಿಸಿಟಿವಿ ದೃಶ್ಯಗಳು ಸೇರಿದಂತೆ ವಿವಿಧ ಮಾಹಿತಿಗಳನ್ನು ಸಂಗ್ರಹಿಸಿ ತನಿಖೆ ಮುಂದುವರಿಸುತ್ತಿದ್ದಾರೆ. ನಾಪತ್ತೆಯಾದ ಸಂದರ್ಭದಲ್ಲಿ ಆಕೆ ಯಾವುದೇ ವೈಯಕ್ತಿಕ ವಸ್ತುಗಳನ್ನು ತೆಗೆದುಕೊಂಡಿದ್ದಾಳೆಯೇ ಎಂಬುದರ ಕುರಿತು ಕೂಡ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ಈ ಪ್ರಕರಣದ ಹಿನ್ನೆಲೆ ಏನು ಎಂಬುದರ ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸಲು ಪೊಲೀಸರು ಕುಟುಂಬಸ್ಥರನ್ನು ವಿಚಾರಣೆ ನಡೆಸುತ್ತಿದ್ದಾರೆ. ಇದೊಂದೆಡೆ, ಸಂಜನಾ ನಾಪತ್ತೆಯಾದ ವಿಚಾರ ತಿಳಿದ ಆಕೆಯ ಮಾವ ಈ ಆಘಾತವನ್ನು ತಾಳಲಾರದೆ ಹೃದಯಾಘಾತಕ್ಕೊಳಗಾಗಿ ಮೃತಪಟ್ಟಿರುವುದು ಕುಟುಂಬಕ್ಕೆ ಮತ್ತೊಂದು ದೊಡ್ಡ ಹೊಡೆತವಾಗಿದೆ. ಹೊಸ ಸಂಬಂಧ ಬೆಸೆದ ಕುಟುಂಬದಲ್ಲಿ ಇಂತಹ ದುರಂತ ಸಂಭವಿಸಿರುವುದು ಸಂಬಂಧಿಕರಲ್ಲಿ ಆಕ್ರಂದನ ಮೂಡಿಸಿದೆ. ಒಂದೆಡೆ ನವವಿವಾಹಿತೆಯ ನಾಪತ್ತೆ, ಮತ್ತೊಂದೆಡೆ ಆಘಾತದಿಂದ ಸಂಭವಿಸಿದ ಸಾವು ಈ ಎರಡು ಘಟನೆಗಳು ಕುಟುಂಬದ ನೆಮ್ಮದಿಯನ್ನು ಸಂಪೂರ್ಣವಾಗಿ ಕದಡಿವೆ.


ಎಸ್ಪಿ ಡಾ. ಎಲ್. ರಾಮ ಅರಸಿದ್ದಿ


ಸ್ಥಳೀಯರಲ್ಲಿ ಈ ಘಟನೆ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಇತ್ತೀಚಿನ ದಿನಗಳಲ್ಲಿ ಮದುವೆಯಾದ ಕೆಲವೇ ದಿನಗಳಲ್ಲಿ ದಾಂಪತ್ಯ ಕಲಹಗಳು ಹೆಚ್ಚುತ್ತಿರುವುದರ ಬಗ್ಗೆ ಚಿಂತನೆ ವ್ಯಕ್ತವಾಗುತ್ತಿದೆ. ಕುಟುಂಬದ ಬಂಧಗಳು, ನಂಬಿಕೆ ಮತ್ತು ಪರಸ್ಪರ ಅರ್ಥಮಾಡಿಕೊಳ್ಳುವಿಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಇಂತಹ ಘಟನೆಗಳು ನಡೆಯುತ್ತಿವೆ ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಪ್ರಕರಣ ಕೂಡ ಆ ದಿಕ್ಕಿನಲ್ಲಿ ಮತ್ತೊಂದು ಉದಾಹರಣೆಯಾಗಿ ಪರಿಣಮಿಸಿದೆ. ಪ್ರಸ್ತುತ ಪೊಲೀಸರು ಎಲ್ಲ ದಿಕ್ಕುಗಳಲ್ಲೂ ತನಿಖೆ ನಡೆಸುತ್ತಿದ್ದು, ಸಂಜನಾ ಅವರ ಸುಳಿವು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ. ಪ್ರಕರಣದ ಸತ್ಯಾಸತ್ಯತೆಗಳು ತನಿಖೆಯ ನಂತರವೇ ಸ್ಪಷ್ಟವಾಗಬೇಕಿದ್ದು, ಕುಟುಂಬಸ್ಥರು ಹಾಗೂ ಸಾರ್ವಜನಿಕರು ಆಕೆಯ ಸುರಕ್ಷಿತ ಪತ್ತೆಗಾಗಿ ಕಾಯುತ್ತಿದ್ದಾರೆ.

-ವೀರನಗೌಡ

# ಕಸದ ವಿಚಾರಕ್ಕೆ ಗಲಾಟೆ ಭುಗಿಲೆದ್ದು ಕೊಲೆ!

6 ☞

ನೀಡಲಾಯಿತು. ಶಾಜುಖಾನ್‌ರವರನ್ನು ಕೊಲೆ ಮಾಡಿ ಪರಾರಿಯಾಗಿ ತಲೆ ಮರೆಸಿಕೊಂಡಿದ್ದ ಆರೋಪಿಗಳ ಪತ್ತೆಗಾಗಿ ಎಸ್ಪಿ ಶ್ರೀಮತಿ ಕನ್ನಿಕಾ ಸಿಕ್ರಿವಾಲ್, ಡಿವೈಎಸ್ಪಿ ರಾಜೇಶ್‌ರವರ ಮಾರ್ಗದರ್ಶನದಲ್ಲಿ ಪಿಐ ಶಿವಕುಮಾರ್‌ರವರ ನೇತೃತ್ವದಲ್ಲಿ ಪಿಎಸ್ಐ ಶಶಿಕಲಾ, ಸಿಬ್ಬಂದಿ ವರ್ಗದವರಾದ ಸದಾಶಿವ, ನಾರಾಯಣ ಸ್ವಾಮಿ, ನಾಗರಾಜ್, ಪ್ರಶಾಂತ್‌ಕುಮಾರ್, ಕೃಷ್ಣಮೂರ್ತಿ, ಅಬ್ದುಲ್ ಸುಭಾನ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಆರೋಪಿಗಳ ಪತ್ತೆಗಾಗಿ ತಲಾಶೆ ನಡೆಸುತ್ತಿದ್ದರು.


ಸ್ಥಳದ ಪರಿಶೀಲನೆ ಮಾಡುತ್ತಿರುವ ಎಸ್ಪಿ ಮತ್ತು ತಂಡದವರು

**ಮೂವರು ಆರೋಪಿಗಳ ಬಂಧನ**

ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಕೃತ್ಯ ನಡೆದು 12 ಗಂಟೆಯ ಒಳಗೆ ಆರೋಪಿಗಳನ್ನು ಮಾರ್ಚ್ 7ರ ಬೆಳಗಿನ ಜಾವ ತಮ್ಮ ಸಂಬಂಧಿಕರ ಮನೆಯಲ್ಲಿ ಅಡಗಿ ಕುಳಿತಿದ್ದ ಎ1 ವಾಸೀಂ ಅಕ್ರಮ್ (20), ಎ2 ಬಾಬು ಅಲಿಯಾಸ್ ಬಷೀರುದ್ದೀನ್ (48), ಎ3 ಮಹಮದ್ ಸಾಖಿಬ್ (20) ಸೇರಿದಂತೆ ಮೂವರನ್ನು ಬಂಧಿಸಿ ಗೌನಪಲ್ಲಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮಾಂಸದ ವ್ಯಾಪಾರದಲ್ಲಿ ಪೈಪೋಟಿ ನಡೆದು ಗಲಾಟೆ, ನನ್ನ ಮಗ ವಾಸೀಂ ಅಕ್ರಮ್ ನಮ್ಮ ಮಾವ ಶಾಜುಖಾನ್‌ರವರ ಮಗನ ಮಗಳನ್ನು ಪ್ರೀತಿಸುತ್ತಿದ್ದು, ಮದುವೆ ಮಾಡಿಕೊಡುವಂತೆ ಕೇಳಿದಕ್ಕೆ ವಿರೋಧ ವ್ಯಕ್ತಪಡಿಸಿದರು. ಜೊತೆಗೆ ನಾವು ಇದ್ದ ಬಾಡಿಗೆ ಮನೆಯನ್ನು ಖಾಲಿ ಮಾಡುವಂತೆ ಒತ್ತಾಯಿಸುತ್ತಿದ್ದರು. ಮಾವ ಮಾಡುತ್ತಿದ್ದ ಕಿರಿಕ್‌ನಿಂದ ನಮಗೆ ತುಂಬಾ ನೋವಾಗಿರುವುದಲ್ಲದೆ ಕೋಪ ಬಂದು ಮಾವನಿಗೆ ಕೈಕಾಲು ಮುರಿಯಬೇಕೆಂದು ನಾನು ಮತ್ತು ಮಕ್ಕಳು ಮಾತನಾಡಿಕೊಂಡು ಸಮಯಕ್ಕಾಗಿ ಕಾದಿದ್ದೆವು. ಆ ಸಮಯ ಬಂದೇ ಬಿಟ್ಟಿತು.



ಮಾರ್ಚ್ 6ರಂದು ಸಂಜೆ ನಾನು ಮತ್ತು ನನ್ನ ಮಕ್ಕಳು ಮಾಂಸದ ಅಂಗಡಿಯಲ್ಲಿದ್ದಾಗ ಮಾವ ಶಾಜುಖಾನ್‌ರವರು ಅಂಗಡಿಯಲ್ಲಿರುವ ಕಸವನ್ನು ಗುಡಿಸಿಕೊಂಡು ಬಂದು ನಮ್ಮ ಅಂಗಡಿ ಪಕ್ಕದಲ್ಲಿರುವ ದೊಡ್ಡ ಮಾವ ಭಕ್ಷುದ್ದೀನ್‌ರವರಿಗೆ ಸೇರಿದ ಜಮೀನಿನಲ್ಲಿ ಹಾಕುತ್ತಿದ್ದರು. ಆಗ ಗಾಳಿ ಜೋರಾಗಿ ಬಂದು ಕಸವೆಲ್ಲ ನಮ್ಮ ಅಂಗಡಿ ಒಳಕ್ಕೆ ಬಂದು ಬಿದ್ದಿತ್ತು. ಆಗ ನಾನು ಯಾಕೆ ಮಾವ ನಮ್ಮ ಅಂಗಡಿ ಪಕ್ಕದಲ್ಲಿಯೇ ಕಸವನ್ನು ಹಾಕುತ್ತಿದ್ದೀರಿ. ಕಸವೆಲ್ಲ ಮಾಂಸದ ಮೇಲೆ ಬಿದ್ದಿದೆ. ತೆಗೆದುಕೊಂಡು ಹೋಗಿ ದೂರದಲ್ಲಿ ಹಾಕಬಾರದೆ ಎಂದು ಕೇಳಿದಕ್ಕೆ ಮಾವ ಶಾಜುಖಾನ್‌ರವರು ಕಸವನ್ನು ನಾನು ಎಲ್ಲಿ ಬೇಕಾದರೂ ಹಾಕುತ್ತೇನೆ. ಇದನ್ನು ಕೇಳಲು ನೀನು ಯಾರು, ನಮ್ಮ ಅಣ್ಣನಿಗೆ ಸೇರಿದ ಜಾಗದಲ್ಲಿ ಕಸ ಹಾಕುತ್ತಿದ್ದೇನೆ. ಇದರಿಂದ ನಿನಗೇನು ತೊಂದರೆ ಎಂದು ಹೇಳಿ ಜಗಳ ತೆಗೆದರು. ಆಗ ನಮ್ಮಿಬ್ಬರ ನಡುವೆ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಡಿಕೊಳ್ಳುತ್ತಿರುವಾಗ ಸ್ಥಳಕ್ಕೆ ಮಾವ ಶಾಜುಖಾನ್‌ರವರ ಮಗ ಶಹಾಬುದ್ದೀನ್ ಬಂದು ತಂದೆ ಜೊತೆ ಸೇರಿಕೊಂಡು ನನ್ನ ವಿರುದ್ಧ ನಿಂತನು. ಅಲ್ಲಿಗೆ ನಮ್ಮ ತಾಯಿ ಸಹ ಬಂದು ಜಗಳ ಬಿಡಿಸಲು ಪ್ರಯತ್ನಿಸಿದರು. ಆಗ ಗಲಾಟೆಯಲ್ಲಿ ಮಾಂಸ ಕತ್ತರಿಸುವ ಮಚ್ಚಿನಿಂದ ನನ್ನ ದೊಡ್ಡ ಮಗ ವಸೀಂ ಅಕ್ರಮ್ ಹಾಗೂ ಚಿಕ್ಕ ಮಗ ಮಹಮದ್ ಸಾಖಿಬ್ ಇಬ್ಬರು ಸೇರಿಕೊಂಡು ಅವರ ಮೇಲೆ ಹಲ್ಲೆ ಮಾಡಿದರು. ಆ ಸಂದರ್ಭದಲ್ಲಿ ಮಾವ ಶಾಜುಖಾನ್, ಅವರ ಮಗ ಶಹಬುದ್ದೀನ್ ಹಾಗೂ ನಮ್ಮ ತಾಯಿಯವರಿಗೆ ಗಾಯಗಳಾಗಿದ್ದು ತಕ್ಷಣ ನಾವು ಮೂರು ಜನರು ಅಲ್ಲಿಂದ ಪರಾರಿಯಾಗಿ ಸಂಬಂಧಿಕರ ಮನೆಯಲ್ಲಿ ತಲೆಮರೆಸಿಕೊಂಡಿದ್ದು ನಂತರ ನಿಮ್ಮಗಳ ಕೈಗೆ ಸಿಕ್ಕಿಹಾಕಿಕೊಂಡ ಬಗ್ಗೆ ಹೇಳಿದರಲ್ಲದೆ ಇನ್ನು ಉಳಿದ ಇಬ್ಬರು ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡು ಕೃತ್ಯಕ್ಕೆ ಉಪಯೋಗಿಸಿದ ಮಚ್ಚುಗಳನ್ನು ತೆಗೆದುಕೊಟ್ಟಿದ್ದು ಆಯುಧಗಳನ್ನು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಪೊಲೀಸರು ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕೃತ್ಯ ನಡೆದು 12 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂದನಕ್ಕೆ ಒಪ್ಪಿಸಲು ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಕಾರ್ಯವನ್ನು ಎಸ್ಪಿ ಶ್ರೀಮತಿ ಕನ್ನಿಕಾ ಸಿಕ್ರಿವಾಲ್‌ರವರು ಮೆಚ್ಚುಗೆ ವ್ಯಕ್ತಪಡಿಸಿ ಶ್ಲಾಘಿಸಿರುತ್ತಾರೆ. ☯


ಗಲಾಟೆಯಲ್ಲಿ ಶಹಾಬುದ್ದೀನ್ ಮುಂಗೈ ಕಟ್ಟಾಗಿರುವುದು


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೃತನ ಮಗ ಶಹಾಬುದ್ದೀನ್


ಆಸ್ಪತ್ರೆಯಲ್ಲಿ ಪಡೆಯುತ್ತಿರುವ ಮೃತನ ಅಕ್ಕ


ಮೃತನ ಪತ್ನಿ ಹಾಗೂ ಮಕ್ಕಳು

# ಚಾಕುವಿನಿಂದ ಇರಿದು ಕೊಚ್ಚಿ ಕೊಂದ ಬಾಲಕ!




5 ☞

ಆಕ್ರೋಶಗೊಂಡ ಯಮುನಾ ಕೂಡಲೇ ತನ್ನ ತಮ್ಮ ಸುದೀಪ್ ಹಾಗೂ ಮತ್ತೊಬ್ಬ ಸಂಬಂಧಿಕ ಯುವತಿಯೊಂದಿಗೆ ಆಟೋದಲ್ಲಿ ಛಾಯಾಳ ಮನೆಗೆ ತೆರಳಿದ್ದಾಳೆ. ಮನೆಗೆ ಬಂದ ಕೂಡಲೇ ವಾತಾವರಣ ತೀವ್ರ ಗಲಾಟೆಗೆ ತಿರುಗಿದೆ. ಪರಸ್ಪರ ನಿಂದನೆಗಳು, ಆರೋಪಪ್ರತ್ಯಾರೋಪಗಳು ಹೆಚ್ಚಾಗುತ್ತಾ ಹೋದಂತೆ ಪರಿಸ್ಥಿತಿ ನಿಯಂತ್ರಣ ತಪ್ಪಿದೆ. ಕೆಲವು ಮಾಹಿತಿಗಳ ಪ್ರಕಾರ, ಯಮುನಾ ಮತ್ತು ಸುದೀಪ್ ಚಾಕು ಹಿಡಿದು ಬಂದಿದ್ದರು ಎನ್ನಲಾಗಿದೆ. ಈ ವೇಳೆ ಛಾಯಾಳ ಮೇಲೆ ದಾಳಿ ಮಾಡುವ ಸಾಧ್ಯತೆ ಕಂಡು ಆತಂಕಗೊಂಡ ಬಾಲಕ, ಕ್ಷಣಿಕ ಆಕ್ರೋಶದಲ್ಲಿ ಅವರ ಕೈಯಲ್ಲಿದ್ದ ಚಾಕುವನ್ನು ಕಸಿದುಕೊಂಡು ಹಠಾತ್ ದಾಳಿ ನಡೆಸಿದ್ದಾನೆ. ನಿಯಂತ್ರಣ ತಪ್ಪಿದ ಸ್ಥಿತಿಯಲ್ಲಿ ಯಮುನಾಳಿಗೂ ಸುದೀಪ್‌ಗೂ ಹತ್ತಾರು ಬಾರಿ ಚಾಕುವಿನಿಂದ ಇರಿದಿದ್ದಾನೆ. ಇರಿತದ ತೀವ್ರತೆಗೆ ಇಬ್ಬರೂ ನೆಲಕ್ಕುರುಳಿ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಈ ಭೀಕರ ದೃಶ್ಯವನ್ನು ಕಂಡ ಮೃತರೊಂದಿಗೆ ಬಂದಿದ್ದ ಸಂಬಂಧಿಕ ಯುವತಿ ಭಯಭೀತಳಾಗಿ ಮನೆಯಿಂದ ಹೊರಗೆ ಓಡಿ ಸಹಾಯಕ್ಕಾಗಿ ಕೂಗಿದ್ದಾಳೆ. ಆಕೆಯ ಕಿರುಚಾಟ ಕೇಳಿ ಸ್ಥಳೀಯರು ಜಮಾಯಿಸಿ ಘಟನೆ ಅರಿತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೊಲೀಸರು ಸ್ಥಳಕ್ಕೆ ಆಗಮಿಸುವಷ್ಟರಲ್ಲಿ ಬಾಲಕ ಮನೆ ಒಳಗೆ ಬಾಗಿಲು ಹಾಕಿಕೊಂಡು ಕುಳಿತಿದ್ದ. ಪೊಲೀಸರು ಬಾಗಿಲು ತೆಗೆಯಲು ಮನವಿ ಮಾಡಿದರೂ ಪ್ರತಿಕ್ರಿಯಿಸಿರಲಿಲ್ಲ. ನಂತರ ಬಾಲಕನ ತಂದೆಯನ್ನು ಸ್ಥಳಕ್ಕೆ ಕರೆಸಲಾಗಿದ್ದು, ತಂದೆಯ ಮನವಿಗೆ ಸ್ಪಂದಿಸಿ ಬಾಲಕ ಬಾಗಿಲು ತೆರೆದಿದ್ದಾನೆ. ಮನೆಯೊಳಗೆ ಪ್ರವೇಶಿಸಿದಾಗ ರಕ್ತದ ಮಡುವಿನಲ್ಲಿ ಯಮುನಾ ಮತ್ತು ಸುದೀಪ್ ಅವರ ಶವಗಳು ಪತ್ತೆಯಾಗಿದ್ದು, ದೃಶ್ಯ ಕಂಡವರು ಬೆಚ್ಚಿಬಿದ್ದಿದ್ದಾರೆ. ಈ ಘಟನೆಯ ನಂತರ ಮತ್ತೊಂದು ದುಃಖಕರ ಬೆಳವಣಿಗೆ ನಡೆದಿದ್ದು, ತಾಯಿಯ ಸಾವಿನ ಸುದ್ದಿ ತಿಳಿದು ಯಮುನಾಳ ಮಗಳು ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆ ಎನ್ನಲಾಗಿದೆ. ವಿಷ ಸೇವಿಸಿ ಆತ್ಮಹತ್ಯೆ ಮಾಡಲು ಯತ್ನಿಸಿದ ಆಕೆಯನ್ನು ಕುಟುಂಬದವರು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡುತ್ತಿದ್ದಾರೆ. ಈ ಘಟನೆಯಿಂದ ಎರಡು ಕುಟುಂಬಗಳಷ್ಟೇ ಅಲ್ಲದೆ, ಅವರ ಮಕ್ಕಳ ಭವಿಷ್ಯವೂ ಕತ್ತಲೆಯಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ.



ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ವಾಯುವ್ಯ ವಿಭಾಗದ ಡಿಸಿಪಿ ಡಿ.ಎಲ್. ನಾಗೇಶ್ ಅವರು, 'ಅಕ್ರಮ ಸಂಬಂಧದ ಹಿನ್ನೆಲೆ ಈ ಜೋಡಿ ಕೊಲೆ ನಡೆದಿದೆ ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಕಾನೂನು ಸಂಘರ್ಷಕ್ಕೊಳಗಾದ ಅಪ್ರಾಪ್ತ ಬಾಲಕ ಹಾಗೂ ಆತನ ತಾಯಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಘಟನೆಯ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದ್ದಾರೆ. ಪೊಲೀಸ್ ತನಿಖೆ ಮುಂದುವರಿದಿದ್ದು, ಘಟನೆಯ ನಿಖರ ಕಾರಣ ಮತ್ತು ಸಂದರ್ಭಗಳ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಒಟ್ಟಾರೆ ಈ ಪ್ರಕರಣವು ಕುಟುಂಬ ಸಂಬಂಧಗಳಲ್ಲಿ ಉಂಟಾಗುವ ಅಸಮಾಧಾನ, ಅಕ್ರಮ ಸಂಬಂಧಗಳಿಂದ ಹುಟ್ಟುವ ಅನುಮಾನಗಳು ಮತ್ತು ನಿಯಂತ್ರಣ ತಪ್ಪಿದ ಕೋಪವು ಎಷ್ಟು ಭೀಕರ ಪರಿಣಾಮಗಳಿಗೆ ಕಾರಣವಾಗಬಹುದು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಕ್ಷಣಿಕ ಆಕ್ರೋಶದಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು ಜೀವಹಾನಿಗೆ ದಾರಿ ಮಾಡಿಕೊಡುತ್ತವೆ ಎಂಬುದಕ್ಕೆ ಇದು ಜೀವಂತ ಉದಾಹರಣೆ. ಸಮಾಜದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಜಾಗೃತಿ ಮೂಡಿಸುವುದು ಹಾಗೂ ಕುಟುಂಬ ಮಟ್ಟದಲ್ಲಿ ಸಮಸ್ಯೆಗಳನ್ನು ಸಂವಾದದ ಮೂಲಕ ಬಗೆಹರಿಸುವುದು ಅತ್ಯಂತ ಅಗತ್ಯವಾಗಿದೆ. ☯

# ಜಮೀನು ವಿವಾದ ಕೊಲೆಯಲ್ಲಿ ಅಂತ್ಯ : ಮಕ್ಕಳ ಕಣ್ಮುಂದೆಯೇ ತಂದೆಯ ಭೀಕರ ಹತ್ಯೆ!

ಚಿತ್ರದುರ್ಗ

ಹಿರಿಯೂರು ರಫೀಕ್


ಕೊಲೆಯಾದ ವೀರಭದ್ರಪ್ಪ

ಜಮೀನು ವಿವಾದಗಳು ಎಷ್ಟು ಭೀಕರ ರೂಪ ತಾಳಬಹುದು ಎಂಬುದಕ್ಕೆ ಮತ್ತೊಂದು ಜ್ವಲಂತ ಉದಾಹರಣೆ ಚಿತ್ರದುರ್ಗ ಜಿಲ್ಲೆಯ ಕಡ್ಲೆಗುದ್ದು ಗ್ರಾಮದಲ್ಲಿ ಕಂಡುಬಂದಿದೆ. ಮಧ್ಯಾಹ್ನ ಹೊತ್ತಿನಲ್ಲೇ ಸಾರ್ವಜನಿಕರ ಕಣ್ಣೆದುರೇ, ಅದರಲ್ಲೂ ಮಕ್ಕಳ ಕಣ್ಮುಂದೆಯೇ ವ್ಯಕ್ತಿಯೊಬ್ಬರನ್ನು ಬೆನ್ನಟ್ಟಿಕೊಂಡು ಹೋಗಿ ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಿರುವ ಘಟನೆ ಗ್ರಾಮಸ್ಥರಲ್ಲಿ ಭೀತಿ ಮತ್ತು ಆಕ್ರೋಶವನ್ನುಂಟುಮಾಡಿದೆ. ಈ ದಾರುಣ ಘಟನೆಯಲ್ಲಿ 55 ವರ್ಷದ ವೀರಭದ್ರಪ್ಪ ಎಂಬ ರೈತ ಪ್ರಾಣ ಕಳೆದುಕೊಂಡಿದ್ದು, ಅವರ ಕುಟುಂಬ ದುಃಖ ಸಾಗರದಲ್ಲಿ ಮುಳುಗಿದೆ.

ಘಟನೆ ನಡೆದ ದಿನ ಬೆಳಿಗ್ಗೆ ಎಲ್ಲವೂ ಸಾಮಾನ್ಯವಾಗಿಯೇ ಆರಂಭವಾಗಿತ್ತು. ವೀರಭದ್ರಪ್ಪ ತಮ್ಮ ದಿನನಿತ್ಯದ ಕೃಷಿ ಕಾರ್ಯಕ್ಕಾಗಿ ತಮ್ಮ ಇಬ್ಬರು ಪುತ್ರರೊಂದಿಗೆ ಎತ್ತಿನಗಾಡಿಯಲ್ಲಿ ಜಮೀನಿನತ್ತ ಹೊರಟಿದ್ದರು. ಕುಟುಂಬದವರ ಪ್ರಕಾರ, ಯಾವುದೇ ಅಪಾಯದ ಸೂಚನೆಗಳಿಲ್ಲದೆ ಅವರು ಸಾಮಾನ್ಯ ದಿನದಂತೆ ಜಮೀನಿಗೆ ತೆರಳುತ್ತಿದ್ದರು. ಆದರೆ ಇದೇ ವೇಳೆ, ಪೂರ್ವಯೋಜನೆಯೊಂದಿಗೆ ಕಾಯುತ್ತಿದ್ದ ಆರೋಪಿ ನಂದನ್ ತನ್ನ ಟ್ರಾಕ್ಟರ್‌ನಲ್ಲಿ ಅವರನ್ನು ಬೆನ್ನಟ್ಟಲು ಪ್ರಾರಂಭಿಸಿದ್ದಾನೆ. ಕೆಲಕಾಲದಿಂದಲೂ ಜಮೀನು ಗಡಿ ವಿಚಾರವಾಗಿ ನಡೆದಿದ್ದ ವೈಷಮ್ಯ ಈ ಮಟ್ಟಿಗೆ ತಲುಪುತ್ತದೆ ಎಂಬುದು ಯಾರಿಗೂ ಊಹಿಸಲಾಗದ ಸಂಗತಿಯಾಗಿದೆ.

ತೋಟದ ಹಾದಿಯಲ್ಲಿ ಸಾಗುತ್ತಿದ್ದ ಎತ್ತಿನಗಾಡಿಗೆ ಏಕಾಏಕಿ ಟ್ರಾಕ್ಟರ್ ಗುದ್ದಿಸಿದ ಪರಿಣಾಮ ವೀರಭದ್ರಪ್ಪ ನೆಲಕ್ಕುರುಳಿದ್ದಾರೆ. ಅಷ್ಟರಲ್ಲೇ ರಾಕ್ಷಸನಂತೆ ಮುಗಿಬಿದ್ದ ನಂದನ್, ಕೈಯಲ್ಲಿ ಹಿಡಿದಿದ್ದ ಮಚ್ಚಿನಿಂದ ನಿರಂತರವಾಗಿ ದಾಳಿ ನಡೆಸಿದ್ದಾನೆ. ಈ ಭೀಕರ ದೃಶ್ಯವನ್ನು ನೋಡಿದ ವೀರಭದ್ರಪ್ಪನ ಪುತ್ರರು ಭಯಭೀತರಾಗಿ ತಮ್ಮ ಪ್ರಾಣ ಉಳಿಸಿಕೊಳ್ಳಲು ಅಲ್ಲಿಂದ ಓಡಿಹೋಗಿದ್ದಾರೆ. ತಂದೆಯನ್ನು ರಕ್ಷಿಸಲು ಸಾಧ್ಯವಾಗದ ಸ್ಥಿತಿ ಅವರಲ್ಲಿ ಮನಸ್ಸಿಗೆ ಅತೀವ ನೋವನ್ನುಂಟುಮಾಡಿದೆ.

ಆದರೆ ಆರೋಪಿಯ ಕ್ರೌರ್ಯ ಅಲ್ಲಿಯೇ ನಿಂತಿಲ್ಲ. ನೆಲಕ್ಕುರುಳಿದ ವೀರಭದ್ರಪ್ಪನನ್ನು ಬೆನ್ನಟ್ಟಿಕೊಂಡು ಹೋಗಿ, ಮಚ್ಚಿನಿಂದ ಮರುಮರುವಾಗಿ ಕೊಚ್ಚಿ ಕೊಲೆ ಮಾಡಿದ್ದಾನೆ. ಈ ಸಂಪೂರ್ಣ ಘಟನೆ ಕೆಲವೇ ನಿಮಿಷಗಳಲ್ಲಿ ನಡೆದಿದ್ದರೂ, ಅದರ ಭೀಕರತೆ ಗ್ರಾಮಸ್ಥರ ಮನಸ್ಸಿನಲ್ಲಿ ಶಾಶ್ವತವಾಗಿ ಅಚ್ಚೊತ್ತಿದಂತಾಗಿದೆ. ಸ್ಥಳದಲ್ಲಿದ್ದ ಕೆಲವರು ಭಯದಿಂದ ದೂರ ನಿಂತು ನೋಡುತ್ತಲೇ ಇದ್ದರು. ಯಾರಿಗೂ ಮಧ್ಯ ಪ್ರವೇಶ ಮಾಡಲು ಧೈರ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು.

ಕೊಲೆ ನಡೆಸಿದ ನಂತರವೂ ಆರೋಪಿ ಕೈಯಲ್ಲಿ ಮಚ್ಚು ಹಿಡಿದು ಮೃತನ ಪುತ್ರರತ್ತ ಬೆದರಿಕೆ ಹಾಕುತ್ತಿರುವ ದೃಶ್ಯಗಳು ಸ್ಥಳೀಯರ ಮೊಬೈಲ್‌ಗಳಲ್ಲಿ ಸೆರೆಯಾಗಿವೆ.


ಎಸ್ಪಿ ರಂಜಿತ್‌ಕುಮಾರ್ ಬಂಡಾರು


ಅ॥ ಎಸ್ಪಿ ಶಿವಕುಮಾರ್

ಈ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರಲ್ಲಿ ಆಕ್ರೋಶದ ಜ್ವಾಲೆಯನ್ನು ಉಂಟುಮಾಡಿವೆ.

ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಂತೆ, ಈ ಕೊಲೆಗೆ ಹಳೆಯ ಜಮೀನು ವಿವಾದವೇ ಪ್ರಮುಖ ಕಾರಣವಾಗಿದೆ. ಕಳೆದ ಒಂದು ವರ್ಷದಿಂದ ವೀರಭದ್ರಪ್ಪ ಮತ್ತು ಇದೇ ಗ್ರಾಮದ ಕಾಂತರಾಜು ಕುಟುಂಬದ ನಡುವೆ ಜಮೀನು ಗಡಿ ಸಂಬಂಧಿತ ಸಮಸ್ಯೆಗಳು ಮುಂದುವರಿಯುತ್ತಲೇ ಇವೆ. ಮಾತಿನ ಚಕಮಕಿ, ಜಗಳ, ಬೆದರಿಕೆಗಳು ಸಾಮಾನ್ಯವಾಗಿ ಬಿಟ್ಟಿದ್ದವು. ಆರೋಪಿಯಾದ ನಂದನ್ ಹಲವು ಬಾರಿ ವೀರಭದ್ರಪ್ಪನಿಗೆ ಜೀವ ಬೆದರಿಕೆ ಹಾಕಿದ್ದನೆಂಬ ಮಾಹಿತಿ ಕುಟುಂಬಸ್ಥರಿಂದ ಲಭ್ಯವಾಗಿದೆ.



ಇನ್ನೂ ಗಂಭೀರ ಸಂಗತಿಯೇನೆಂದರೆ, ಈ ಬೆದರಿಕೆಗಳ ಬಗ್ಗೆ ಕುಟುಂಬಸ್ಥರು ಪೊಲೀಸರಿಗೆ ಮುಂಚೆಯೇ ಮಾಹಿತಿ ನೀಡಿದ್ದರೂ, ಸೂಕ್ತ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಈ ದುರ್ಘಟನೆ ಸಂಭವಿಸಿದೆ ಎಂದು ಮೃತರ ಸಂಬಂಧಿ ಕರು ಆರೋಪಿಸಿದ್ದಾರೆ. ಆರೋಪಿಯು ಮಚ್ಚು ಹಿಡಿದು ಗ್ರಾಮದಲ್ಲಿ ಓಡಾಡುತ್ತಿದ್ದ ವಿಷಯವೂ ಪೊಲೀಸರ ಗಮನಕ್ಕೆ ತಂದಿದ್ದರೂ, ನಿರ್ಲಕ್ಷ್ಯದಿಂದ ಪರಿಸ್ಥಿತಿ ಹೀಗಾಗಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ.

ಘಟನೆ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಹಾಗೂ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶಿವ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಭರಮಸಾಗರ ಪೊಲೀಸರು ತಕ್ಷಣ ಕಾರ್ಯಾಚರಣೆ ನಡೆಸಿ ಪ್ರಮುಖ ಆರೋಪಿ ನಂದನ್ ಹಾಗೂ ಕೊಲೆಗೆ ಪ್ರೇರಣೆ ನೀಡಿದರೆಂದು ಆರೋಪಿಸಲ್ಪಟ್ಟ ಕಾಂತರಾಜ್ ಅವರನ್ನು ವಶಕ್ಕೆ ಪಡೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆಯನ್ನು ವೇಗಗೊಳಿಸಿದ್ದಾರೆ.

ಮೃತ ವೀರಭದ್ರಪ್ಪನ ಕುಟುಂಬದಲ್ಲಿ ಆಕ್ರಂದನ ಮೇಳೈಸಿದೆ. ತಮ್ಮ ಕಣ್ಣೆದುರೇ ತಂದೆಯನ್ನು ಕಳೆದುಕೊಂಡ ಮಕ್ಕಳ ಮನಸ್ಥಿತಿ ಅತ್ಯಂತ ದುರಂತಕರವಾಗಿದೆ. ಗ್ರಾಮಸ್ಥರು ಕೂಡ ಈ ಘಟನೆಯಿಂದ ತೀವ್ರವಾಗಿ ಬೆಚ್ಚಿಬಿದ್ದಿದ್ದು, ಗ್ರಾಮದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದೆ. ಈ ಘಟನೆ ಸಮಾಜಕ್ಕೆ ಗಂಭೀರ ಸಂದೇಶವೊಂದನ್ನು ನೀಡುತ್ತದೆ. ಜಮೀನು, ಆಸ್ತಿ ವಿಚಾರಗಳು ಕಾನೂನುಮಟ್ಟದಲ್ಲಿ ಪರಿಹಾರ ಕಂಡುಕೊಳ್ಳಬೇಕಾದರೆ, ವೈಯಕ್ತಿಕ ದ್ವೇಷ ಮತ್ತು ಪ್ರತೀಕಾರದ ಮನೋಭಾವವು ಜೀವಹಾನಿಗೆ ಕಾರಣವಾಗಬಹುದು. ಸಮಯಕ್ಕೆ ಸರಿಯಾಗಿ ಮಧ್ಯಸ್ಥಿಕೆ ಮತ್ತು ಕಾನೂನು ಕ್ರಮ ಕೈಗೊಳ್ಳುವುದು ಅಗತ್ಯವಾಗಿದ್ದು, ಇಲ್ಲದಿದ್ದರೆ ಇಂತಹ ದುರಂತಗಳು ಮರುಕಳಿಸುವ ಸಾಧ್ಯತೆ ಇದೆ.

ಒಟ್ಟಾರೆ, ಕಡ್ಲೆಗುದ್ದು ಗ್ರಾಮದಲ್ಲಿ ನಡೆದ ಈ ಕ್ರೂರ ಹತ್ಯೆ ಜಮೀನು ವಿವಾದದ ಭೀಕರ ಮುಖವನ್ನು ಬಯಲಿಗೆಳೆದಿದ್ದು, ಕುಟುಂಬವೊಂದನ್ನು ನಾಶಮಾಡಿದೆ. ಇದೀಗ ಆರೋಪಿಗಳು ಪೊಲೀಸ್ ವಶದಲ್ಲಿದ್ದು, ನ್ಯಾಯಾಲಯದ ಮೂಲಕ ಕಠಿಣ ಶಿಕ್ಷೆ ವಿಧಿಸಬೇಕು ಎಂಬುದು ಮೃತರ ಕುಟುಂಬಸ್ಥರು ಹಾಗೂ ಸಾರ್ವಜನಿಕರ ಒತ್ತಾಯವಾಗಿದೆ.


# ನವ್ಯಶ್ರೀ ಶವ : ಕೊಲೆಯೋ? ಆತ್ಮಹತ್ಯೆಯೋ??

11 ☜

ಮಾರನೆಯ ದಿನ ಸೋಮವಾರ ಬೆಳಿಗ್ಗೆ ನವ್ಯಶ್ರೀಯ ಅಪ್ಪನಿಗೆ ಕರೆ ಮಾಡಿ ನಿಮ್ಮ ಮಗಳು ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾಳೆ ಎಂದು ವಿಚಾರ ತಿಳಿಸಿದಾಗ, ಗೇರಹಳ್ಳಿ ಗ್ರಾಮದ ಮಗಳ ಮನೆಯ ಹತ್ತಿರ ಬಂದು ನೋಡಲಾಗಿ, ಮಂಚ ಮತ್ತು ಬೀರುವಿನ ನಡುವೆ ನವ್ಯಶ್ರೀ ಮೃತದೇಹ, ಕತ್ತಿಗೆ ವೇಲ್‌ನಿಂದ ಸುತ್ತಿದ್ದು, ಕಿಟಕಿಯ ಸರಳಿಗೆ ಕಟ್ಟಿಕೊಂಡಿರುವುದನ್ನು ನೋಡಿ, ಬೆಚ್ಚಿಬೆರಗಾದರು. ಅಷ್ಟರಲ್ಲಿ ಸಾತನೂರು ಪೊಲೀಸ್ ಠಾಣೆಗೆ ನವ್ಯಶ್ರೀ ಪೋಷಕರು ದೂರು ನೀಡಲಾಗಿ ಸ್ಥಳಕ್ಕೆ ಬಂದ ಕನಕಪುರ ವೃತ್ತ ನಿರೀಕ್ಷಕ ವಿಕಾಸ್, ಸಾತನೂರು ಪಿಎಸ್‌ಐ ದುರ್ಗೇಗೌಡ ಸ್ಥಳ ಪರಿಶೀಲನೆ ನಡೆಸಿ, ನವ್ಯಶ್ರೀ ಮೃತದೇಹವನ್ನು ದಯಾನಂದ ಸಾಗರ್ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದಾಗ ನವ್ಯಶ್ರೀ ಮುಖದ ಮೇಲೆ ಹೊಡೆದಿರುವ ಬರೆಗಳು ಕಾಣುತ್ತಿದ್ದರಿಂದ ನವ್ಯಶ್ರೀ ಆತ್ಮಹತ್ಯೆ ಮಾಡಿಕೊಂಡಿಲ್ಲ, ಆಕೆ ಧೈರ್ಯವಂತೆ. ಎಂಟು ತಿಂಗಳ ಗರ್ಭಿಣಿ ಎಲ್ಲಾ ವಿಷಯಗಳನ್ನು ನಮ್ಮೊಂದಿಗೆ ಹೇಳಿಕೊಳ್ಳುತ್ತಿದ್ದಳು. ಈಕೆಯನ್ನು ಗಂಡ, ಅತ್ತೆ ಕಮಲಮ್ಮ, ಮಾವ ಕರಿಯಪ್ಪ ಸೇರಿ ಕೊಲೆ ಮಾಡಿ ತಪ್ಪಿಸಿಕೊಳ್ಳಲು ಈ ರೀತಿ ಆತ್ಮಹತ್ಯೆಯ ನಾಟಕ ಮಾಡಿದ್ದಾರೆ ಎಂದು ದೂರು ನೀಡಲಾಗಿ, ಪ್ರತ್ಯಕ್ಷವಾಗಿ ತನ್ನ ತಾಯಿಯನ್ನು ಹೊಡೆದು ಬಡಿದು ಗಲಾಟೆ ಮಾಡಿ ಕೃತ್ಯವೆಸಗಿದ್ದ ದೃಶ್ಯ ಕಂಡಿದ್ದ ಮೃತೆ ನವ್ಯಶ್ರೀಯ ನಾಲ್ಕೂವರೆ ವರ್ಷದ ಮಗನನ್ನು (ಲಸ್ವಿಕ್‌ಗೌಡ) ಪೊಲೀಸರು ವಿಚಾರಿಸಿದಾಗ ಪುಟ್ಟಕಂದ ಹೇಳಿದ ಮಾತುಗಳನ್ನು ಅಲ್ಲಿದ್ದ ಜನಸಮಾನ್ಯರು ಪೊಲೀಸರು ನಿಟ್ಟುಸಿರು ಬಿಟ್ಟರು.


ಮೃತೆ ನವ್ಯಶ್ರೀ ಅತ್ತೆ, ಮಾವ, ಗಂಡನ ಜೊತೆ

ಕನಕಪುರ ತಹಶೀಲ್ದಾರ್ ಸಂಜಯ್‌ರವರು, ಜಿಲ್ಲಾ ಬೆರಳಚ್ಚು ತಜ್ಞರು, ಶೋಕಾಸ್ ತಂಡ ಸ್ಥಳಕ್ಕೆ ಭೇಟಿ ನೀಡಿ ಕೃತ್ಯ ನಡೆದ ಸ್ಥಳ ಪರಿಶೀಲನೆ ನಡೆಸಿ, ನವ್ಯಶ್ರೀ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ, ಮರಣೋತ್ತರ ಪರೀಕ್ಷೆಗೆ ಒಳಪಡಿಸಿದಾಗ, ಎಂಟು ತಿಂಗಳ ಗರ್ಭಿಣಿಯ ಹೊಟ್ಟೆಯನ್ನು ಹೆಣ್ಣು ಮಗು ಮೃತಪಟ್ಟಿರುವುದು ಕಂಡು ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಸಂಜೆ 4ರ ಸಮಯದಲ್ಲಿ ನವ್ಯಶ್ರೀಯ ಮತ್ತು ಹೆಣ್ಣು ಮಗುವಿನ ಮೃತದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದರು. ನಂತರ ನವ್ಯಶ್ರೀಯ ತವರೂರಲ್ಲಿ ಅಂತ್ಯಕ್ರಿಯೆ ನೆರವೇರಿಸಿದರು. ಇತ್ತ ಸಾತನೂರು ಪೊಲೀಸ್ ಠಾಣೆಯಲ್ಲಿ ಮೃತ ನವ್ಯಶ್ರೀಯ ಗಂಡ ಶಿವಕುಮಾರ್, ಅತ್ತೆ ಕಮಲಮ್ಮ, ಮಾವ ಕರಿಯಪ್ಪರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಗಂಡ ಶಿವಕುಮಾರ್‌ನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ. ಇನ್ನುಳಿದ ಕಮಲಮ್ಮ, ಕರಿಯಪ್ಪರಿಗಾಗಿ ಶೋಧಕಾರ್ಯ ನಡೆಯುತ್ತಿದೆ. ಏನೇ ಆದರೂ ಮೃತೆ ನವ್ಯಶ್ರೀಯ ಸಾವು ಕೊಲೆಯೋ ಅಥವಾ ಆತ್ಮಹತ್ಯೆಯೇ... ಎಂಬುದು ಪೊಲೀಸ್ ತನಿಖೆಯಿಂದ ಹೊರ ಬೀಳಲಿದೆ. ಈ ಸಂದರ್ಭದಲ್ಲಿ ಸಾತನೂರು ಪಿಎಸ್‌ಐ ದುರ್ಗೇಗೌಡ, ಸಿಬ್ಬಂದಿಗಳಾದ ಗಿರಿಜಮ್ಮ, ಗೋವಿಂದಪ್ಪ, ಜಯಣ್ಣ ಇದ್ದರು.


ನವ್ಯಶ್ರೀ ಮನೆ ಮುಂದೆ ಮದುವೆ ಸಂದರ್ಭ


ಮೃತೆ ನವ್ಯಶ್ರೀ ಅಜ್ಜಿ, ತಾಯಿ ಹಾಗೂ ಮಗ ಲಾಸ್ವಿಕ್‌ಗೌಡ



# ರಿಷಬ್ ಅನ್‌ಫಾಲೋಗೆ ಹೊಸ ಸಂಶಯಗಳು


'ಕಾಂತಾರ' ಚಿತ್ರದ ಜಾಗತಿಕ ಯಶಸ್ಸಿನ ಬಳಿಕ ನಟನಿರ್ದೇಶಕ ರಿಷಬ್ ಶೆಟ್ಟಿ ಕುರಿತು ಹೊಸದೊಂದು ಚರ್ಚೆ ಶುರುವಾಗಿದೆ. ಕಳೆದ ಕೆಲವು ದಿನಗಳಿಂದ ರಿಷಬ್ ಮತ್ತು ಹೊಂಬಾಳೆ ಫಿಲ್ಮ್ ನಡುವೆ ಎಲ್ಲವೂ ಸರಿಯಿಲ್ಲ ಎಂಬ ಮಾತುಗಳು ಕೇಳಿಬರುತ್ತಿದ್ದವು. ಇದಕ್ಕೆ ಪುಷ್ಟಿ ನೀಡುವಂತೆ ರಿಷಬ್ ಮೊದಲು ಹೊಂಬಾಳೆ ಮತ್ತು 'ಕಾಂತಾರ' ಅಧಿಕೃತ ಖಾತೆಗಳನ್ನು ಅನ್‌ಫಾಲೋ ಮಾಡಿದ್ದರು. ಇದೀಗ ಅಚ್ಚರಿ ಎಂಬಂತೆ, ತಮ್ಮ ಆಪ್ತ ಗೆಳೆಯರಾದ ರಾಜ್ ಬಿ. ಶೆಟ್ಟಿ ಮತ್ತು ನಟಿ ರುಕ್ಮಿಣಿ ವಸಂತ್ ಅವರನ್ನು ಸಹ ಅನ್‌ಫಾಲೋ ಮಾಡಿರುವುದು ಹಲವು ಊಹಾಪೋಹಗಳಿಗೆ ಕಾರಣವಾಗಿದೆ.

ಈ ಹಿಂದೆ ರಿಷಬ್ ಮತ್ತು ರಾಜ್ ನಡುವೆ ವೈಮನಸ್ಸು ಇದೆ ಎಂಬ ವದಂತಿಗಳಿಗೆ ರಾಜ್ ಬಿ. ಶೆಟ್ಟಿ ಸ್ಪಷ್ಟನೆ ನೀಡಿ, 'ಯಾವುದೇ ಸಮಸ್ಯೆ ಇಲ್ಲ' ಎಂದು ಹೇಳಿದ್ದರು. ಆದರೆ ರಿಷಬ್ ಅವರ ಈ ನಡೆ ಅಭಿಮಾನಿಗಳಲ್ಲಿ ಅನುಮಾನ ಹೆಚ್ಚಿಸಿದೆ.





ವಿಶೇಷವೆಂದರೆ, ರಾಜ್ ಮತ್ತು ರುಕ್ಮಿಣಿ ಇನ್ನೂ ರಿಷಬ್ ಅವರನ್ನು ಫಾಲೋ ಮಾಡುತ್ತಿದ್ದಾರೆ. ಇದೇ ವೇಳೆ ಯುಗಾದಿ ಹಬ್ಬದಂದು ರಿಷಬ್ '2ನೇ ಅಧ್ಯಾಯ ಆರಂಭ' ಎಂಬ ಪೋಸ್ಟರ್ ಹಂಚಿಕೊಂಡಿದ್ದು, ಅದು 'ಕಾಂತಾರ' ಮುಂದುವರಿಕೆನಾ ಜೆಕ್ಟ್ ಎನ್ನುವ ಗೊಂದಲವೂ ಇದೆ. ಜೊತೆಗೆ ಹೊಂಬಾಳೆ ಬದಲು ತಮ್ಮದೇ ಬ್ಯಾನರ್ ಅಡಿಯಲ್ಲಿ ಸಿನಿಮಾ ಘೋಷಿಸಿರುವುದು ಭಿನ್ನಾಭಿಪ್ರಾಯದ ಸುದ್ದಿಗಳಿಗೆ ಮತ್ತಷ್ಟು ಇಂಧನ ಸುರಿದಂತಾಗಿದೆ. ☯



# ಏಪ್ರಿಲ್ 2ಕ್ಕೆ 'ರಾಮಾಯಣ' ಫಸ್ಟ್ ಲುಕ್ ಬಿಡುಗಡೆ

ರಾಕಿಂಗ್ ಸ್ಟಾರ್ ಯಶ್ ರಾವಣನಾಗಿ ಅಭಿನಯಿಸುತ್ತಿರುವ ಬಹುನಿರೀಕ್ಷಿತ ರಾಮಾಯಣ ಚಿತ್ರದ ಬಗ್ಗೆ ದೊಡ್ಡ ಅಪ್‌ಡೇಟ್ ಹೊರಬಂದಿದೆ. ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ರಾಮನವಮಿ ಅಂಗವಾಗಿ ಏಪ್ರಿಲ್ 2ರಂದು 'ರಾಮ'ನ ವಿಶೇಷ ತುಣುಕನ್ನು ವಿಶ್ವದಾದ್ಯಂತ ಬಿಡುಗಡೆ ಮಾಡುವುದಾಗಿ ಘೋಷಿಸಿದ್ದಾರೆ. ಹಲವು ವರ್ಷಗಳ ಪರಿಶ್ರಮದ ಬಳಿಕ ಚಿತ್ರದ ಮೊದಲ ನೋಟವನ್ನು ಅಭಿಮಾನಿಗಳಿಗೆ ಪರಿಚಯಿಸಲು ಚಿತ್ರತಂಡ ಸಜ್ಜಾಗಿದೆ. ಈ ಬಿಡುಗಡೆ ಕೇವಲ ಸಿನಿಮಾ ಅಪ್‌ಡೇಟ್ ಅಲ್ಲ, ವಿಶ್ವದ ರಾಮಭಕ್ತರಿಗೆ ವಿಶೇಷ ಸಂಭ್ರಮದ ಕ್ಷಣವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಈ ಮಹಾಕಾವ್ಯಾಧಾರಿತ ಚಿತ್ರದಲ್ಲಿ ರಣಬೀರ್ ಕಪೂರ್ ಶ್ರೀರಾಮನಾಗಿ, ಸಾಯಿ ಪಲ್ಲವಿ ಸೀತೆಯಾಗಿ ಮತ್ತು ಯಶ್ ದಶಕಂಠ ರಾವಣನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಸನ್ನಿ ಡಿಯೋಲ್ ಹನುಮಂತನಾಗಿ, ರವಿ ದುಬೆ ಲಕ್ಷ್ಮಣನಾಗಿ ನಟಿಸುತ್ತಿದ್ದಾರೆ. ಪ್ರೈಮ್ ಫೋಕಸ್ ಸ್ಟುಡಿಯೋಸ್, ಡಿಎನ್ಇಜಿ ಮತ್ತು ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಸಹಯೋಗದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರ ಐಮ್ಯಾಕ್ಸ್ ಆವೃತ್ತಿಯಲ್ಲಿ ತೆರೆಗೆ ಬರಲಿದೆ. ರಾಮಾಯಣ ಎರಡು ಭಾಗಗಳಲ್ಲಿ ಬಿಡುಗಡೆಯಾಗಲಿದ್ದು, ಮೊದಲ ಭಾಗ 2026ರ ದೀಪಾವಳಿ ಹಾಗೂ ಎರಡನೇ ಭಾಗ 2027ರ ದೀಪಾವಳಿಗೆ ವಿಶ್ವದಾದ್ಯಂತ ಬಿಡುಗಡೆಯಾಗಲಿದೆ. ☯

# ಸೆಲ್ಫಿ ವೇಳೆ ಹನಿ ರೋಸ್‌ಗೆ ಅಸಭ್ಯ ವರ್ತನೆ

ಕೇರಳದ ಕೋಝಿಕ್ಕೋಡ್‌ನಲ್ಲಿ ನಡೆದ ಆಭರಣ ಅಂಗಡಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಲಯಾಳಂ ನಟಿ ಹನಿ ರೋಸ್ ಅಸಹಜ ಅನುಭವಕ್ಕೆ ಒಳಗಾದ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿದ್ದರಿಂದ ಅವ್ಯವಸ್ಥೆ ಉಂಟಾಗಿ, ಸೆಲ್ಫಿ ತೆಗೆದುಕೊಳ್ಳುವ ವೇಳೆ ಕೆಲವರು ನಟಿಯ ಸೊಂಟಕ್ಕೆ ಕೈಹಾಕಿ ಅಸಭ್ಯವಾಗಿ ವರ್ತಿಸಿದ್ದಾರೆ. ತೆರೆದ ವೇದಿಕೆಯಲ್ಲಿ ಈ ಘಟನೆ ನಡೆದಿದ್ದು, ಭದ್ರತಾ ವ್ಯವಸ್ಥೆಗಳ ಕೊರತೆ ಮತ್ತೆ ಚರ್ಚೆಗೆ ಕಾರಣವಾಗಿದೆ.


ಈ ಸಂದರ್ಭದಲ್ಲಿ ಹನಿ ರೋಸ್ ಯಾವುದೇ ಗದ್ದಲ ಮಾಡದೆ, ಸಂಯಮದಿಂದ ವರ್ತಿಸಿ ಮೌನವಾಗಿ ಅಲ್ಲಿಂದ ಹೊರಟುಹೋದರು. ಇಂತಹ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವುದು ಆತಂಕಕಾರಿ ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಹಿಂದೆ ನಿಧಿ ಅಗರ್ವಾಲ್, ಕಾಜಲ್ ಅಗರ್ವಾಲ್, ರಶ್ಮಿ ಗೌತಮ್, ಮಂಜು ವಾರಿಯರ್ ಮುಂತಾದ ನಟಿಯರೂ ಇದೇ ರೀತಿಯ ಅನುಭವ ಎದುರಿಸಿದ್ದಾಗಿ ವರದಿಯಾಗಿದ್ದು, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಮಹಿಳಾ ಕಲಾವಿದರ ಸುರಕ್ಷತೆ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿದೆ. ☯





# ಪೆದ್ದಿ ಟೀಸರ್‌ನಲ್ಲಿ ಶಿವಣ್ಣ 'ಗುರು' ಪಾತ್ರ ರಿವೀಲ್





ರಾಮ್‌ಚರಣ್ ಅಭಿನಯದ ಬಹುನಿರೀಕ್ಷಿತ ಪೆದ್ದಿ ಚಿತ್ರದ ಟೀಸರ್ ಬಿಡುಗಡೆಯಾಗಿ ಸಿನಿ ಪ್ರೇಕ್ಷಕರ ಗಮನ ಸೆಳೆದಿದೆ. ಈ ಚಿತ್ರದಲ್ಲಿ ನಟ ಶಿವರಾಜ್‌ಕುಮಾರ್ 'ಗೌರನಾಯ್ಡು' ಎಂಬ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈಗ ಖಚಿತವಾಗಿದೆ. ಟೀಸರ್‌ನಲ್ಲಿ ರಾಮ್‌ಚರಣ್ ಕುಸ್ತಿಪಟುವಾಗಿ ಕಾಣಿಸಿಕೊಂಡಿದ್ದು, ಲಂಗೋಟಿ ಧರಿಸಿ ಅಖಾಡದಲ್ಲಿ ಕುಸ್ತಿ ಆಡುತ್ತಿರುವ ದೃಶ್ಯಗಳು ಗಮನ ಸೆಳೆಯುತ್ತಿವೆ. ಈ ಮೂಲಕ ಮೊದಲು ಊಹಿಸಿದ್ದ ಹಳ್ಳಿ ಕ್ರಿಕೆಟಿಗನ ಪಾತ್ರಕ್ಕಿಂತ ಭಿನ್ನವಾಗಿ ಹೊಸ ಅವತಾರದಲ್ಲಿ ರಾಮ್‌ಚರಣ್ ಕಾಣಿಸಿಕೊಂಡಿದ್ದಾರೆ.

ಶಿವರಾಜ್‌ಕುಮಾರ್ ಈ ಚಿತ್ರದಲ್ಲಿ ರಾಮ್‌ಚರಣ್‌ಗೆ ಕುಸ್ತಿ ತರಬೇತಿ ನೀಡುವ ಗುರುವಿನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಕನ್ನಡ ಟೀಸರ್‌ಗೆ ಶಿವಣ್ಣ ಅವರೇ ಧ್ವನಿ ನೀಡಿದ್ದು, 'ಕುಸ್ತಿ ಅಂದರೆ ಬ್ಯಾಟಿನಿಂದ ಬಾಲ್ ಹೊಡೆಯೋ ಆಟ ಅಲ್ಲ' ಎಂಬ ಸಂಭಾಷಣೆ ವಿಶೇಷ ಗಮನ ಸೆಳೆದಿದೆ. ನಿರ್ದೇಶಕ ಬುಚ್ಚಿಬಾಬು ಸನಾ ಅವರು ಈ ಪಾತ್ರಕ್ಕೆ ಶಿವಣ್ಣನೇ ಬೇಕೆಂದು ಕಾದು ಅವರನ್ನು ಆಯ್ಕೆ ಮಾಡಿಕೊಂಡಿರುವುದು ವಿಶೇಷ. ಜಾನ್ವವಿ ಕಪೂರ್ ನಾಯಕಿಯಾಗಿ ನಟಿಸಿರುವ ಈ ಚಿತ್ರಕ್ಕೆ ಎ.ಆರ್. ರೆಹಮಾನ್ ಸಂಗೀತ ನೀಡಿದ್ದು, ಮೈತ್ರಿ ಮೂವಿ ಮೇಕರ್ಸ್ ನಿರ್ಮಾಣ ಮಾಡುತ್ತಿದೆ. ☯



# ಮಂಗ್ಲಿ ಹಗರಣ ವದಂತಿಗೆ ಖಡಕ್ ಸ್ಪಷ್ಟನೆ

ದಕ್ಷಿಣ ಭಾರತದ ಖ್ಯಾತ ಜಾನಪದ ಗಾಯಕಿ ಮಂಗ್ಲಿ ಮತ್ತೆ ವಿವಾದದ ಕೇಂದ್ರಬಿಂದುವಾಗಿದ್ದಾರೆ. ಇತ್ತೀಚೆಗೆ ಅವರ ಹೆಸರಿನಲ್ಲಿ 150 ಕೋಟಿ ರೂಪಾಯಿ ಮೈಕ್ರೋ ಫೈನಾನ್ಸ್ ಹಗರಣ ನಡೆದಿದೆ ಎಂಬ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಸದ್ದು ಮಾಡಿದೆ. ಮಂಗ್ಲಿ ಮತ್ತು ಅವರ ಸಹೋದರ ಶಿವ ಅವರ ಹೆಸರು ಬಳಸಿ ಜನರನ್ನು ವಂಚಿಸಲಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದು, ಯೂಟ್ಯೂಬ್ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ನೋಟಿನ ಕಂತೆಗಳಿರುವ ವಿಡಿಯೋಗಳನ್ನು ಹಂಚಿ, ಅದು ಮಂಗ್ಲಿ ಮನೆಗೆ ಸಂಬಂಧಿಸಿದೆ ಎಂದು ಸುಳ್ಳು ಪ್ರಚಾರ ಮಾಡಲಾಗಿದೆ. ಈ ವದಂತಿಗಳು ವೈರಲ್ ಆಗುತ್ತಿದ್ದಂತೆ ಅಭಿಮಾನಿಗಳು ಮತ್ತು ಸಾರ್ವಜನಿಕರಲ್ಲಿ ಆತಂಕ ಮೂಡಿದೆ.

ಈ ಆರೋಪಗಳಿಗೆ ಪ್ರತಿಕ್ರಿಯಿಸಿರುವ ಮಂಗ್ಲಿ, ತಮ್ಮ ಇನ್‌ಸ್ಟಾಗ್ರಾಮ್ ಮೂಲಕ ಖಡಕ್ ಸ್ಪಷ್ಟನೆ ನೀಡಿ, 'ನನಗೂ ಅಥವಾ ನನ್ನ ಕುಟುಂಬಕ್ಕೂ ಈ ವ್ಯವಹಾರಕ್ಕೂ ಯಾವುದೇ ಸಂಬಂಧವಿಲ್ಲ' ಎಂದು ತಿಳಿಸಿದ್ದಾರೆ. ತಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಅವರು, ಯಾರಾದರೂ ತಮ್ಮ ಹೆಸರಿನಲ್ಲಿ ಹಣ ಕೇಳಿದರೆ ನಂಬಬಾರದು ಎಂದು ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಹಲವು ವಿವಾದಗಳಲ್ಲಿ ಮಂಗ್ಲಿ ಹೆಸರು ಕೇಳಿಬರುತ್ತಿರುವುದು ಗಮನಾರ್ಹವಾಗಿದ್ದು, ಈ ಪ್ರಕರಣದ ಬಗ್ಗೆ ಪೊಲೀಸ್ ತನಿಖೆಯ ನಂತರವೇ ನಿಜಾಂಶ ಹೊರಬೀಳಲಿದೆ. ☯

Vol. 41 No. 43 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news